

ಮರುಭೂಮಿಗೆ ಮಾರುಹೋದವರು

ಸಾಹಿತ್ಯ: ಡಾ. ವಿದ್ಯಾಮನೋಹರ
ಚಿತ್ರ: ಡಾ. ಮನೋಹರ ಉಪಾಧ್ಯ

ಮರುಭೂಮಿಗೆ ಮಾರುಹೋದವರು

ಸಾಹಿತ್ಯ: ಡಾ. ವಿದ್ಯಾಮನೋಹರ । ಚಿತ್ರ: ಡಾ. ಮನೋಹರ ಉಪಾಧ್ಯ

ನೆಲ, ಕಲೆ, ಚಿತ್ರ, ಸಂಸ್ಕೃತಿ, ಪ್ರಾಣಿ, ಪಕ್ಷಿ, ಪರಿಸರಗಳಲ್ಲಿ ರಂಗು ರಂಗಾಗಿರುವ ರಾಜಸ್ಥಾನ ಸಹಜವಾಗಿಯೇ ನಮ್ಮನ್ನು ಕೈಬೀಸಿ ಕರೆದಿತ್ತು. ಕೆಲ ವರ್ಷಗಳ ಹಿಂದೆ, ಜೈಪುರ ನೋಡಿದಾಗ ಹುಟ್ಟಿದ ಉತ್ಸಾಹ, ಈ ಸಲ ಜೋಧಪುರ, ಜೈಸಲ್ಮೇರ್‌ಗಳೆಡೆಗೆ ಸೆಳೆಯಿತು. ಜನವರಿ ೨೬, ೨೦೧೪ ರಿಂದ ಜನವರಿ ೩೧, ೨೦೧೪ ರವರೆಗೆ ನಡೆದ ನಮ್ಮ ಪ್ರವಾಸ, ಸಾಕ್ಷರವಾಗಿ, 'ಮರುಭೂಮಿಗೆ ಮಾರುಹೋಗಿ'ಯಾಗಿದೆ. ಇದಕ್ಕೆ ಕಾರಣ, ಆತ್ಮೀಯ ಹಿರಿಯರಾದ ಶ್ರೀ ಜಿ. ಎನ್. ಅಶೋಕವರ್ಧನರ ಒತ್ತಾಯ ಮತ್ತು ಪ್ರೋತ್ಸಾಹ. ಈ ಬರವಣಿಗೆಯ ಸಮಯದಲ್ಲಿ, ಪ್ರವಾಸದ ನೆನಪುಗಳು ಮೆಲುಕಿಗೆ ಸಿಕ್ಕಿದ್ದು, ಮುಂದೆ ಓದುಗರೊಂದಿಗೆ ಹಂಚಿಕೊಳ್ಳುವಾಗ, ಆ ಖುಶಿ ನೂರ್ಮಡಿಗೊಳ್ಳಲಿರುವುದು. ಇದನ್ನು ಸಾಧ್ಯವಾಗಿಸಿರುವ ಅವರಿಗೆ ನಾನು ಆಭಾರಿ. ಲೇಖನ ಮಾಲಿಕೆಯನ್ನೂ, ವಿ–ಪುಸ್ತಕವನ್ನೂ ಅಂತರ್ಜಾಲದಲ್ಲಿ ಪ್ರಕಟಿಸುವಲ್ಲಿ ಸಹಕರಿಸಿದ್ದು ಶ್ರೀ ಅಭಯ ಸಿಂಹ.





ಅತ್ರಿ ವಿ–ಪುಸ್ತಕಗಳು
ಅಭಯಾದ್ರಿ, ಪಿಂಟೋರವರ ಓಣಿ, ಕರಂಗಲ್ಪಾಡಿ, ಮಂಗಳೂರು ೫೭೫೦೦೩
ದೂರವಾಣಿ: ೦೮೨೪–೨೪೯೨೪೭೬ । ಮಿಂಚಂಚೆ: athreebook@gmail.com | ಜಾಲತಾಣ: www.athreebook.com

ಜೋಧ 'ಪುರ ಪ್ರವೇಶ'
(ಮೊದಲದಿನ)



"ಮರಳಿನ ಮರುಳು ನಿಮಗೆ, ಹೊಯಿಗೆ ರಾಶಿ ನೋಡಲಿಕ್ಕೆ ಅಷ್ಟು ದೂರದ ರಾಜಸ್ಥಾನಕ್ಕೆ ಹೋಗಬೇಕಾ? ನಿಮ್ಮ ಹುಟ್ಟೂರ ಪಡುಕೆರೆ ಬೀಚಿಗೆ ಹೋದ್ರೆ ಸಾಲದಾ?' ನಮ್ಮ ಈ ವರ್ಷದ ಪ್ರವಾಸ ರಾಜಸ್ಥಾನದ ಜೈಸಲ್ಮೇರ್; ಅಲ್ಲಿಂದ ಮುಂದೆ ಮರುಭೂಮಿಯ ಕಡೆಗೆ ಎಂದು ಮನೋಹರ್ ಘೋಷಿಸಿದಾಗ, ನನ್ನ ಪ್ರತಿಕ್ರಿಯೆ. ಮಾಮೂಲಿನಂತೆ, ನನ್ನ ಯಾವ ಮಾತನ್ನೂ ಗಂಭೀರವಾಗಿ ಪರಿಗಣಿಸದೇ, ಸುಮರು ೮-೧೦ ರಾತ್ರಿಗಳನ್ನು ಇಂಟರ್ನೆಟ್ ನಲ್ಲಿ ಜಾಲಾಡುತ್ತಾ ಕಳೆದರು.ದಿನಾ ಬೆಳಿಗ್ಗೆ, ತನ್ನ ಶೋಧನೆಯ ಫಲಿತಾಂಶಗಳನ್ನು ನನಗೂ, ಮಗನಿಗೂ ತಿಳಿಸುವುದು; ನಾವು ಕೆಲವನ್ನು ಒಪ್ಪಿ ಹಲವನ್ನು ಬಿಡುವುದೂ ನಡೆಯಿತು.ಅಪ್ಪ ಹೇಳಿದ್ದಕ್ಕೆ ಮಗ, ಮಗ ಹೇಳಿದ್ದಕ್ಕೆ ಅಮ್ಮ, ಹೆಂಡತಿ ಹೇಳಿದ್ದಕ್ಕೆ ಗಂಡ ಹೀಗೆ,ಮೂರು ಜನ ನಾಲ್ಕು ದಿಕ್ಕುಗಳಿಗೆ ಎಳೆದು ಚರ್ಚಿಸಿದೆವು. ಅದು ಬೇಕು, ಇದು ಬೇಡ ಅಂತ ಹಗ್ಗ ಜಗ್ಗಾಟ ನಡೆದು, ಅಂತೂ ಪ್ರವಾಸದ ನೀಲ ನಕ್ಷೆ ಸಿದ್ಧವಾಯಿತು.



ಮಂಗಳೂರಿನಿಂದ – ಜೋಧಪುರ–ಜೈಸಲ್ಮೇರ್–ಜೋಧಪುರ–ಮಂಗಳೂರು; ೬ ದಿನಗಳ ಪ್ರವಾಸ. ಜೋಧಪುರ ಮತ್ತು ಜೈಸಲ್ಮೇರ್ ಸುತ್ತು ಮುತ್ತಲಿನ ಪ್ರಾಣಿ, ಪಕ್ಷಿ, ಪರಿಸರ, ಅರಮನೆ, ಕೋಟೆ, ಚಿತ್ರಕಲೆ, ಶಿಲ್ಪಕಲೆ, ಲೋಕ ಸಂಗೀತ ಮುಂತಾದ ಅಂಶಗಳನ್ನು ಒಳಗೊಂಡು, ಮರುಭೂಮಿಯ ಅನುಭವವನ್ನೂಪಡಕೊಂಡು ಬರುವುದೆಂದು ಒಮ್ಮತಕ್ಕೆ ಬಂದೆವು.



ಮಂಗಳೂರಿನಿಂದ ವಿಮಾನದಲ್ಲಿ ಮುಂಬಯಿ ಮಾರ್ಗವಾಗಿ ಜೋಧಪುರಕ್ಕೆ, ಅದೇ ರೀತಿಯಲ್ಲಿ ವಾಪಾಸು ಬರುವುದೆಂದೂ, ಜೋಧಪುರದಿಂದ ಬಾಡಿಗೆ ಕಾರಿನಲ್ಲಿ ಜೈಸಲ್ಮೇರ್ ವರೆಗೆ ಹೋಗುವಾಗ ಹಾಗೂ ವಾಪಾಸು ಜೋಧಪುರಕ್ಕೆ ಬರುವಾಗ ಸಿಗುವ, ನಮ್ಮ ಆಸಕ್ತಿಯ ಸ್ಥಳಗಳ ಭೇಟಿ, ಆಮೇಲೆ ಜೋಧಪುರ ಮತ್ತು ಅಲ್ಲಿನ ಹತ್ತಿರದ ಜಾಗಗಳನ್ನು ನೋಡುವುದು ಎಂದು ಮನೋಹರ್ ನಿರ್ಧರಿಸಿದರು.ಈ ಬಗ್ಗೆ ಬೇಕಾದ ಮಾಹಿತಿ ಸಂಗ್ರಹಣೆಯೂ ಆಯಿತು.



ಮೂರೂ ಜನರ ರಜೆ, ಅನುಕೂಲ, ಅಲ್ಲಿನ ಹವೆ, ವಿಮಾನದ ದರ ಮುಂತಾದವುಗಳನ್ನೆಲ್ಲಾ ಗಮನಿಸಿ, ದಿನಾಂಕ ನಿಗದಿ ಮಾಡಿ, ಟಿಕೇಟು ಖರೀದಿ, ಹೋಟೆಲ್ಲುಗಳಲ್ಲಿ ರೂಂ ಕಾದಿರಿಸುವಿಕೆಗಳೂ ನಡೆದವು.ಇಷ್ಟೆಲ್ಲಾ ಆದ ಮೇಲೆ, ಮಗ ಸುಧನ್ವನ ಪರೀಕ್ಷೆ ವೇಳಾ ಪಟ್ಟಿಯನ್ನು ಅವನ ವಿಶ್ವವಿದ್ಯಾನಿಲಯ ಹಠಾತ್ತಾಗಿ ಬದಲಾಯಿಸಿದ್ದರಿಂದ, ನಮ್ಮ ಪ್ರವಾಸದ ದಿನಾಂಕಗಳೂ ಬದಲಾದವು.ಮತ್ತೆ ಎಲ್ಲಾ ವ್ಯವಸ್ಥೆಗಳೂ ನಡೆದವು; ಸಾಕಷ್ಟು ದುಡ್ಡೂ ಕಳೆಯಿತು.ಅಂತೂ, ಇಂತೂ ಜನವರಿ ೨೬, ೨೦೧೪ ರಂದು ಮಂಗಳೂರಿನಿಂದ ಹೊರಡುವುದೆಂದೂ, ಜನವರಿ ೩೧ ರಂದು ವಾಪಾಸು ಬರುವುದೆಂದೂ ನಿಗದಿಯಾಯಿತು.ವಾಪಾಸು ಬರುವಾಗ ಮುಂಬಯಿಯಲ್ಲಿ ನಾವಿಬ್ಬರು; ಗಂಡ– ಹೆಂಡತಿ ಮಂಗಳೂರಿನ ವಿಮಾನ ಏರಿದರೆ, ಮಗ ಸುಧನ್ವ ಅಲ್ಲಿಂದಲೇ ಬೆಂಗಳೂರಿಗೆ ತೆರಳುವುದೆಂದು ಯೋಜನೆ ಹಾಕಿಕೊಂಡೆವು.

ಪ್ರವಾಸಕ್ಕೆ ಹೊರಡುವ ಹಿಂದಿನ ದಿನ ನಮ್ಮ ತಯಾರಿಗಳು ಬಿರುಸಿನಲ್ಲಿ ನಡೆದವು. ಮನೆ, ಒಂದು ರಣರಂಗದಂತೇ ಕಂಗೊಳಿಸುತ್ತಿತ್ತು. ನೆಲ, ಮೇಜು, ಕುರ್ಚಿ, ಮಂಚಗಳ ಮೇಲೆಲ್ಲಾ ಮೂರೂ ಜನರ, ಟೋಪಿ, ಮಫ್ಲರ್, ಮಂಕಿ ಕ್ಯಾಪ್‍ಗಳೇ ಮುಂತಾದ ಶಿರಸ್ತ್ರಾಣಗಳು, ಜ್ಯಾಕೆಟ್, ಸ್ವೆಟರ್, ಗ್ಲೌಸ್, ಶೂ, ಸಾಕ್ಸ್, ಚಪ್ಪಲಿ, ಬೂಟ್ ಗಳೆಂಬ ರಕ್ಷಣಾ ಕವಚಗಳೂ, ಶೀತ, ಕೆಮ್ಮು, ವಾಂತಿ, ಭೇದಿಗಳಿದಿರು ಹೋರಾಡಲು ಆಲೋಪತಿ, ಹೋಮಿಯೋಪತಿ, ಕಷಾಯ ಪುಡಿ ಔಷಧಗಳೂ, ನೀರಿನ ಬಾಟಲಿಗಳೂ, ಚಿಕ್ಕಿ, ಚಿಪ್ಸ್, ಒಣ ದ್ರಾಕ್ಷಿ, ಗೋಡಂಬಿ ಸಂಗ್ರಹವೂ ತರತರದ, ವಿವಿಧ ಗಾತ್ರದ, ಚಕ್ರವಿರುವ, ಇಲ್ಲದಿರುವ, ಬ್ಯಾಗ್, ಕೈ ಚೀಲಗಳೂ, ಮೊಬೈಲ್, ಕ್ಯಾಮೆರಾ ಬ್ಯಾಟರಿ ಚಾರ್ಜರ್ ಗಳೂ ಹರಡಿ ಬಿದ್ದಿದ್ದವು. ನಾವು ಅಫಘಾನಿಸ್ಥಾನದ ಯುದ್ಧ ಭೂಮಿಗೋ, ಸೋಮಾಲಿಯಾದ ಬರಡು ಭೂಮಿಗೋ ಹೋಗುತ್ತಿದ್ದೇವೆ ಎಂಬ ಸಂಶಯ ಯಾರಿಗಾದರೂ ಬರುವಂತಿತ್ತು.

ಜನವರಿ ೨೬ ರ ಬೆಳಿಗ್ಗೆ ೬.೩೦ ಕ್ಕೆ ಮಂಗಳೂರಿನಿಂದ ವಿಮಾನವೇರಿ ಮುಂಬಯಿಗೆ ಬಂದಿಳಿದೆವು. ಮುಂಬಯಿ ತಲಪಿದ ಕೂಡಲೇ, ನಿಲ್ದಾಣದ ಹೊರಗಿದ್ದ ಹೋಟೆಲ್ ಒಂದರಲ್ಲಿ ತಿಂಡಿ ತಿಂದೆವು. ಮತ್ತೆ ವಿಮಾನ ಬದಲಾಯಿಸಿ ಜೋಧಪುರಕ್ಕೆ ತೆರಳಬೇಕಿತ್ತು. ಮುಂಬಯಿ ವಿಮಾನ ನಿಲ್ದಾಣದಲ್ಲಿ ಮೂರು ಗಂಟೆಗಳ ಕಾಲ ಕಾಯಬೇಕಾಗಿತ್ತು. ಅಲ್ಲಿರುವಾಗಲೇ, ನಾವು ನಿಗದಿ ಮಾಡಿದ್ದ ಜೋಧಪುರದ ಬಾಡಿಗೆ ಕಾರಿನ ಚಾಲಕ ಫೋನ್ ಮಾಡಿ, ತಾನು ಮಧ್ಯಾಹ್ನ ೧ ಗಂಟೆಗೇ ವಿಮಾನ ನಿಲ್ದಾಣಕ್ಕೆ ಬಂದು ತಯಾರಾಗಿರುತ್ತೇನೆಂದೂ ತಿಳಿಸಿದರು.

ಮುಂಬಯಿಯಿಂದ ಮತ್ತೆ ವಿಮಾನವೇರಿ ಜೋಧಪುರದೆಡೆಗೆ ಸಾಗು□□ಗ ಸುಮಾರು ಹೊತ್ತಾಗಿತ್ತಾದ್ದರಿಂದ, ಹಸಿವಿನ ಅನುಭವವೂ ಸುರುವಾಗಿತ್ತು. ವಿಮಾನದಲ್ಲಿ ಸಸ್ಯಾಹಾರಿ ತಿಂಡಿಯನ್ನು ಕೊಟ್ಟಾಗ ಊಟದ ಬದಲು ಇದನ್ನೇ ತಿಂದರಾಯಿತು ಎಂದುಕೊಂಡೆವು. ಚೀಸ್ ಮತ್ತು ವೆಜ್ ಸ್ಯಾಂಡ್‍ವಿಚ್‍ನ್ನು 'ಏನೂ ತೊಂದರೆಯಿಲ್ಲ'ವೆಂದುಕೊಂಡು, ನಾನು ಸ್ವಲ್ಪ, ಸುಧನ್ವ ಸ್ವಲ್ಪ ಹೆಚ್ಚೇ ತಿಂದೆವು. ಮನೋಹರ್ ನಿದ್ದೆ ಮಾಡಿದ್ದರಿಂದ, ಅವರಿಗೆ ಈ 'ಭಾಗ್ಯ' ಸಿಗಲಿಲ್ಲ. ಮಧ್ಯಾಹ್ನ ೧.೩೦ಕ್ಕೆ ಜೋಧಪುರದಲ್ಲಿ ವಿಮಾನವಿಳಿಯಿತು.

ಕೊಟ್ಟ ಮಾತಿಗೆ ತಪ್ಪದ ಸಾರಥಿ ನಮಗಾಗಿ ಕಾಯುತ್ತಿದ್ದರು. ಫೋನಿಸಿ, ಹುಡುಕಿ ಹಿಡಿದಾಗ, 'ರಾಂ ರಾಂ ಬಾವುಜೀ' ಎನ್ನುತ್ತಾ ಪರಿಚಯಿಸಿಕೊಂಡರು ಹೇಮಜೀ. ನಮ್ಮ ಲಗೇಜನೆಲ್ಲಾ ಕಾರಿನ ಢಿಕ್ಕಿಯಲ್ಲಿ ಹಾಕಿ, ಆರಾಮಾಗಿ ಕುಳಿತುಕೊಂಡೆವು; ಜೋಧ 'ಪುರ ಪ್ರವೇಶ'ಕ್ಕೆ ನಾವು ರೆಡಿ ಎಂದೆವು.

ಹೇಮಜೀ ಎಂಬ 'ಮಾರ್ಗ'ದರ್ಶಿ

"ಪೆಹಲೇ ಕಹಾ ಚಲೇ?" ಎಂದು ಹೇಮಜೀ ಕೇಳಿದಾಗಲೇ ಅರಿವಾದದ್ದು ನಾವು ನಮ್ಮ ಪ್ರವಾಸದ ರೂಪುರೇಷೆಗಳನ್ನು ಅವರಿಗಿನ್ನೂ ಹೇಳಿಲ್ಲವೆಂದು. ಜೋಧಪುರದಲ್ಲಿ ವಾಸಿಸುತ್ತಿರುವ, ಕನ್ನಡ ಬಲ್ಲ ವ್ಯಾಪಾರಿಯೊಬ್ಬರ ಪರಿಚಯ, ಕೆಲ ದಿನಗಳ ಹಿಂದೆ ಆಗಿತ್ತು. ಅವರ ಮೂಲಕವೇ ನಾವು ಈ ಬಾಡಿಗೆ ಕಾರನ್ನು ಗೊತ್ತುಪಡಿಸಿಕೊಂಡಿದ್ದೆವು. ಮೊದಲು ಅವರನ್ನು ಭೇಟಿಯಾಗಿ ಮುಂದಿನ ಪ್ರವಾಸದ ಬಗ್ಗೆ ಚರ್ಚಿಸಬೇಕೆಂದಿದ್ದೆವು. ಅವರ ಮೊಬೈಲಿಗೆ ಕರೆ ಮಾಡಿ ನಾವು ಜೋಧಪುರ ತಲಪಿರುವುದಾಗಿಯೂ, ಅವರನ್ನು ಭೇಟಿ ಮಾಡಲು ಇಚ್ಛಿಸುತ್ತಿರುವುದಾಗಿಯೂ ತಿಳಿಸಿದೆವು. ಅವರ ಆದೇಶದಂತೆ ಮೊಬೈಲ್ ಫೋನನ್ನು ಹೇಮಜೀಯವರಿಗೆ ಕೊಟ್ಟು ಮಾತಾಡಲು ತಿಳಿಸಿದೆವು. ರಾಜಸ್ಥಾನೀ ಭಾಷೆಯಲ್ಲಿ ಮಾತಾಡಿಕೊಂಡ ಅವರು ಕಾರನ್ನು ನಿಲ್ದಾಣದಿಂದ ಹೊರತಂದು, ಜೋಧಪುರ ಪಟ್ಟಣದೆಡೆಗೆ ತಿರುಗಿಸಿದರು. ಕಾರು, ಕೆಲವು ಮೀಟರುಗಳಷ್ಟು ದೂರ ಬರುತ್ತಿದ್ದಂತೇ, ಒಂದು ಸುಂದರವಾದ ಆವರಣ ಗೋಡೆ ಕಂಡು ಬಂತು.ಯಾವುದೋ ವಿಶಾಲವಾದ ಹಾಗೂ ಮುಖ್ಯವಾದ ಕಟ್ಟಡಗಳಿರುವ ಜಾಗವಿರಬಹುದೆಂದು, ಡ್ರೈವರನ್ನು "ಇಲ್ಲಿ ಏನಿದೆ?"ಎಂದು ಕೇಳಿದೆ. ಈ ಸ್ಥಳ ಆರ್ಮಿಯವರಿಗೆ ಸೇರಿದ್ದು ಎಂದು ತಿಳಿಸಿದರು. ಯುದ್ಧ, ರಕ್ಷಣೆ, ತ್ಯಾಗ, ಬಲಿದಾನಗಳಿಗೆ ಬದ್ಧರಾಗಿರುವ, ಗಟ್ಟಿ ದೇಹ, ಮನಸ್ಸಿನ ಸೈನಿಕರಿಗೆ ಸಂಬಂಧಿಸಿದ ಜಾಗದ ಆವರಣ ಗೋಡೆಯನ್ನು ಎಷ್ಟು ನಾಜೂಕಾಗಿ, ಸುಂದರವಾಗಿ ಅಲಂಕರಿಸಿದ್ದಾರೆ! ಎಂದು ಅನಿಸಿತು.ಒಂದೆರಡು ಕಿಲೋ ಮೀಟರುಗಳಷ್ಟಿರುವ, ಗುಲಾಬಿ ಬಣ್ಣದ ಈ ಆವರಣ ಗೋಡೆಯ ತುಂಬಾ ಚೆಂದಚೆಂದದ, ಬಣ್ಣ ಬಣ್ಣದ ಚಿತ್ರಗಳನ್ನು ಬಿಡಿಸಿದ್ದಾರೆ.ಇನ್ನೂ ಕೆಲವು ಕಡೆ ಕಲಾವಿದರು ಚಿತ್ರ ಬಿಡಿಸುತ್ತಲೂ ಇದ್ದರು. ಬಹುಶಃ ಈಗ ನವೀಕರಣಗೊಳಿಸುತ್ತಿದ್ದಾರೆ ಎಂದು ಅನಿಸಿತು. ನಮಗೆ ಯಾರೋ ಭಿತ್ತಿ ಚಿತ್ತಾರದ ಪುಷ್ಪ ಗುಚ್ಛವಿತ್ತು ಸ್ವಾಗತಿಸುತ್ತಿರುವಂತೆ, ರಾಜಸ್ಥಾನ – ಜೋಧಪುರದ ಒಂದು ಝಲಕ್ ನ್ನು ಇದು ತೋರಿಸುತ್ತಿರುವಂತೆ ಅನಿಸಿತು. ಆಗ ತಕ್ಷಣ, ವಿಮಾನ ನಿಲ್ದಾಣದ ಕಟ್ಟಡವೂ ಕಲಾತ್ಮಕವಾಗಿಯೇ ಇತ್ತಲ್ಲಾ ಎಂದು ನೆನಪಾಯಿತು. ಅಂತೂ ನಮ್ಮ ಮುಂದಿನ ದಿನಗಳ ಅನುಭವ ಹೇಗಿರಬಹುದು? ಎಂದು ರುಚಿ ತೋರಿಸಿದಂತೆ ಭಾಸವಾಯಿತು. ಫಕ್ಕನೆ, ಈ ಭಿತ್ತಿ ಚಿತ್ತಾರದ ಫೋಟೋ ತೆಗೆಯಬೇಕೆಂದೆನಿಸಿ, ಮನೋಹರ್ ಗೆ ಹೇಳಿದೆ. ಅವರು 'ಕ್ಯಾಮರಾ ಬ್ಯಾಗ್ ಢಿಕ್ಕಿಯಲ್ಲಿದೆ, ವಾಪಾಸು ಬರುವಾಗ ನೆನಪಿಸು, ತೆಗೆಯುತ್ತೇನೆ' ಎಂದರು.

ಮುಂದೆ ಕೆಲವೇ ನಿಮಿಷಗಳಲ್ಲಿ ನಾವು ಭೇಟಿ ಮಾಡಬೇಕಾದವರ ಮನೆಯ ಸಮೀಪ ಬಂದಿದ್ದೆವು. ಕಾರು ನಿಲ್ಲಿಸಿದ್ದ ಜಾಗದ ಪಕ್ಕದಲ್ಲಿ, ರಸ್ಥೆಯ ಬದಿಯಲ್ಲಿ, ಮರದ ಮೇಜಿನ ಮೇಲೆ, ನೀರು ತುಂಬಿದ ಕೆಲವು ಮಣ್ಣಿನ ಮಡಿಕೆಗಳನ್ನಿಟ್ಟಿದ್ದರು. ಆ ಜಾಗಕ್ಕೆ ಹುಲ್ಲಿನ ಮಾಡಿನ ವ್ಯವಸ್ಥೆ ಕೂಡಾ ಇತ್ತು. ಓ! ಇದು ಅರವಟ್ಟಿಗೆ ಇರಬೇಕು ಎಂದು ತಿಳಿದೆ.ಜೋಧಪುರ ನಗರ ಸಾಕಷ್ಟು ದೊಡ್ಡದೇ, ಅಂಗಡಿಗಳೂ, ಪ್ಲಾಸ್ಟಿಕ್ ಬಾಟಲಿಗಳಲ್ಲಿ ನೀರೂ ಸುಲಭವಾಗಿ ಸಿಗುತ್ತವೆ. ಹಾಗಿದ್ದರೂ, ರಸ್ತೆ ಬದಿಯಲ್ಲಿ ಪುಕ್ಕಟೆ ನೀರಿನ ವ್ಯವಸ್ಥೆಯನ್ನು ಮಾಡುತ್ತಿದ್ದಾರಲ್ಲಾ! ಎಂದು ಅಚ್ಚರಿಯಾಯಿತು.

ಅಷ್ಟರಲ್ಲೇ ಕಾರಿನ ಬಳಿ ಬಂದ ವ್ಯಾಪಾರಸ್ಥರು, ನಮ್ಮನ್ನು ತಮ್ಮ ಮನೆಗೆ ಕರಕೊಂಡು ಹೋದರು. ಹಸಿರು ಹುಲ್ಲು ಹಾಸಿದ ಅಂಗಳದಲ್ಲೇ ಖುರ್ಚಿಗಳನ್ನು ಹಾಕಿದ್ದರು. ರಾಜಸ್ಥಾನವೆಂದರೆ, ಬರಡು ಭೂಮಿಯೆಂದೇ ಭ್ರಮಿಸಿದ್ದ ನನಗೆ, ಸಾಕಷ್ಟು ನೀರು ಬೇಡುವ ಹಸಿರು ಹುಲ್ಲು ಹಾಸನ್ನು ನೋಡಿ ಆಶ್ಚರ್ಯವಾಯಿತು. ಗಂಗಾ ನದಿ ನೀರಿನಿಂದ ಇದು ನಳನಳಿಸುತ್ತಿದೆ ಎಂದು ನನ್ನ ಮನದ ಇಂಗಿತವನ್ನು ಅರಿತವರಂತೆ ತಿಳಿಸಿದರು. ಕಾಲುವೆಗಳ ಮೂಲಕ ನದಿ ನೀರಿನ ವ್ಯವಸ್ಥೆ ಆಗಿರುವುದರಿಂದ, ಇಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ; ಪರಿಸ್ಥಿತಿ ಸುಧಾರಿಸಿದೆ ಎಂದರು. ನಿಮಗೂ ಏನೂ ತೊಂದರೆಯಾಗದು, ನೀವು ಹೋಗುವಲ್ಲೆಲ್ಲಾ ಪ್ರವಾಸಿಗರಿಗೆ ಬೇಕಾಗುವ ಎಲ್ಲಾ ವ್ಯವಸ್ಥೆಗಳಿವೆ ಎಂದು ತಿಳಿಸಿದರು.




ಚಳಿಗಾಲದಲ್ಲಿ ಬಿಸಿಲು ಕಾಯಿಸುತ್ತಾ ಹೀಗೆ ಅಂಗಳದಲ್ಲೇ ಕುಳಿತಿರಲು ಹಿತವೆನಿಸುತ್ತದೆ ಎನ್ನುತ್ತಾ ತಿಂಡಿ ಪಾನೀಯಗಳನ್ನಿತ್ತು ಸತ್ಕರಿಸಿದರು. ನಾವು ಹೋಗಬೇಕೆಂದಿರುವ ಸ್ಥಳಗಳನ್ನೆಲ್ಲಾ ಅವರಿಗೆ ತಿಳಿಸಿ, ಅದರ ಬಗ್ಗೆ ಚರ್ಚಿಸಿದೆವು. ಸಾಕಷ್ಟು ಮಾಹಿತಿಯನ್ನೂ ಪಡೆದೆವು. ಹೇಮಜೀಯವರನ್ನು ಕರೆದು, ಅವರಿಗೆ ಅರ್ಥವಾಗುವಂತೆ ರಾಜಸ್ಥಾನೀ ಭಾಷೆಯಲ್ಲಿ ನಮ್ಮ ಪ್ರಯಾಣದ ಯೋಜನೆಗಳನ್ನೆಲ್ಲಾ ತಿಳಿಸಿದರು. ಹೇಮಜೀಯವರಿಗೂ ಸಾಕಷ್ಟು ತಿಳಿದಿದೆ ಎಂದು ಅನಿಸಿತು. ವ್ಯಾಪಾರಸ್ಥರು, ನಿಮ್ಮ ಡ್ರೈವರ್ ತುಂಬಾ ಒಳ್ಳೆಯ ವ್ಯಕ್ತಿ, ಸಾಕಷ್ಟು ವಿಷಯ ಗೊತ್ತಿದೆ, ಅವರು ನಿಮಗೆ ಮಾರ್ಗದರ್ಶಿ (ಗೈಡ್) ಕೂಡಾ ಆಗಿರುತ್ತಾರೆ, ನಿರಾತಂಕವಾಗಿ, ಖುಶಿಯಿಂದ ಪ್ರವಾಸ ಮುಗಿಸಿರಿ ಎಂದು ಶುಭ ಹಾರೈಸಿದರು. ನಾವು ಅವರಿಗೆಂದೇ ಒಯ್ದಿದ್ದ ಹೋಳಿಗೆ ಕಟ್ಟುಗಳನ್ನಿತ್ತು ಧನ್ಯವಾದ ಹೇಳಿದೆವು.

ಬೀಳ್ಕೊಡುವ ಮುನ್ನ, ಮನೆಯ ಒಳಗೆ ಬನ್ನಿ ಎಂದು ಕರೆದರು.ಮನೆಯ ಒಳಗೆ ಕಾಲಿಡುತ್ತಿದ್ದಂತೆಯೇ, ಒಮ್ಮೆಲೇ ಬರ್ಫದ ಮೇಲೆ ಕಾಲಿಟ್ಟೆವೇನೋ ಎಂದು ಅನಿಸಿತು. ಒಳಗೂ, ಹೊರಗೂ ಉಷ್ಣತೆಯ ವ್ಯತ್ಯಾಸ ಅಷ್ಟಿತ್ತು.ಅವರಿಗೂ ನಮ್ಮ ಭಾವ ಅರ್ಥವಾಗಿತ್ತು. ನಿಮಗೆ ಹೊರಗೇ ಹಿತವಾಗಿರುತ್ತದೆ ಎಂದೇ ಅಲ್ಲಿ ಕುಳ್ಳಿರಿಸಿದೆ ಎಂದರು.

ಇಲ್ಲಿಂದ ಮುಂದಿನ ೬ ದಿನಗಳ ಕಾಲ, ನಾವು ಹೋದ ಇಂಡಿಗೋ ಕಾರೇ ನಮ್ಮ ಮನೆ; ಅದರ ಚಾಲಕ ಹೇಮಜೀಯವರೇ ನಮ್ಮ ಮಾರ್ಗದರ್ಶಿ; ಮಾರ್ಗಕ್ಕೂ"ದರ್ಶಿ"(navigator). ಈ ಸಾಹೇಬ ಒಯ್ದಲ್ಲಿಗೆ ನಮ್ಮ ಪಯಣ ಎಂಬಂತಾಗಿತ್ತು.

ಜೈಸಲ್ಮೇರಿನತ್ತ





ಜೋಧಪುರದಿಂದ ಮಧ್ಯಾಹ್ನ ೨.೩೦ ಕ್ಕೆ ಹೊರಟ ನಾವು, ರಾಷ್ಟ್ರೀಯ ಹೆದ್ದಾರಿ ನಂಬ್ರ ೪ ರಲ್ಲಿ ಪ್ರಯಾಣ ಬೆಳೆಸಿದೆವು. ಈಗ ಜೋಧಪುರ ಪಟ್ಟಣವನ್ನು ಸ್ಥೂಲವಾಗಿಯಷ್ಟೇ ನೋಡಿದೆವು. ಅಗಲವಾದ ರಸ್ತೆಗಳು, ಬಿಳಿ ಕಲ್ಲಿನ ಕಟ್ಟಡಗಳು, ಹಸಿರಿನ ಮರಗಳೂ ಇದ್ದು ಸುಂದರವಾದ ಪಟ್ಟಣವೆಂದೆನಿಸಿತು. ಅಲ್ಲಲ್ಲಿ ಕಿರಿದಾದ ರಸ್ತೆಗಳೂ, ಅಂಗಡಿ ಮುಂಗಟ್ಟುಗಳೂ ಇದ್ದು, ವ್ಯಾಪಾರ ಚಟುವಟಿಕೆಗಳು ಜೋರಾಗಿರುವ ಊರು ಎಂಬ ಭಾವನೆ ಬಂತು.ಕಾರಿನಲ್ಲಿ ಸಾಗುತ್ತಿದ್ದರೂ, ಬಿಸಿಲು ಮೈಮೇಲೆ ಬಿದ್ದರೆ 'ಚುಯ್' ಎಂದು ಸುಡುವಷ್ಟು ಅನುಭವವೂ ಆಗುತ್ತಿತ್ತು. ಜೋಧಪುರದ ಹೊರವಲಯಕ್ಕೆ ಬರುತ್ತಿದ್ದಂತೆ, ಹಳ್ಳಿಯ ಜೀವನದ ದೃಶ್ಯಗಳು ಅಲ್ಲಲ್ಲಿ ಕಾಣತೊಡಗಿದವು. ರಸ್ತೆ ಬದಿಯಲ್ಲಿ ಸಣ್ಣ ಸಣ್ಣ ಅಂಗಡಿಗಳು, ಬಿಳಿ ಧೋತಿ, ಬಣ್ಣದ ಪೇಟಾ ಧರಿಸಿದ ಗಂಡಸರು, ಬಣ್ಣ ಬಣ್ಣದ ಲಂಗ, ರವಿಕೆ, ಕೈ, ತೋಳು ತುಂಬಾ ಬಳೆ, ದೊಡ್ಡಮೂಗುತಿ, ತಲೆ ಮೇಲೆ ವಸ್ತ್ರಹೊದ್ದ ಮಹಿಳೆಯರು, ದೊಡ್ಡ ದೊಡ್ಡ ಚೆಂದದ ಕೊಂಬಿನ ಬಿಳಿ ಬಣ್ಣದ ಎತ್ತುಗಳು, ಮೇಕೆಗಳು, ಅಲ್ಲಲ್ಲಿ ಮೇಯುವುದೂ, ಮಲಗಿರುವುದೂ ಕಾಣುತ್ತಿತ್ತು.ಕೆಲವು ಕಡೆ, ಹೆಂಗಸರು ಮರದ ಗೆಲ್ಲುಗಳನ್ನು ಕುಲುಕಿಸಿ,ಮೇಕೆಗಳಿಗೆ ಮೇವು ಸಿಗುವಂತೆ ಮಾಡುತ್ತಿದ್ದರು.ಕೆಲವು ನಿಮಿಷಗಳ ಪ್ರಯಾಣದಲ್ಲೇ ಮರುಭೂಮಿಯ ಹಡಗಿನ ದರ್ಶನವೂ ಆಯಿತು.ಎತ್ತರದ ಒಂಟೆಗಳು, ಕತ್ತೆತ್ತಿ ಗೆಲ್ಲುಗಳಿಂದ ಹಸಿರೆಲೆಗಳನ್ನು ಎಳೆದು ತಿನ್ನಲು ಹವಣಿಸುತ್ತಿದ್ದವು.ಜೋಧಪುರ ಪಟ್ಟಣದಲ್ಲಿ, ಕೆಲವು ಕಡೆ ಇವುಗಳಿಗೆಂದು, ರಾಶಿ ರಾಶಿ ಹಸಿರು ಸೊಪ್ಪು ಹಾಕಿದ್ದುದೂ ಕಂಡು ಬಂತು; ತುಂಬಾ ತಾಜಾ ಸೊಪ್ಪುಗಳಿದ್ದವು.

ಅಲ್ಲಿನ ಎತ್ತುಗಳು ನೋಡಲು ಭಾರೀ ಚೆಂದ. ತುಂಬಾ ಎತ್ತರವೂ, ಒಳ್ಳೇ ಮೈಕಟ್ಟಿನವೂ ಆಗಿದ್ದವು. ಸ್ವಲ್ಪವೂ ಕೊಬ್ಬಿಲ್ಲದ ಆರೋಗ್ಯವಂತ ಮೈ; ಚರ್ಮದ ಹೊಳಪು ಕಾಣುತ್ತಿತ್ತು. ಬೆನ್ನ ಮೇಲಿನ ಡುಬ್ಬವೂ ಆಕರ್ಷಕವಾಗಿತ್ತು. ಹೀಗೇ, ಪ್ರಾಣಿಸಂಕುಲವನ್ನು ಗಮನಿಸುತ್ತಾ, ಕಾರಿನ ಕಿಟಿಕಿಯಿಂದ ಹೊರಗಡೆಗೇ ದೃಷ್ಟಿ ನೆಟ್ಟಿದ್ದೆ. ಒಂದು ಕಡೆ, ನಾನು ಎತ್ತು ಎಂದು ಅಂದುಕೊಂಡ ಪ್ರಾಣಿಗೆ ಕೆಚ್ಚಲಿರುವುದು ಗಮನಕ್ಕೆ ಬಂತು. ಅರೆ! ಇದೆಂತಹ ಪ್ರಾಣಿ, ದನವೋ, ಎತ್ತೋ? ಎಂದು ಸಂಶಯ ಬಂತು. ಕುತ್ತಿಗೆ ತಿರುಗಿಸಿ ಮತ್ತೊಮ್ಮೆ ನೋಡಿ, ಪಶುವೈದ್ಯ ಗಂಡನಲ್ಲಿ ಕೇಳೋಣ ಎನ್ನುವಷ್ಟರಲ್ಲಿ, ಕಾರು ಮುಂದೆ ಹೋಗಿಯಾಗಿತ್ತು. ಪುನಃ ಹೊರಗಡೆಯೇ ನೋಡುತ್ತಾ ಇದ್ದೆ. ಈಗ, ಇನ್ನೂ ಹಲವು ಅಂತಹ ಪ್ರಾಣಿಗಳು ಕಂಡವು. ಸರಿಯಾಗಿ ಗಮನಿಸಿದೆ; ಹೋ! ಇದು ದನವೇ! ಹಾಗಾದರೆ ಇದಕ್ಕೆ ಡುಬ್ಬ ಯಾಕೆ? ಎಂಬ ಪ್ರಶ್ನೆ ಮಾತ್ರಾ ಹಾಗೇ ಉಳಿಯಿತು. ನನ್ನ ಮೂಢನಂಬಿಕೆಯಂತೆ, ಎತ್ತಿಗೆ ಮತ್ತು ಒಂಟೆಗೆ ಮಾತ್ರ ಡುಬ್ಬವಿರುವುದೇ ಹೊರತು, ದನಕ್ಕಲ್ಲ ಎಂದಾಗಿತ್ತು. ಈ ಸಂಸಾರದ ಭಾರವನ್ನೆಲ್ಲಾ ಹೊತ್ತ ಅಥವಾ ಹೊತ್ತಿದ್ದೇನೆ ಎಂದು ಅಂದುಕೊಂಡಿರುವ ಗಂಡಿಗೆ ತಾನೇ ಡುಬ್ಬದ ಅಗತ್ಯ ಎಂಬ ಯೋಚನೆ ನನ್ನದಾಗಿತ್ತು. ಹಾಗಾದರೆ ಹೆಣ್ಣು ಒಂಟೆಗೆ ಡುಬ್ಬ ಯಾಕೆ? ಎಂಬ ತರ್ಕ ಆ ಕ್ಷಣದವರೆಗೆ ಬಂದಿರಲಿಲ್ಲ. ಸರಿ, ಈ ಸಂಶಯ ಕಳೆಯಲೆಂದು ಮನೋಹರ್ ಕಡೆಗೆ ತಿರುಗಿದರೆ, ಅವರಿಗೆ ಆಗಲೂ ನಿದ್ದೆ! ಇನ್ನೇನು ಮಾಡುವುದು? ಪಕ್ಕದಲ್ಲಿದ್ದ ಮರಿ ಪಶುವೈದ್ಯನನ್ನೇ ಕೇಳಿದೆ. ಅವನು ದೇಶೀ ತಳಿ, ವಿದೇಶೀ ತಳಿ ಎಂದೆಲ್ಲಾ ದನ, ಎತ್ತಿನ ಗುಣ ಲಕ್ಷಣಗಳನ್ನು ಹೇಳುತ್ತಾ ಸಣ್ಣ ಪಾಠ ಮಾಡಿದ. ಈ ಡುಬ್ಬದ ಸಹವಾಸವೇ ಸಾಕು ಎನಿಸಿತು, ಅಂತೂ ದನಗಳಿಗೂ ಡುಬ್ಬವಿರುತ್ತದೆ ಎಂದು ತಿದ್ದುಪಡಿ ಮಾಡಿಕೊಂಡೆ.



ರಾಜಸ್ಥಾನದಲ್ಲಿ ಪಶು ಸಂಗೋಪನೆ ಒಂದು ಮುಖ್ಯ ಕಸುಬು. ಇಲ್ಲಿ ಹಲವಾರು ದೇಶಿ ತಳಿಯ ದನ, ಎತ್ತುಗಳು, ಮೇಕೆಗಳು, ಕುರಿಗಳು, ಒಂಟೆಗಳು ಕಾಣ ಸಿಗುತ್ತವೆ. ಇಲ್ಲಿನ ಜನ ಪ್ರಾಣಿಗಳನ್ನು ತುಂಬಾ ಪ್ರೀತಿಯಿಂದ ಸಾಕುತ್ತಾರೆ ಎಂದು ಅನಿಸಿತು. ತೆರೆದ ಬಯಲಿನಲ್ಲಿ ಸ್ವಚ್ಛಂದವಾಗಿ ಮೇಯಲು ಬಿಟ್ಟು ಕಾವಲು ಕಾಯುತ್ತಾರೆ. ಧಾರಾಳ ಬಿಸಿಲು, ಗಾಳಿಗೆ ಒಡ್ಡಿಕೊಂಡ ಜಾನುವಾರುಗಳು ಆರೋಗ್ಯದಿಂದಿವೆ ಎಂದು ಅನಿಸುತ್ತದೆ.




ಸುಮಾರು ೧.೩೦ ಗಂಟೆಗಳ ಪ್ರಯಾಣದ ಬಳಿಕ, ಕಾರು ಬಲಕ್ಕೆ ತಿರುಗಿ ಪ□□□□ಮದ ದಿಕ್ಕಿನಲ್ಲಿ ಸಾಗತೊಡಗಿತು. ರಾಷ್ಟ್ರೀಯ ಹೆದ್ದಾರಿ ನಂಬ್ರ ೧೯ ರಲ್ಲಿ ಹೋಗುತ್ತಿದ್ದೆವು. ನಿಧಾನಕ್ಕೆ ಹಸಿರಿನ ದಟ್ಟತೆ ಕಡಿಮೆಯಾಗುತ್ತಿರುವಂತೆ ಅನಿಸತೊಡಗಿತು.ಅಲ್ಲಲ್ಲಿ ಗದ್ದೆಗಳೂ, ಇದ್ದಕಿದ್ದಂತೆ ಅಲ್ಲೇ ಸಣ್ಣ ಸಣ್ಣ ಮರಳಿನ ದಿಬ್ಬಗಳೂ ಕಾಣತೊಡಗಿದವು. ಸಮುದ್ರದ ಬದಿಯಲ್ಲಿ ಮಾತ್ರವೇ ಕಂಡಿದ್ದ ಮರಳು, ಹೀಗೆ ಇದ್ದಕಿದ್ದಂತೆ, ಬಯಲಿನಲ್ಲಿ, ಪುಟ್ಟ ಪುಟ್ಟ ಗುಡ್ಡೆಗಳ ರೂಪದಲ್ಲಿ ಕಂಡಾಗ ಆಶ್ಚರ್ಯವಾಯಿತು. ಆ ಗುಡ್ಡೆಗಳ ಮೇಲೆ ಪದರು ಪದರಾಗಿ ಮರಳು ರಾಶಿ ಬಿದ್ದಿದ್ದರಿಂದ ಸುಂದರ ರೇಖಾವಿನ್ಯಾಸವೂ ಮೂಡಿತ್ತು. ಮುಂದೊಂದು ದಿನ ಕಟ್ಟಬೇಕಾಗಿರುವ ತನ್ನ ಮಹಲಿಗೆ ಪ್ರಕೃತಿಯೇ ಮರಳಿನ ಗುಡ್ಡೆಗಳನ್ನು ಮಾಡಿಟ್ಟು, ಗಾಳಿಯ ಕುಂಚದಿಂದ ಈ ಕಲಾತ್ಮಕ ವಿನ್ಯಾಸ ಮಾಡಿದೆಯೋ ಎಂದೆನಿಸುತ್ತಿತ್ತು. ಅಂತೂ ತನ್ನ ಮಕ್ಕಳಿಗೆ ಚಿತ್ರಕಲೆಯ ಪಾಠವನ್ನು ಪ್ರಕೃತಿ ಮಾತೆಯೇ ಕೊಟ್ಟು, ತಾ ಮೊದಲ ಗುರು ಎಂದು ಸಾಬೀತು ಮಾಡಿದ್ದಾಳೆ ಎಂಬಂತೆ ಭಾಸವಾಯಿತು.



ಮನೆಯಲ್ಲಿ ನಾವು ಎಷ್ಟೇ ಕಚ್ಚಾಡಿದರೂ, ಪ್ರಯಾಣದಲ್ಲಿ ಮಾತ್ರ ದಿವ್ಯ ಮೌನ ನೆಲೆಸಿರುತ್ತದೆ. ಧ್ಯಾನಸ್ಥರಾಗಿ ಎಲ್ಲಾ ಅನುಭವಿಸುತ್ತಿರುವವರಂತೆ ಕುಳಿತಿರುತ್ತೇವೆ, ಕಾರಣವಿಷ್ಟೇ: ಮನೋಹರ್ ಊರು ಬಿಟ್ಟ ಕೂಡಲೇ ಅವರ ಮೊಬೈಲ್ ಅರಚಿಕೊಳ್ಳಲು ಶುರುವಾಗುತ್ತದೆ; ಅವರು ಒಂದು ಕಿವಿಗೆ ಮೊಬೈಲ್ ಹಚ್ಚಿ ಕುಳಿತರೆ, ಕಣ್ಣಿಗೆ ಕ್ಯಾಮರಾ ತಗುಲಿಸಿ ಮುಕ್ಕಣ್ಣರಾಗುತ್ತಾರೆ, ನನ್ನೊಂದಿಗೆ ಮಾತಾಡಲು ಅವರಿಗೆ ಎರಡೂ ಕಿವಿ ಬೇಕೇ ಬೇಕು, ಒಂದರಲ್ಲಿ ಕೇಳಲು, ಇನ್ನೊಂದರಲ್ಲಿ ಮರೆಯಲು. ಇನ್ನು ಮಗನೋ, ಅವನ ಸಂಗೀತ ಸಂಗ್ರಹವಿಡೀ ಅವನೊಂದಿಗೇ ಪ್ರಯಾಣಿಸುವುದರಿಂದ, ಎರಡೂ ಕಿವಿ ಇಯರ್ ಫೋನ್ ನಿಂದ ಮುಚ್ಚಿರುತ್ತದೆ. ಹೀಗಾಗಿ, ಒಂದು ಪ್ರಶಾಂತ ವಾತಾವರಣ ಪ್ರವಾಸದುದ್ದಕ್ಕೂ ಏರ್ಪಡುತ್ತದೆ. ಅಪರೂಪಕ್ಕೊಮ್ಮೆ, ಹೇಮಜೀಯವರು ಕೇಳಿದ ಪ್ರಶ್ನೆಗೆ ನನ್ನ ಒರಟೊರಟು ಹಿಂದಿಯಲ್ಲಿ ಉತ್ತರಿಸಿದರಾಯಿತು, ಉಳಿದಂತೆ ಹೊರಗಿನ ದೃಶ್ಯಗಳನ್ನು ನೋಡುತ್ತಾ ಸಾಗುತ್ತಿದ್ದೆವು. ಹೀಗಾಗಿ ರಸ್ತೆ ಬದಿ ಗದ್ದೆಗಳಲ್ಲಿ, ಬಯಲಿನಲ್ಲಿ ಸುಮಾರು ನವಿಲುಗಳನ್ನು, ಜಿಂಕೆಗಳನ್ನೂ ಕಂಡೆನಾದರೂ, ಇವರಿಬ್ಬರಿಗೂ ತೋರಿಸುವಷ್ಟರಲ್ಲಿ ಕಾರು ಮುಂದೆ ಸಾಗಿಯಾಗುತ್ತಿತ್ತು.

ಜೋಧಪುರದಿಂದ ಜೈಸಲ್ಮೇರ್‌ಗೆ ಸುಮಾರು ೩೦೦ ಕಿ.ಮೀ, ನಾಲ್ಕೂವರೆ ಗಂಟೆಗಳ ಪ್ರಯಾಣ. ರಸ್ತೆ ಉತ್ತಮವಾಗಿದ್ದು, ವಾಹನ ಸಂಚಾರ ಕಡಿಮೆ. ಪೋಖರನ್ ಕೂಡಾ ಇದೇ ದಾರಿಯಲ್ಲಿದೆ. ಅಣುಬಾಂಬ್‌ನಿಂದಲೇ ಪ್ರಸಿದ್ಧಿಗೆ ಬಂದ ಈ ಸ್ಥಳ, ಈಗ ಪುಟ್ಟ ಪಟ್ಟಣವಾಗಿದೆ. ಈ




ಹೆದ್ದಾರಿಯುದ್ದಕ್ಕೂ ಬಲಬದಿಗೆ ಗಡಿ ರಕ್ಷಣಾ ಪಡೆಯ ಕ್ಯಾಂಪ್‌ಗಳು ಕಂಡು ಬರುತ್ತವೆ. ಹಾಗೇ ಎಡಬದಿಗೆ ಗಾಳಿಯಂತ್ರಗಳು. ಪರಿಸರ ಮತ್ತು ಗಡಿರಕ್ಷಣೆಯ ಕಾಳಜಿಗೆ ಉತ್ತಮ ಕುರುಹಾಗಿ ಕಂಡು ಬಂದ ಈ ದೃಶ್ಯಗಳು ಮನಸ್ಸಿಗೆ ಧೈರ್ಯ, ಭರವಸೆಯ ಭಾವವನ್ನು ತುಂಬಿದವು. ಪೋಖರನ್‌ನಲ್ಲಿ ಚಾ ಕುಡಿದು, ಹೆದ್ದಾರಿಯ ನೇರ ರಸ್ತೆಯಲ್ಲಿ ಸಾಗುತ್ತಿದ್ದೆವು. ರಸ್ತೆ ಎಷ್ಟು ನೇರವಿತ್ತೆಂದರೆ, ಹಲವು ಕಿಲೋ ಮೀಟರ್ ಗಳವರೆಗೂ ಕಾಣುತ್ತಿತ್ತು. ಅಲ್ಲಲ್ಲಿ ಒಂದೊಂದು ಪ್ರಯಾಣಿಕರ ಕಾರ್, ಸೈನಿಕರ ಜೀಪ್. ಸರಕಿನ ಲಾರಿಗಳು ಸಿಗುತ್ತಿದ್ದವು.

ಸಂಜೆ ಸುಮಾರು ೬.೩೦ರ ಸಮಯ. ಕಾರು ಹೀಗೇ, ನೇರ ರಸ್ತೆಯಲ್ಲಿ ಸಾಗುತ್ತಿತ್ತು. ಎಲ್ಲರೂ ಮೌನವಾಗಿ ಅವರವರ ಯೋಚನಾ ಲಹರಿಯಲ್ಲೇ ಮುಳುಗಿದ್ದೆವು. ಬಿಸಿಲ ಝಳ ಸ್ವಲ್ಪ ಕಮ್ಮಿಯಾಗಿತ್ತು. ಇದ್ದಕಿದ್ದಂತೆ ನಮ್ಮ ನೇರ

ರಸ್ತೆಯ ಆ ತುದಿಗೆ ಒಂದು ಕೆಂಪು ಚೆಂಡು ಕಾಣಿಸಿತು. ಓಹ್! ಎಂಬ ನನ್ನ ಉದ್ಗಾರದ ದನಿಗೆ ಎಚ್ಚೆತ್ತ ಮನೋಹರ್, ಸುಧನ್ವ ತಮ್ಮ ತಮ್ಮ ಕ್ಯಾಮರಾಗಳನ್ನು ಸಜ್ಜುಗೊಳಿಸಿದರು. ಆಸ್ತಮಿಸುವ ಮುನ್ನದ ಗೋಲಾಕಾರದ ಸೂರ್ಯ, ಗೋಧೂಳಿ ಲಗ್ನದ ಮದುಮಗಳ ಹಣೆಯ ತಿಲಕದಂತಿದ್ದ. ಮಂಗಳೂರು ಬೀಚ್ ನಲ್ಲಿ ಎಷ್ಟೋ ಬಾರಿ ಸೂರ್ಯಾಸ್ತ ನೋಡಿದ್ದರೂ, ಹೀಗೆ ನೇರ ರಸ್ತೆಯಲ್ಲಿ ಸಾಗುತ್ತಾ, ನಮ್ಮ ನೇರಕ್ಕೆ ನಿಂತ ದೊಡ್ಡ ಕೆಂಪು ಕೆಂಪು ಸೂರ್ಯ, ಸುತ್ತ ಶುಭ್ರ ನೀಲಿ ಆಕಾಶ, ಅಲ್ಲಲ್ಲಿ ಕಿತ್ತಳೆ ಮತ್ತು ಇತರ ಬಣ್ಣಗಳು ಬೆರಕೆಯಾಗಿ, ಬಣ್ಣಗಳ ಬಗೆಗಿನ ನಮ್ಮ ಜ್ಞಾನಕ್ಕೇ ಸವಾಲೆಸೆಯುವಂತೆ ತೋರುತ್ತಿದ್ದವು. ಬಟ್ಟ ಬಯಲು, ಕ್ಷಿತಿಜ, ದಿಗಂತ ಎಂಬ ಎಲ್ಲಾ ಶಬ್ದಗಳು ಅರ್ಥವಾದಂತೆ ಅನಿಸಿದರೂ, ಸ್ಪಷ್ಟವಾಗಲಿಲ್ಲ. ಹೀಗೆ ಒಂದೇ ಸವನೆ ನಾವೆಲ್ಲಾ ಆಹಾ! ಓಹೋ! ಎಂದು ತನಗರ್ಥವಾಗದ ಭಾಷೆಯಲ್ಲಿ ಒದರುವುದೂ, ಒಂದೇ ಸವನೆ ಇವರಿಬ್ಬರೂ ಕ್ಲಿಕ್ ಮಾಡುವುದೂ, ನೋಡಿದ ಹೇಮಜೀಯವರಿಗೆ ವಿಚಿತ್ರವೆನಿಸಿರಬೇಕು. "ನಿಮ್ಮಲ್ಲಿ ಎಷ್ಟೊತ್ತಿಗೆ ಸೂರ್ಯಾಸ್ತ?" ಎಂದರು. "ಸಾಧಾರಣ ಈ ಹೊತ್ತಿಗೇ, ಆದರೂ ಈ ರೀತಿ ಕಾಣಸಿಗುವುದಿಲ್ಲ, ಎತ್ತರದ ಗುಡ್ಡಗಳು, ಪರ್ವತಗಳೂ, ಮರಗಳೂ, ಅಂಕು ಡೊಂಕಿನ ರಸ್ತೆಗಳೂ (ಹೊಂಡದ ಬಗ್ಗೆ ಹೇಳದೇ, ಬಚ್ಚಿಟ್ಟೆ) ಇರುವ ನಾಡು ನಮ್ಮದು" ಎಂದೆ.

ಸುವರ್ಣ ನಗರಿ
(ದಿನ ಎರಡು)







'ಸುವರ್ಣ ನಗರಿ' ಎಂದು ಕರೆಸಿಕೊಳ್ಳುವ ಜೈಸಲ್ಮೇರ್ ತನ್ನ ಹೊಳಪನ್ನು ಚೆನ್ನಾಗಿ ಉಳಿಸಿಕೊಂಡಿದೆ. ಪ್ರವಾಸಿಗರಿಗೆ ಸಾಕಷ್ಟು ಅನುಕೂಲತೆಗಳನ್ನು ಒದಗಿಸಿ ಕೊಟ್ಟು, ತನ್ನ ಆದಾಯ ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದೆ. ಇಲ್ಲಿನ ಪ್ರಸಿದ್ಧ ಕೋಟೆಯ ಒಳಗೆ, ಜನ ವಸತಿಯಿದ್ದು, ಇದು ಜೀವಿಸುತ್ತಿರುವ ಕೋಟೆ (living fort) ಎಂಬ ವಿಶೇಷಣವನ್ನು ಹೊತ್ತಿದೆ. ಸಾಕಷ್ಟು ದೊಡ್ಡದಾಗಿರುವ ಕೋಟೆಯ ಸರಿಯಾದ ವೀಕ್ಷಣೆಗೆ, ೪–೫ ಗಂಟೆಗಳಾದರೂ ಬೇಕು. ಹಳದಿ ಕಲ್ಲಿನಲ್ಲಿ ಕಟ್ಟಲ್ಪಟ್ಟಿರುವ ಈ ಕೋಟೆ, ಸೂರ್ಯನ ಕಿರಣಗಳಿಗೆ ಹಗಲಿನಲ್ಲಿ ಚಿನ್ನದ ಬಣ್ಣದಲ್ಲಿ ಹೊಳೆದರೆ, ರಾತ್ರಿಯ ಕೃತಕ ವಿದ್ಯುದ್ದೀಪಗಳ ಅಲಂಕಾರದಲ್ಲೂ ತನ್ನ ಹೊಳಪನ್ನು ಬಿಟ್ಟು ಕೊಡುವುದಿಲ್ಲ. ಸತ್ಯಜಿತ್ ರೇ ಅವರ, ಸೋನಾರ್ ಕಿಲ್ಲಾ ಎಂಬ ಚಿತ್ರಕ್ಕೆ ಈ ಕೋಟೆಯೇ ಸ್ಫೂರ್ತಿ ಎಂಬುದು ಕೆಲವು ತಿಂಗಳುಗಳ ಹಿಂದೆ ನಡೆದ ಮಮತಾ ಬ್ಯಾನರ್ಜಿಯವರ ಕುರಿತಾದ ಕಾರ್ಟೂನ್ ಅವಾಂತರದಿಂದ ಅರಿವಿಗೆ ಬಂದಿತ್ತು.

ಜೈಸಲ್ಮೇರ್ ಒಂದು ಪುಟ್ಟ ಊರು. ಸುಮಾರು ೪–೫ ಕಿ.ಮೀಗಳ ಒಳಗೆ ಎಲ್ಲಾ ಪ್ರೇಕ್ಷಣೀಯ ಸ್ಥಳಗಳೂ ಇವೆ. ಕೋಟೆ, ಮುಖ್ಯವಾದ ಸ್ಥಳವಾಗಿದ್ದು, ಸುಮಾರು ೮೦ಮೀ ಎತ್ತರದ ತ್ರಿಕೂಟ ಬೆಟ್ಟದ ಮೇಲಿದೆ. ಹೀಗಾಗಿ, ಊರಿನ ಎಲ್ಲಾ ಕಡೆಯಿಂದಲೂ ಇದು ಕಾಣುತ್ತದೆ. ಈ ಕೋಟೆಯ ಮೇಲ್ಭಾಗದಿಂದ, ಇಡೀ ಊರನ್ನು ಕಾಣಬಹುದು. ಸಾಮಾನ್ಯವಾಗಿ ಒತ್ತೊತ್ತಾಗಿ ಕಟ್ಟಲ್ಪಟ್ಟಿರುವ ಪುಟ್ಟ ಪುಟ್ಟ ಮನೆಗಳು, ಹೋಟೆಲ್ಲುಗಳು, ಶಾಲಾ–ಕಾಲೇಜು, ಆಫೀಸು ಕಟ್ಟಡಗಳು ಎಲ್ಲವೂ ಹಳದಿ ಕಲ್ಲಿನವೇ. ಕೋಟೆಯ ಮೇಲಿನಿಂದ ನೋಡಿದಾಗ, ಚಪ್ಪಟೆ ತಾರಸಿಯ ಈ ಕಟ್ಟಡಗಳು, ಸಣ್ಣ ಮಕ್ಕಳು ಆಡುವ ಬಿಲ್ಡಿಂಗ್ ಬ್ಲಾಕ್ಸ್‌ಗಳಿಂದ ಕಟ್ಟಿದ ಮನೆಗಳಂತೆ ಕಾಣುತ್ತವೆ. ಕೋಟೆಯ ಎತ್ತರದಿಂದ ನೋಡಿದಾಗ, ನೀರಿನ ಸರೋವರಗಳೂ, ಸಣ್ಣ ಸಣ್ಣ ಮರಳಿನ ಗುಡ್ಡೆಗಳೂ ಎಲ್ಲವೂ ಸೂರ್ಯನ ಬಿಸಿಲಿನಲ್ಲಿ ಹೊಳೆಯುತ್ತಿರುವಂತೆ ಭಾಸವಾಗುತ್ತದೆ.





















ಕೋಟೆಯ ಪ್ರವೇಶ ದ್ವಾರದಿಂದ ಕೋಟೆ ತುಂಬಾ ಎತ್ತರದಲ್ಲಿ ಇರುವುದರಿಂದ, ಏರು ಮಾರ್ಗದಲ್ಲಿ ಕಲ್ಲು ಚಪ್ಪಡಿ ಹಾಸಿದ ದಾರಿಯಲ್ಲಿ ನಡೆಯಬೇಕಾಗುತ್ತದೆ. ನಡಿಗೆ ಅಭ್ಯಾಸವಿಲ್ಲದವರು, ಅಶಕ್ತರು ರಿಕ್ಷಾದ□□□□ಪ್ರಯಾಣಿಸಬಹುದು.ಕೆಲವರು ಒಂಟೆಗಳನ್ನು ಆಶ್ರಯಿಸುತ್ತಾರೆ. ಈ ದಾರಿಯಲ್ಲೇ, ಬಣ್ಣ ಬಣ್ಣದ ಟೋಪಿಗಳ, ಬಟ್ಟೆಗಳ, ಶಾಲುಗಳ, ಬ್ಯಾಗುಗಳ, ಬಳೆ ಮತ್ತಿತರ ಅಲಂಕಾರದ ವಸ್ತುಗಳ, ತಿಂಡಿಗಳ, ಪಾನೀಯಗಳ ಅಂಗಡಿಗಳೂ ಇವೆ. ಇವುಗಳ ಜತೆಗೇ ಬಹಳ ಕಾಲದಿಂದ ಅಲ್ಲಿಯೇ ವಾಸಿಸುತ್ತಿರುವ ಕುಟುಂಬಗಳೂ ಇವೆ. ಕೆಲವು ದೇವಾಲಯಗಳೂ ಇವೆ. ಒಟ್ಟಿನಲ್ಲಿ ಏನುಂಟು? ಏನಿಲ್ಲ?ಎನ್ನಬಹುದು.ಈ ರೀತಿಯ ಸಹಬಾಳ್ವೆಯ ಆಶ್ಚರ್ಯಕರ ದೃಶ್ಯವನ್ನು ನೋಡಲು ಹಲವಾರು ವಿದೇಶಿ ಪ್ರವಾಸಿಗರು ಬರುತ್ತಾರೆ. ರಾಜಸ್ಥಾನದಲ್ಲಿ ದೇಶೀ ಪ್ರವಾಸಿಗರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶೀ ಪ್ರವಾಸಿಗರು ಕಾಣ ಸಿಗುತ್ತಾರೆ. ಅವರು ಆರಾಮವಾಗಿ, ಒಂದೊಂದೇ ಸ್ಥಳವನ್ನು ನೋಡುತ್ತಾ, ಇಲ್ಲಿನ ಸಂಸ್ಕೃತಿಯನ್ನು ತಿಳಿಯಲು ಪ್ರಯತ್ನಿಸುತ್ತಾ ಖುಶಿಪಡುತ್ತಿರುವಂತೆ ಕಾಣುತ್ತದೆ. ಇಲ್ಲಿನ ಜನರೂ ಅಷ್ಟೇ, ಈ ವಿದೇಶೀ ಪ್ರವಾಸಿಗರಿಗೆ ಚೆನ್ನಾಗಿ ಹೊಂದಿಕೊಂಡಿದ್ದಾರೆ. ಅವರೊಂದಿಗೆ ಸಲೀಸಾಗಿ ಇಂಗ್ಲೀಷಿನಲ್ಲಿ ಮಾತಾಡುತ್ತಾರೆ. ಕೆಲವರು ಫ್ರೆಂಚ್ ಭಾಷೆಯಲ್ಲೂ ವ್ಯವಹರಿಸಬಲ್ಲರು.

ಕ್ರಿ.ಶ ೧೧೫೬ ರಲ್ಲಿ ರಜಪೂತ ಭಟ್ಟಿ ಮನೆತನದ ರಾಜ ಜೈಸಲ್ ಸಿಂಗ್ ಈ ಕೋಟೆಯನ್ನು ಕಟ್ಟಿಸಿದರಂತೆ. ಈ ರಜಪೂತರಿಗೆ, ಮೊಘಲರೊಂದಿಗೆ ಹಾಗೂ ಜೋಧಪುರದ ರಾಥೋಡರೊಂದಿಗೆ ಹಲವು ಯುದ್ಧಗಳು ನಡೆದಿದ್ದು, ಈ ಕೋಟೆ ಅವುಗಳಿಗೆಲ್ಲಾ ಸಾಕ್ಷಿಯಾಗಿದೆ. ಕೋಟೆಯ ಒಳಗೆ ಹಲವಾರು ವಿಭಾಗಗಳಿವೆ. ಕೆಲವು ಕಡೆ ಶಸ್ತ್ರಾಸ್ತ್ರಗಳನ್ನು, ರಾಜರುಗಳ ಪೈಂಟಿಂಗ್, ಅವರಿಗೆ ಸಂಬಂಧಿಸಿದ ವಸ್ತುಗಳು, ಸಿಂಹಾಸನ, ದಿರಿಸುಗಳೇ ಮೊದಲಾದ ವಸ್ತುಗಳನ್ನು ಪ್ರದರ್ಶನಕ್ಕೆ ಇಟ್ಟಿದ್ದರು. ರಾಜ ರಾಣಿಯರ ಪಾಕಶಾಲೆ, ಅತಿಥಿಗೃಹ, ಶಯ್ಯಾಗೃಹ, ಸ್ನಾನಗೃಹ ಹೀಗೆ ಹಲವಾರು ಭಾಗಗಳಿದ್ದವು. ಕಿವಿಗೆ ಮೈಕ್ರೋಫೋನ್ ಸಿಕ್ಕಿಸಿಕೊಂಡು ವಿವರಣೆ ಕೇಳುವ ಆಡಿಯೋ ವ್ಯವಸ್ಥೆಯೂ ಲಭ್ಯವಿದೆ. ಮಾನವ ಗೈಡ್‌ಗಳ ವ್ಯವಸ್ಥೆಯೂ ಇದೆ. ಒಟ್ಟಿನಲ್ಲಿ ಪ್ರವಾಸಿಗರಿಗೆ ತುಂಬಾ ಅನುಕೂಲಕರವಾದ ವಾತಾವರಣ.

ಕೋಟೆ ಸುತ್ತಿ ಸುಸ್ತಾದ ನಮಗೆ, ರುಚಿರುಚಿಯಾದ ಕಿಮೊ ಹಣ್ಣಿನ ಜ್ಯೂಸ್ ಮತ್ತು ಮಜ್ಜಿಗೆ ಮಾರುವ ಅಂಗಡಿಗಳು ಕಣ್ಣಿಗೆ ಬಿದ್ದವು. ಎರಡೂ ಕಡೆ ಕುಡಿದು, ದಣಿವಾರಿಸಿಕೊಂಡೆವು. ಹಣ್ಣಿನ ಜ್ಯೂಸ್ ಅಂಗಡಿಯಲ್ಲಿ, ನಾವೇ ಆರಿಸಿ ಕೊಟ್ಟ ಹಣ್ಣನ್ನು ನಮ್ಮ ಎದುರೇ ಜ್ಯೂಸ್ ಮಾಡಿ, ಸಕ್ಕರೆ, ನೀರು ಏನೂ ಬೆರೆಸದೇ ಕೊಟ್ಟರು. ಇನ್ನು ಮಜ್ಜಿಗೆಯೋ, ಎಷ್ಟು ರುಚಿಯಾಗಿತ್ತೆಂದರೆ, ಅದು ಮಜ್ಜಿಗೆಯಾದರೂ ಅಮೃತವೆನಿಸಿತ್ತು.ಆದರೂ ಸುಧನ್ವನ ಮುಖ ಏಕೋ ಬಾಡಿಯೇ ಇದೆ ಎಂದು ಅನಿಸಿತು.ಅಂದು ಬೆಳಿಗ್ಗೆ ಸ್ವಲ್ಪ ಭೇದಿಯಾಗಿದ್ದನ್ನು ಆತ ಹೇಳಿದ್ದರೂ ನಾವು ತಲೆಕೆಡಿಸಿಕೊಂಡಿರಲಿಲ್ಲ.




ಕೋಟೆ ಸುತ್ತ ಇದ್ದ ಅಂಗಡಿಗಳಿಂದ ಸವಿ ನೆನಪಿಗಾಗಿ ಬೇಕಾದ ವಸ್ತುಗಳ ಖರೀದಿ ಮಾಡಿಕೊಂಡೆ. ಕನ್ನಡಿ ಹಚ್ಚಿ ಅಲಂಕಾರಿಕ ಕಸೂತಿಗಳಿಂದ ಆಕರ್ಷಕವಾಗಿ ಕಾಣುವ ಪುಟ್ಟ ಪುಟ್ಟ ಬ್ಯಾಗ್ ಗಳು, ಮೊಬೈಲ್ ಕವರುಗಳು ೫೦–೧೦೦ ರೂ.ಗಳಿಗೆ ಸಿಗುತ್ತವೆ. ಇಷ್ಟೊಂದು ಕಸೂತಿಗೆ, ಬಟ್ಟೆಗೆ, ನೂಲಿಗೆ, ಮಜೂರಿಗೆ ಈ ರೇಟು ಏನೂ ತೊಂದರೆಯಿಲ್ಲ ಎನಿಸಿತು. ಹಾಗೇ ಒಂದು ಕಡೆ, ಒಂಟೆ ಚರ್ಮದ ಪರ್ಸ್ ಕಾಣಿಸಿತು. ಸಾಮಾನ್ಯವಾಗಿ ಚರ್ಮದ ವಸ್ತುಗಳನ್ನು ಖರೀದಿಸದ ನಾನು, ರಾಜಸ್ಥಾನದ ವಿಶೇಷವೆಂದು ಒಂಟೆ ಚರ್ಮದ ಪರ್ಸ್ ತೆಗೆದುಕೊಂಡೆ.ಊರಿಗೆ ಬಂದ ಮೇಲೆ ಅದರ ನಿಜ ಬಣ್ಣ, ಅಲ್ಲ, ವಾಸನೆ ಏನೆಂದು ಗೊತ್ತಾಯಿತು.ಪರ್ಸ್ ಇಟ್ಟ ಇಡೀ ಕಪಾಟೇ ದುರ್ಗಂಧ ಬೀರುತ್ತಿದೆ, ಪುಣ್ಯಕ್ಕೆ ಅದನ್ನು ಅಷ್ಟರಲ್ಲೇ ಯಾರಿಗೂ ಸವಿ ನೆನಪಿನ ಉಡುಗೊರೆ ಎಂದು ಕೊಟ್ಟಿರಲಿಲ್ಲ. ಈ 'ಊಂಟ್ ಗಂಧಿ'ಗೆ ಯಾವುದಾದರೂ ಪರಾಶರ ಸ್ಪ್ರೇ ಸಿಗುತ್ತದೋ ನೋಡಬೇಕು.




ಕೋಟೆಯಿಂದ ಹೊರಬಂದು, ಕತ್ತೆತ್ತಿದರೆ ರಾಶಿ ರಾಶಿ ಪಾರಿವಾಳಗಳು ಕಾಣಿಸಿದವು.ಅವು ಆವಾಗಾವಾಗ ಗುಂಪಿನಲ್ಲಿ ಒಂದು ಸುತ್ತು ಹಾರುವುದು ಮತ್ತೆ ಬಂದು ಕೋಟೆ ಗೋಡೆಯ ಮೇಲೆ ಕುಳಿತುಕೊಳ್ಳುವುದೂ, ಮತ್ತೆ ಹಾರುವುದೂ ಮಾಡುತ್ತಿದ್ದವು.ಅವುಗಳ ಹಾರಾಟದ ಕ್ರಮ ತುಂಬಾ ಮೋಜಿನದ್ದೂ ಆಗಿತ್ತು.ನಮ್ಮ ಮುಕ್ಕಣ್ಣಗಳೂ ಸಾಕಷ್ಟು ಫೋಟೋ, ವೀಡಿಯೋ ತೆಗೆದು, ಪರಸ್ಪರ ತೋರಿಸಿಕೊಂಡರು. ಇವರಿಬ್ಬರ ಉತ್ಸಾಹ ಕಂಡ, ಅಲ್ಲೇ ನಿಂತಿದ್ದ ರಿಕ್ಷಾ ಚಾಲಕರು ತಾವೂ ಚಪ್ಪಾಳೆ ತಟ್ಟಿ ಪಾರಿವಾಳಗಳು ಹಾರುವಂತ ಮಾಡಿ ಫೋಟೋ ತೆಗೆದುಕೊಳ್ಳಲು ಸಹಾಯ ಮಾಡಿದರು.

ಪಟ್ವಾ–ಕೀ–ಹವೇಲಿ














ನಮ್ಮನ್ನು ಕೋಟೆಯಿಂದ ೧೦ ನಿಮಿಷಗಳಲ್ಲಿ ನೇರವಾಗಿ ಹವೇಲಿಗೆ ತಂದು ಬಿಟ್ಟರು ಹೇಮಜೀ. ಇಲ್ಲಿ ೪ – ೫ ಹವೇಲಿಗಳಿವೆ, ನೋಡಿಕೊಂಡು ಬನ್ನಿ ಎಂದರು. ಹವೇಲಿ ಅಂದರೆ ಶ್ರೀಮಂತರ ಮನೆ. ಇಲ್ಲಿರುವುದು, ಒಂದೇ ಕುಟುಂಬದ ಸಹೋದರರಿಗೆ ಸೇರಿದ, ಮನೆಗಳ ಸಮೂಹ ಹವೇಲಿ. ಇವುಗಳಲ್ಲಿ ಮುಖ್ಯವಾದ ಹವೇಲಿಯನ್ನು ೧೮೦೦ ರಲ್ಲಿ ಗುಮನ್– ಚಾಂದ್– ಪಟ್ವಾ ಎಂಬವರು ಕಟ್ಟಿಸಿದ್ದಂತೆ. ಈ ಜೈನ ವರ್ತಕರು ಆಗರ್ಭ ಶ್ರೀಮಂತರಾಗಿದ್ದರಂತೆ. ಹೀಗಾಗಿ ಇಲ್ಲಿನ ಹವೇಲಿಗಳು ಎಲ್ಲಾ ವಿಷಯಗಳಲ್ಲೂ ಶ್ರೀಮಂತವೇ ಆಗಿವೆ. ೨–೩ ಮಾಳಿಗೆಗಳು, ಬಾಗಿಲು, ಕಿಟಿಕಿಗಳ ಮರದ ಕೆತ್ತನೆ, ಕಮಾನುಗಳು, ಗೋಡೆ, ನೆಲ, ಸೂರಿಗೆ ಬಳಿದ ಬಣ್ಣ, ಚಿತ್ರಗಳು, ಅಂಟಿಸಿದ ಕನ್ನಡಿಗಳು, ಅವುಗಳ ಸುತ್ತಲಿನ ಅಲಂಕಾರ, ಅದಕ್ಕಾಗಿ ಬಳಸಿರುವ ಚಿನ್ನ, ಮುತ್ತು, ರತ್ನಗಳಂತ ಬೆಲೆ ಬಾಳುವ ವಸ್ತುಗಳು ಅಲ್ಲಿನ ಜನರಲ್ಲಿದ್ದ ರಸಿಕತೆಯನ್ನೂ, ಕಲಾಭಿಮಾನವನ್ನೂ, ಸಂಪತ್ತನ್ನೂ ಸೂಚಿಸುತ್ತವೆ. ಒಂದಕ್ಕಿಂತ ಇನ್ನೊಂದು ನೋಡಲು ಚೆಂದವಾಗಿದ್ದವು. ಸುಧನ್ವನಿಗೆ ಆಗಲೇ ಸುಸ್ತು ಎನಿಸಿತ್ತಾದ್ದರಿಂದ, ಒಂದು ಹವೇಲಿ ನೋಡಿ ನನಗೆ ಸಾಕು ಎಂದ.ಎಲ್ಲಾ ಹವೇಲಿಗಳಿಗೆ ಸೇರಿಸಿಯೇ ಟಿಕೇಟ್ ಪಡಕೊಂಡಿದ್ದೆವಾದ್ದರಿಂದ, 'ಪೈಸಾ ವಸೂಲಿಗಾಗಿ' ನಾವಿಬ್ಬರೇ ಉಳಿದವಕ್ಕೂ ಹೊಕ್ಕು ಬಂದೆವು.



ಜೈಸಲ್ಮೇರ್‌ನಲ್ಲಿ ಈ ಹವೇಲಿಗಳು ಪ್ರಸಿದ್ಧವಾಗಿದ್ದರೂ, ಇನ್ನೂ ಹಲವಾರು ಹವೇಲಿಗಳಿವೆಯಂತೆ.ಸಾಮಾನ್ಯವಾಗಿ ವರ್ತಕರೇ ಹವೇಲಿಗಳನ್ನು ನಿರ್ಮಿಸುತ್ತಿದ್ದು, ಕಲಾಕಾರರಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದದರಿಂದ ಇಷ್ಟೊಂದು ಚಿತ್ರ, ಅಲಂಕಾರಗಳು ಸಾಧ್ಯವಾಗಿರಬೇಕು. ಹಾಗೇ ಹವೇಲಿ ಸಂಗೀತ, ನೃತ್ಯ ಸಂಪ್ರದಾಯಗಳೂ ಬೆಳೆದು ಬಂದಿರಬೇಕು ಎಂದು ಅಂದುಕೊಂಡೆ. ಇದಕ್ಕೆ ಪೂರಕವೆಂಬಂತೆ, ಅತಿಥಿಗೃಹಗಳೂ, ಸಂಗೀತ, ನೃತ್ಯಶಾಲೆಗಳೂ ಈ ಬಹು ಮಹಡಿ ಹವೇಲಿಗಳ ಒಳಗೇ ಇವೆ. ವರ್ತಕರಿಗೆ ಸಂಪತ್ತು ಸಂಗ್ರಹವೂ ಅಗತ್ಯವಾಗಿತ್ತಾಗಿ, ಇವುಗಳೇ ತಿಜೋರಿಗಳೂ ಆಗಿದ್ದ ಅಂದಿನ ಸಮಾಜ ವ್ಯವಸ್ಥೆಯ ಚಿತ್ರಣವನ್ನು ಕಲ್ಪಿಸಿಕೊಂಡೆ.

ರಾಜಸ್ಥಾನದ ಹವೇಲಿಗಳಲ್ಲಿ ಹೆಚ್ಚು ಆಕರ್ಷಕವೂ, ಪ್ರಸಿದ್ಧವೂ ಆಗಿರುವವು ಶೇಕಾವತಿ ಎಂಬಲ್ಲಿರುವ ಹವೇಲಿಗಳು. ಜೈಸಲ್ಮೇರಿನ ಹವೇಲಿಗಳನ್ನು ನೋಡಿದ ಮೇಲೆ ಶೇಕಾವತಿಗೂ ಹೋಗಬೇಕೆಂಬ ಆಶೆ ಹೆಚ್ಚಿತೇ ಹೊರತು, ಕಡಿಮೆಯಾಗಲಿಲ್ಲ.





ಅಲ್ಲೇ ಇದ್ದ ಬಟ್ಟೆ ಅಂಗಡಿಗೂ ನುಗ್ಗಿ ಬಾಂದನೀ ಬಟ್ಟೆಗಳನ್ನು ಕೊಂಡೆವು. ಇಲ್ಲೂ ಹಲವಾರು ಅಂಗಡಿಗಳಿದ್ದುಒಂದು ಅಂಗಡಿ ತುಂಬಾ ಅಲ್ಲಿನ ಕಲಾಕೃತಿಗಳೂ, ಪೈಟಿಂಗ್ ಗಳೂ ಇದ್ದವು.ಉಬ್ಬು ಚಿತ್ರಗಳಂತೆ ತೋರುವ, ಆಕರ್ಷಕ ಪೈಟಿಂಗ್ ಗಳೆರಡನ್ನು ತಲಾ ರೂ.೪೦೦ ಕ್ಕೆ ಕೊಂಡೆವು. ಅದು ಹೈಬ್ರಿಡ್ ಆರ್ಟ್ ಎಂದು ಅಂಗಡಿಯವ ಹೇಳಿದರೂ, ಅದೇನೆಂದು ಆಗ ಸ್ಪಷ್ಟವಾಗಲಿಲ್ಲ.



ಹವೇಲಿಗಳಿರುವ ಗಲ್ಲಿ ರಸ್ತೆಯಲ್ಲಿ ವಾಪಾಸು ಬರುತ್ತಿದ್ದಾಗ, ಗೂಳಿಯೊಂದು ರಸ್ತೆಗೆ ಅಡ್ಡಲಾಗಿ ಕುಳಿತಿತ್ತು. ಆಕಳ ಕರುವೊಂದು ಅದರ ಸಮೀಪವೇ ನಿಂತು, ಅದರ ಮೈಯನ್ನು, ವಿಶೇಷವಾಗಿ ಕಿವಿಯನ್ನು ನೆಕ್ಕುತಿತ್ತು.ಏನೋ ಇರಬೇಕೆಂದು ಹತ್ತಿರ ಹೋಗಿ ನೋಡಿದೆವು, ಗೂಳಿಯ ಕಿವಿಯ ಮೇಲೆ ಗಾಯವಿತ್ತು.ಡಾಮಾರು ರಸ್ತೆಯ ಬಿಸಿಯನ್ನೂ, ಕರುವಿನ ಉಪಚಾರವನ್ನೂ, ತನ್ಮಯತೆಯಿಂದ ಗೂಳಿ ಅನುಭವಿಸುತ್ತಾ, ನೋವನ್ನು ಮರೆಯಲೆತ್ನಿಸುತ್ತಿತ್ತು.ದಾರಿಯಲ್ಲಿ ಹೋಗುವ ಸೈಕಲ್ ಸವಾರರು, ಬೈಕ್ ಸವಾರರು, ಕಾಲ್ನಡಿಗೆಯವರು ಯಾರೂ ಆ ಪ್ರಾಣಿಗಳನ್ನು ಆಚೆಗೆ ಓಡಿಸುವ ಯೋಚನೆಗೇ ಹೋಗಲಿಲ್ಲ. ತಮ್ಮ ಪಾಡಿಗೇ ಅವುಗಳನ್ನು ಬಿಟ್ಟು, ತಾವೇ ಬಳಸಿಕೊಂಡು ಹೋಗುತ್ತಿದ್ದರು. ಅಲ್ಲೇ ನಿಂತು ಚಿತ್ರೀಕರಿಸುತ್ತಿದ್ದ ನಮ್ಮನ್ನು ಮಾತ್ರ ಒಂದರೆಕ್ಷಣ ದಿಟ್ಟಿಸುತ್ತಿದ್ದರು.ನಮ್ಮ ನೆಲದ ಮೇಲೆ ಪ್ರಾಣಿಗಳಿಗೂ ಇರುವ ಹಕ್ಕು ಮತ್ತು ಅವುಗಳ ಸ್ವಾತಂತ್ರ್ಯದ ಬಗ್ಗೆ ಅವರಿಗೆ ಗೌರವವಿದೆಯೆನಿಸಿತು.ಅವುಗಳನ್ನು ಎಬ್ಬಿಸಿ, ಒಂದರೆಕ್ಷಣದ ಸಮಯದ ಉಳಿತಾಯದ ಧಾವಂತವೂ ಅವರಿಗಿಲ್ಲವೆನಿಸಿತು.

ರಾಜಸ್ತಾನೀ ತಾಲಿ ತಿಂದು, ಸ್ವಲ್ಪ ವಿರಮಿಸುವ ಎಂದು ನಾವು ತಂಗಿದ್ದ ಹೋಟೆಲ್‌ಗೆ ಬಂದೆವು. ಕಳಾಹೀನ ಮುಖದೊಟ್ಟಿಗೆ, ಜ್ವರದ ಕಾವೂ ಸೇರಿದ ಸುಧನ್ವ ಚೆನ್ನಾಗಿ ನಿದ್ದೆ ಹೋದ. ವಿಮಾನದಲ್ಲಿ ಚೆಂದದ ಪ್ಯಾಕ್‌ನಲ್ಲಿ ಬಂದ ಚೀಸ್, ವೆಜ್ ಸ್ಯಾಂಡ್ 'ವಿಚ್' (witch) ಪ್ರಭಾವವೇ ಇದೆಂದು ತಿಳಿಯಲು ಕಷ್ಟವಾಗಲಿಲ್ಲ. ನನಗೂ ಸ್ವಲ್ಪ ಮಟ್ಟಿನ ಉಪದ್ರ ಆಗಿತ್ತು. ಮನೋಹರ್ ಕೊಟ್ಟ ಹೋಮಿಯೋಪತಿ ಗುಳಿಗೆ ಪರಿಣಾಮಕಾರಿಯಾಗಲೆಂದು ಆಶಿಸಿದೆವು.

ಗಡ್ಸಿಸಾರ್ ಲೇಕ್



ಸಂಜೆ ೫ ಗಂಟೆಗೆ ಮುಂದಿನ ಸುತ್ತು ಎಂದು ಮೊದಲೇ ಸೂಚಿಸಿದ್ದರಿಂದ ಹೇಮಜೀ ಸಿದ್ಧರಾಗಿದ್ದರು. ಈ ಸುತ್ತಿಗೆ ತನ್ನ ಪ್ರವೇಶವಿಲ್ಲ ಎಂದು ಸುಧನ್ವ ಮೊದಲೇ ಘೋಷಿಸಿದ್ದರಿಂದ ನಾವಿಬ್ಬರೇ ಹೊರಟೆವು. ನಾವಿದ್ದ ಭಾರತ್ ವಿಲಾಸ್ ಹೋಟೆಲಿನಿಂದ ಅರ್ಧ ಕಿ.ಮೀ ದೂರವಿರುವ ಗಡ್ಸಿಸಾರ್ ಸರೋವರವನ್ನು ನೋಡಲು ಹೋದೆವು. ಪ್ರವೇಶ ದ್ವಾರದಲ್ಲಿ ಸುಂದರ ಗೋಪುರವಿದೆ. ಇದನ್ನು ತಿಲ್ಲೋನ್ ಎಂಬವರು ಕಟ್ಟಿಸಿದ್ದರಿಂದ ಅವರ ಹೆಸರನ್ನೇ ಇಡಲಾಗಿದೆ.





ಇಲ್ಲಿನ ಮೊದಲ ರಾಜ ಜೈಸಲ್ ಈ ಊರಿನ ಜನರ ನೀರಿನ ಬವಣೆ ನೀಗಿಸಲು ತುಂಬಾ ಶ್ರಮಿಸಿದ್ದರಂತೆ. ಕ್ರಿ.ಶ ೧೪೦೦ ರಲ್ಲಿ ರಾಜಾ ಗಡ್ಸಿಸಾರ್ ಸಿಂಗ್ ರವರು ಈ ಮಳೆ ನೀರಿನ ಸಂಗ್ರಹದ ಸರೋವರವನ್ನು ನಿರ್ಮಿಸಿದರು. ಇಡೀ ಊರಿಗೆ ಬೇಕಾಗುವಷ್ಟು ನೀರಿನ ಸಂಗ್ರಹವಾಗುತ್ತಿತ್ತಂತೆ. ಬಹಳ ದೊಡ್ಡ ಸರೋವರವಿದು. ದಡದಲ್ಲಿ ತುಂಬಾ ದೊಡ್ಡ ದೊಡ್ಡ ಮೀನುಗಳಿವೆ. ಸರೋವರದ ಮಧ್ಯದಲ್ಲಿ ಮಂದಿರದಂತಹ





ಕಟ್ಟಡವಿದ್ದು, ದೋಣಿ ವಿಹಾರದ ಮೂಲಕ ಅಲ್ಲಿಗೆ ಹೋಗಬಹುದು. ಅಲ್ಲಲ್ಲಿ ಕೊಡೆಯಾಕಾರದ ಮಂಟಪ ಗೃಹಗಳೂ ಇವೆ. ಸಂಜೆ ವೇಳೆಗೆ ಪ್ರಶಾಂತ ವಾತಾವರಣದಲ್ಲಿ ಕಾಲ ಕಳೆಯಲು ಪ್ರಶಸ್ತವಾದ ಜಾಗ.ಹಲವಾರು ದೊಡ್ಡ ದೊಡ್ಡ ಮರಗಳಿದ್ದು, ವಿವಿಧ ರೀತಿಯ ಹಕ್ಕಿಗಳಿವೆ. ಸರೋವರದ ತಟದುದ್ದಕ್ಕೂ ಹಲವಾರು ದೇವಾಲಯಗಳಿವೆ. ಇಲ್ಲಿಯೂ ಸಾಕಷ್ಟು ಸಂಖ್ಯೆಯಲ್ಲಿ ವಿದೇಶೀ ಜೋಡಿಗಳು ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ, ಮಾತಾಡುತ್ತಾ ವಿಹರಿಸುವುದನ್ನು ನೋಡಿದ ಮನೋಹರ್' ನಮ್ಮ ದೇಶದಲ್ಲಿ ನಮಗಿಂತ ಚೆನ್ನಾಗಿ ಇವರೇ ಕಾಲ ಕಳೆಯುತ್ತಿದ್ದಾರೆ' ಎಂದರು. ಸರೋವರದ ಸುತ್ತಲೂ ಉದ್ಯಾನವನವೂ ಇದೆ. ಇಲ್ಲೇ ಇರುವ ದೇವಸ್ಥಾನವೊಂದರಲ್ಲಿ ಕೆಲವು ಮಂದಿ ಮಂತ್ರ ಪಾಠಗಳನ್ನು ಕಲಿಯುತ್ತಿದ್ದರು.



ದೇವಸ್ಥಾನದ ಗಂಟೆಯ ನಾದ, ಪೂಜೆಯ ಸದ್ದು, ಹಾಯಾಗಿ ಅಡ್ಡಾಡುತ್ತಿದ್ದ ದನ, ಎತ್ತುಗಳು, ಎಲ್ಲಿಂದಲೋ ಬಂದ ಯುವ ಛಾಯಾಗ್ರಾಹಕರ ದಂಡು ಎಲ್ಲವೂ ಒಂದು ಹದದಲ್ಲಿ ಬೆರೆತಂತಿತ್ತು. ಸುಮಾರು ೧ ಗಂಟೆ ಕಾಲ ನಾವಲ್ಲಿ ಅಡ್ಡಾಡಿದೆವು. ಸಂಜೆ ಬೆಳಕಿನಲ್ಲಿ ಸರೋವರದ ಚೆಲುವನ್ನೂ, ಬಿಳಿ, ಬೂದು,ಕಂದು ಬಣ್ಣದ ಬಾತುಕೋಳಿಗಳನ್ನು, ದೋಣಿ ವಿಹಾರಾರ್ಥಿಗಳನ್ನೂ ಸೆರೆ ಹಿಡಿದೆವು.

ಆ ಪ್ರಶಾಂತ ವಾತಾವರಣಕ್ಕೆ ವಿಶೇಷ ಮೆರುಗು ಕೊಟ್ಟದ್ದು ಮಾತ್ರ, ಪ್ರವೇಶ ದ್ವಾರದ ಸಮೀಪದಲ್ಲೇ ಕುಳಿತು ತನ್ನಷ್ಟಕ್ಕೇ ವಾದ್ಯ ನುಡಿಸುತ್ತಿದ್ದ, ಕಲಾವಿದರೊಬ್ಬರ – ಲೋಕ ಸಂಗೀತ. ಸಿಂಧೂಭೈರವಿ, ದೇಶ್ ಮುಂತಾದ ರಾಗಗಳ ಛಾಯೆ ಕೇಳಿ ಬರುತಿತ್ತು.ಕುತೂಹಲದಿಂದ ಅವರ ಬಳಿ ಸಾಗಿದೆವು.ತನ್ನ ಕೆಲವು ಸಿ.ಡಿ ಗಳನ್ನು ಮಾರಾಟಕ್ಕೆ ಇಟ್ಟು, ತನ್ನ ಪಾಡಿಗೆ ತಾನು ವಾದ್ಯ ನುಡಿಸುತಿದ್ದರು. ಆ ಜಾನಪದ ವಾದ್ಯ 'ರಾವಣಹತ್ತಾ' ಎಂದು ಕರೆಯಲ್ಪಡುವ ಸಾರಂಗೀ ವಾದ್ಯದ ಕಚ್ಚಾಸ್ವರೂಪ. ಬಿದಿರಿನಂತಹ ಕೋಲಿಗೆ ಒಂದು ಬುರುಡೆ ಸಿಕ್ಕಿಸಿದಂತಿತ್ತು. ಕೋಲಿನ ಮೇಲ್ಬದಿಗೆ ತಂತಿಗಳಿದ್ದವು. ಹಿಂಬದಿಗೆ ಅಲಂಕಾರಿಕವಾಗಿ ಬಣ್ಣ ಬಣ್ಣದ ಕುಚ್ಚುಗಳನ್ನು ಕಟ್ಟಿದ್ದರು. ತುಂಬಾ ಮನಮೋಹಕವಾದ ನಾದ, ಹೇಗೆ ಸಾಧ್ಯವಾಗಿರಬಹುದು? ಎಂದು ಆ ವಾದ್ಯವನ್ನೇ ಹತ್ತಿರದಿಂದ ನೋಡಿದೆ. ಹಾಡುಗಳು ಮುಗಿದು ವಾದ್ಯ ಕೆಳಗೆ ಇಟ್ಟಾಗ ಅವರನ್ನೇ ಕೇಳಿದೆವು. ಕುದುರೆ ಬಾಲದ ಕೂದಲಿನಿಂದ ಮಾಡಿದ ತಂತಿಯನ್ನು ಕುದುರೆ ಬಾಲದ ಕೂದಲಿನಿಂದ ಮಾಡಿದ ಕಮಾನಿನಿಂದಲೇ ಎಳೆದು ನುಡಿಸುತಿದ್ದರು.ಉಳಿದ ಲೋಹದ ತಂತಿಗಳನ್ನು ಆಗಾಗ ಮೀಟುತಿದ್ದರು.ಕಮಾನಿನ ಒಂದು ತುದಿಗೆ ಕಟ್ಟಿಕೊಂಡ ಗೆಜ್ಜೆಯನ್ನು ತಾಳಕ್ಕೆ ಸರಿಯಾಗಿ ಆಡಿಸುತಿದ್ದರು. ಯಾವುದೇ ಪಕ್ಕವಾದ್ಯ ಬೇಕಿರಲಿಲ್ಲ. ವ್ಯಾಪಾರಕ್ಕೆ ಕುಳಿತಿದ್ದರೂ, ಅವರಲ್ಲಿ ಸಂಗೀತ ನುಡಿಸುವ, ಕೇಳುಗರಿದ್ದರೆ ಅವರನ್ನು ನೋಡಿ ಖುಶಿಪಡುವ ಆಸಕ್ತಿ ಇತ್ತೇ ಹೊರತು, ಸಿ.ಡಿ ಬಗ್ಗೆ ಏನೂ ಹೇಳಲಿಲ್ಲ. ನಾವೇ ಖುಶಿಯಿಂದ ಕೇಳಿ ಖರೀದಿಸಿದೆವು. ನಮ್ಮ ಮಾತು ಮುಗಿಯುತ್ತಲೇ, ಮತ್ತೆ ನುಡಿಸಲು ಆರಂಭಿಸಿದರು. ನಾವು ಅಲ್ಲಿಂದ ಹೊರಡುವವರೆಗೂ ಅವರ ಸಂಗೀತ ಕೇಳುತ್ತಲೇ ಇತ್ತು. ವಾದ್ಯ ಸಂಗೀತವನ್ನು ನಾಲ್ಕು ಗೋಡೆಗಳ ನಡುವೆ ಹಾಲ್‌ಗಳಲ್ಲಿ ಮೈಕ್ ನ ಮೂಲಕ ಕೇಳುವಾಗ ಸಿಗುವದಕ್ಕಿಂತ ಹೆಚ್ಚಿನ ಭಾವವು ತೆರೆದ ಬಯಲಿನಲ್ಲಿ ನುಡಿಸಿದಾಗ ಸಿಗಬಲ್ಲುದು ಎಂದೆನಿಸಿತು.

ಗಡ್ಸಿಸಾರ್ ನಲ್ಲಿ ಅಡ್ಡಾಡುತ್ತಿದ್ದಾಗ, ಅಲ್ಲಿಗೆ ೫೦ ಮೀ ದೂರದಲ್ಲೇ ಒಂದು ಮ್ಯೂಸಿಯ್‌ಂ ಇರುವುದಾಗಿಯೂ, ಅಲ್ಲಿ ದಿನಾ ಸಂಜೆ ೬.೩೦ ರ ಹೊತ್ತಿಗೆ ಗೊಂಬೆಯಾಟದ ಪ್ರದರ್ಶನವಿರುವುದೆಂದೂ ತಿಳಿಯಿತು. ಸುಧನ್ವನಿಗೆ ಫೋನಾಯಿಸಿದರೆ, ತನ್ನ ಆರೋಗ್ಯ ಸುಧಾರಿಸಿದೆ, ತಾನೂ ಬರುವೆನೆಂದ. ಕೂಡಲೇ ಹೋಟೆಲ್ ಗೆ ಹೋಗಿ ಅವನ ಸಹಿತ ಮ್ಯೂಸಿಯಂ ಕಡೆಗೆ ತೆರಳಿದೆವು.

ಶರ್ಮಾ ಅವರ ಸಂಗ್ರಹ



೬.೩೦ರ ಗೊಂಬೆಯಾಟಕ್ಕೆ, ತಲೆಗೆ ರೂ ೫೦ರ ಟಿಕೇಟು ಪಡೆದೆವು. ಆಟಕ್ಕೆ ಇನ್ನೂ ಸಮಯವಿರುವುದೆಂದು ವಸ್ತು ಸಂಗ್ರಹಾಲಯಕ್ಕೆ ಒಂದು ಸುತ್ತು ಬಂದೆವು. ರಾಜಸ್ಥಾನೀ ಉಡುಪುಗಳು, ದಿನ ಬಳಕೆಯ ವಸ್ತುಗಳು, ಸಂಗೀತ ವಾದ್ಯಗಳು, ಲೋಹ ಸಾಮಾಗ್ರಿಗಳು, ಒಂಟೆ ಚರ್ಮದ ವಸ್ತುಗಳು ಹೀಗೆ ಹತ್ತು, ಹಲವು ವಸ್ತುಗಳಿದ್ದವು.ಪ್ರವಾಸಿಗರಿಗೆ ಮಾಹಿತಿ ನೀಡುವ ಪುಸ್ತಕಗಳೂ, ಜಾನಪದ ಸಂಗೀತದ ಸಿ.ಡಿ ಗಳೂ ಮಾರಾಟಕ್ಕೆ ಲಭ್ಯವಿದ್ದವು.

ಕಾರ್ಯಕ್ರಮದ ಆರಂಭದಲ್ಲಿ ಒಬ್ಬ ವೃದ್ಧರು ಪ್ರಾಸ್ತಾವಿಕ ಮಾತುಗಳನ್ನಾಡಿದರು.ತಾನು ಒಬ್ಬ ನಿವೃತ್ತ ಶಿಕ್ಷಕ, ಎನ್.ಕೆ. ಶರ್ಮಾ ಎಂಬುದಾಗಿ ಪರಿಚಯಿಸಿಕೊಂಡರು.ರಾಜಸ್ಥಾನದ ಕಲೆ, ಸಂಸ್ಕೃತಿಯ ಉಳಿವಿಗಾಗಿ ಶ್ರಮಿಸುತ್ತಿರುವ ಇವರು, ತಾವೊಬ್ಬರೇ ಸಂಗ್ರಹಿಸಿದ ವಸ್ತುಗಳಿಂದಲೇ ಈ ಮ್ಯೂಸಿಯ್‌ಂ ನಡೆಸುತ್ತಿರುವುದು ತಿಳಿದು ಬಂತು. ಅವರ ಖರ್ಚಿನಿಂದಲೇ ಕಲಾವಿದರನ್ನು ಪೋಷಿಸುತ್ತಾ, ಈ ಗೊಂಬೆಯಾಟ ಪ್ರದರ್ಶನವನ್ನೂ ನಡೆಸಿಕೊಂಡು ಬರುತ್ತಿರುವುದಾಗಿ ತಿಳಿಸಿದರು. ತುಂಬಾ ಆಶ್ಚರ್ಯವಾಯಿತು! ಕಾರ್ಯಕ್ರಮ ನೋಡಲು ಕೇವಲ ೧೦ ಮಂದಿ ಇದ್ದೆವಷ್ಟೆ. ಆದರೂ ಯಾವುದೇ ಲೋಪವಿಲ್ಲದಂತೆ ಕ್ರಮ ಪ್ರಕಾರವಾಗಿ ನಡೆಸಿ ಕೊಟ್ಟರು. ಗೊಂಬೆಯಾಡಿಸಲು ಇಬ್ಬರು ಕಲಾವಿದರಿದ್ದರೆ, ಹಿನ್ನಲೆ ಸಂಗೀತಕ್ಕೆ ಮೂವರಿದ್ದರು. ಸುಮಾರು ೮–೧೦ ಹಾಡುಗಳಿಗೆ ಸರಿಯಾಗಿ ಗೊಂಬೆಗಳು ಕುಣಿದವು. ಶರ್ಮಾರವರು ಪ್ರತಿ ಹಾಡಿನ ಮೊದಲು ಅದರ ಅರ್ಥವನ್ನು ಇಂಗ್ಲೀಷ್ ಮತ್ತು ಹಿಂದಿ ಭಾಷೆಗಳಲ್ಲಿ ತಿಳಿಸುತ್ತಿದ್ದರು. ಗಣೇಶ ಸ್ತುತಿ, ಮರಳುಗಾಡಿನ ಬಾಲಕನ ಚೆಂಡಿನ ಆಟ, ಒಂಟೆ ಸವಾರಿಯ ಹಾಡು, ದೂರದ ಊರಿಗೆ ವ್ಯಾಪಾರಕ್ಕಾಗಿ ತೆರಳಿದ ಪತಿಯ ಸುರಕ್ಷೆಗಾಗಿ

ಪ್ರಾರ್ಥಿಸುವ ಪತ್ನಿ, ದೂರದ ಊರಿಂದ ವ್ಯಾಪಾರ ಮುಗಿಸಿ ವಾಪಾಸು ಬಂದಾಗ ಸ್ವಾಗತ ಗೀತೆ ಹೀಗೆ ಹಿಂದಿನ ಜೈಸಲ್ಮೇರ್ ಹೊರ ದೇಶಗಳೊಡನೆ ಹೇಗೆ ಸಂಪರ್ಕದಲ್ಲಿತ್ತು? ವ್ಯಾಪಾರದ ದಾರಿ ಯಾವುದು? ವ್ಯಾಪಾರಕ್ಕೆಂದು ಅರೇಬಿಯಾ ಆಫ್ರಿಕ, ಈಜಿಪ್ಟ್ ಗಳಿಂದ ವರ್ತಕರ ಆಗಮನ, ಅವರನ್ನು ಪ್ರೀತ್ಯಾದರಗಳಿಂದ ಬರಮಾಡಿಕೊಂಡ ಇಲ್ಲಿನ ಜನ ಮುಂತಾದ ವಿಷಯಗಳೆಲ್ಲಾ ತಿಳಿದವು.ಗೊಂಬೆಗಳು ಆವಾಗಾವಾಗ ಕೀ, ಕೀ ಎಂದು ಕೂಗುವ ಸದ್ದನ್ನು ಕಲಾವಿದರು ಮಾಡುತ್ತಿದ್ದರು. ನನಗೆ ಇದೊಂದು ವಿಚಿತ್ರವೆನಿಸಿತು. ಬಹುಶಃ ಪ್ರೇಕ್ಷಕರಿಗೆ ಇವು ಕೇವಲ ಗೊಂಬೆಗಳು, ವಾಸ್ತವವಲ್ಲ ಎಂದು ನೆನಪಿಸುವ ಕ್ರಮವಾಗಿ ಇದು ಬೆಳೆದು ಬಂದಿದೆಯೋ ಏನೋ. ಕಾರ್ಯಕ್ರಮವನ್ನು ಕಲಾವಿದರೆಲ್ಲರೂ ಚೊಕ್ಕದಾಗಿ ನೆರವೇರಿಸಿಕೊಟ್ಟರು. ಕೊನೆಯಲ್ಲಿ ಎಲ್ಲರೂ ಮುಂದೆ ಬಂದು ಒಟ್ಟಾಗಿ, ಅತಿಥಿಗಳಿಗೆ ನಮಸ್ಕರಿಸಿದರು.

ಇದಾದ ಬಳಿಕ ಅದೇ ಕಲಾವಿದರು ಗೊಂಬೆಗಳನ್ನು ತಯಾರಿಸುವ ಕ್ರಮವನ್ನೂ ತಿಳಿಸಿಕೊಟ್ಟದ್ದೇ ಅಲ್ಲದೆ, ಗೊಂಬೆ ಮಾರಾಟಕ್ಕೂ ಕುಳಿತರು. ನಮಗಂತೂ ನೂರಕ್ಕೆ ನೂರು ಪೈಸಾ ವಸೂಲಿಯಾದ ಕಾರ್ಯಕ್ರಮ.

ರಾತ್ರಿಯೂಟಕ್ಕೆ ನಾವಿದ್ದ ಹೋಟೆಲ್ ನಲ್ಲಿಯೇ ರಾಜಸ್ಥಾನೀ ಊಟದ ವ್ಯವಸ್ಥೆ ಇತ್ತು. ಅಲ್ಲಿ ಬೆಳೆಯುವ ಬೀನ್ಸ್ ತರದ ತರಕಾರಿಯ ಪಲ್ಯ, ರೋಟಿ, ಅನ್ನ, ಗಟ್ಟಿ ಮೊಸರು.

ಹೀಗೆ ಜೈಸಲ್ಮೇರ್ ನ ಮೊದಲ ದಿನ ತುಂಬಾ ಸಂತೃಪ್ತಿಯಲ್ಲಿ ಕಳೆಯಿತು.

ಫಾಸಿಲ್ ಪಾರ್ಕ್
(ದಿನ ಮೂರು)







ಜನವರಿ ೨೮ ರ ಬೆಳಗು ಹಕ್ಕಿಗಳ ಚಿಲಿಪಿಲಿಯಿಂದ ಆರಂಭವಾಯಿತು. ಹಿಂದಿನ ರಾತ್ರಿ ನಮಗೆ ಚಳಿ ಜೋರೇ ಇದ್ದರೂ, ನಿದ್ದೆ ಚೆನ್ನಾಗಿ ಬಂದಿತ್ತು. ಕಿಟಿಕಿಯಿಂದ ಹೊರಗೆ ನೋಡಿದಾಗ, ನೂರಾರು ಗುಬ್ಬಿಗಳೂ, ಗಿಳಿಗಳೂ, ಬಿಳಿ ಪಾರಿವಾಳಗಳೂ ಹಾರಾಡುತ್ತಿದ್ದವು.ನಾವಿದ್ದ ಹೋಟೆಲ್ಲಿಂದ ಕೋಟೆಯೂ ಕಾಣುತ್ತಿತ್ತು. ಉದಯ ಸೂರ್ಯನ ಕಿರಣಗಳು ಬಿದ್ದು ಕೋಟೆ ಬೆಳಗುವುದನ್ನು ನೋಡಿ ಆನಂದಿಸಿದೆವು.ರಸ್ತೆ ಗುಡಿಸುವ ಹೆಂಗಸು, ಕಾಲು ಚೀಲ ಬೂಟ್ ಧರಿಸಿ, ಸ್ವೆಟರ್, ಸೆರಗು ಹೊದೆದಿದ್ದರು. ಒಂದೆಡೆ ಲಂಬಾಣಿ ಹೆಂಗಸರು, ರಸ್ತೆ ಬದಿಯಲ್ಲಿ ಬೆಂಕಿ ಹಾಕಿ ಚಳಿ ಕಾಯಿಸುತ್ತಿದ್ದರೆ, ದಾರಿಹೋಕರು ಬಂದು ಕುಳಿತು ತಾವೂ ಮೈ, ಕೈ ಬೆಚ್ಚಗೆ ಮಾಡಿಕೊಳ್ಳುತ್ತಿದ್ದರು.

ನಮ್ಮ ಬೆಳಗ್ಗಿನ ತಿಂಡಿ ಅದೇ ಹೊಟೆಲಿನಲ್ಲಿ ಎಂದು ತೀರ್ಮಾನವಾಗಿತ್ತಾದ್ದರಿಂದ, ಬೆಳಗಿನ ಸೊಬಗು ನೋಡುತ್ತಾ, ಅಲ್ಲಿ ತಂಗಿದ್ದ ವಿದೇಶಿ ಅತಿಥಿಗಳನ್ನೂ, ಅವರ ನಡವಳಿಕೆಗಳನ್ನೂ ಗಮನಿಸುತ್ತಾ, ನಮ್ಮಷ್ಟಕ್ಕೇ ಮಾತಾಡುತ್ತಾ, ತಿಂಡಿಗಾಗಿ ಕಾದೆವು. ಬಿಸಿ ಬಿಸಿ ಆಲೂ ಪರಾಠ, ಗಟ್ಟಿ ಮೊಸರು ಆ ಚಳಿಗೆ ತುಂಬಾ ಹಿತವೆನಿಸಿತು.ತಿಂಡಿ ತಿನ್ನುತ್ತಾ, ಅಂದಿನ ಕಾರ್ಯಕ್ರಮದ ಬಗ್ಗೆ ಚರ್ಚಿಸಿದೆವು. ಆ ದಿನ ಸಂಜೆಯ ಒಳಗೆ ನಾವು ಅಲ್ಲಿಗೆ ೪೦ ಕಿ.ಮೀ ದೂರದ ಸಮ್ ಎಂಬ ಜಾಗಕ್ಕೆ ತೆರಳಬೇಕಿತ್ತು. ಅಂದಿನ ರಾತ್ರಿಯನ್ನು ಮರುಭೂಮಿಗೆ ಸಮೀಪದ ಟೆಂಟ್ ಒಂದರಲ್ಲಿ ಕಳೆಯುವವರಿದ್ದೆವು.ಈ ವ್ಯವಸ್ಥೆಯನ್ನು ಮಾಡಿದ್ದು ಆ ಹೋಟೆಲ್ಲಿನವರೇ ಆದ್ದರಿಂದ, ಮ್ಯಾನೇಜರರ ಬಳಿ ಈ ಬಗ್ಗೆ ಸಾಕಷ್ಟು ಮಾಹಿತಿ ಪಡೆದೆವು.ಚಳಿ ತಡೆಯಲು ಬೇಕಾದ ವ್ಯವಸ್ಥೆ ಅಲ್ಲಿರುವುದೇ? ಎಂಬ ನಮ್ಮ ಪ್ರಶ್ನೆಗೆ ಸಕಾರಾತ್ಮಕವಾಗಿ ಉತ್ತರಿಸಿದರು. ಆದರೂ, ಬಚ್ಚಲಿನ ವ್ಯವಸ್ಥೆ ಬಗ್ಗೆ ಗ್ಯಾರಂಟಿ ಕೊಡಲಾರೆ, ಹೋಗಿ ನೋಡಿ, ಒಂದು ವೇಳೆ ನಿಮಗೆ ಕಷ್ಟವೆನಿಸಿದರೆ, ರಾತ್ರಿ ಊಟ ಮುಗಿಸಿ, ಹೇಗೂ ಕಾರ್ ಇದೆಯಲ್ಲಾ, ಇಲ್ಲಿಗೇ ವಾಪಾಸ್ ಬಂದುಬಿಡಿ ಎಂದರು. ಎಲ್ಲಿಗೇ ಪ್ರವಾಸ ಹೊರಟಾಗಲೂ ನನಗೆ ಬಚ್ಚಲಿನದೇ ಚಿಂತೆ. ಮ್ಯಾನೇಜರರ ಮಾತುಗಳನ್ನು ಕೇಳಿ ಸಣ್ಣಗೆ ಪುಕು ಪುಕು ಆಯಿತು. ಏನೇ ಆದರೂ, ಮನೋಹರ್ ಅಂತೂ ಟೆಂಟ್ ಬಿಟ್ಟು ಬರಲು ಒಪ್ಪುವುದಿಲ್ಲ ಎಂದು ತಿಳಿದಿತ್ತು. ಭಾರತ್ ವಿಲಾಸ್ ಹೋಟೆಲ್ಲಿಂದ ಸಾಮಾನು, ಸರಂಜಾಮುಗಳನ್ನು ಕಟ್ಟಿಕೊಂಡು ಹೊರಟೆವು.ಜೈಸಲ್ಮೇರ್ ಬಿಡುವ ಮೊದಲು ನಮ್ಮ ಆಸಕ್ತಿಯ ಯಾವ ಸ್ಥಳವನ್ನೂ ನೋಡದೇ ಬಿಡಬಾರದು ಎಂದು ಗೂಗಲಿಸಿದೆವು. ಮನೋಹರ್ ಮೊದಲೇ ಮಾಡಿಟ್ಟ ಪಟ್ಟಿಯನ್ನು ಮತ್ತೊಮ್ಮೆ ಪರಾಮರ್ಶಿಸಿದೆವು. ಫಾಸಿಲ್ ಪಾರ್ಕ್ ಎಂಬ ಹೆಸರೊಂದು ನಮ್ಮ ಗಮನ ಸೆಳೆದಿತ್ತು. ಇದರ ಬಗ್ಗೆ ಡ್ರೈವರನ್ನು ಕೇಳಿದರೆ, ಅವರು ಸಸೂತ್ರ ಉತ್ತರ ಕೊಡಲಿಲ್ಲ. ನಮ್ಮನ್ನು ೪೦ ಕಿ.ಮೀ ದೂರದ ಯಾವುದೋ ದೇವಸ್ಥಾನಕ್ಕೆ ಎಳೆದೊಯ್ಯುವುದರಲ್ಲೇ ಅವರಿಗೆ ಆಸಕ್ತಿ ಇದ್ದ ಹಾಗಿತ್ತು. ಗೂಗಲಿನಲ್ಲಿ, ವಿಶೇಷ ಸಹಾಯ ಸಿಕ್ಕಲಿಲ್ಲ. ಇನ್ನು ಏನಪ್ಪಾ ಮಾಡುವುದು? ಎಂದು ಯೋಚಿಸುತ್ತಿದ್ದಾಗ, ಹಿಂದಿನ ರಾತ್ರಿ ನಾವು ನೋಡಿದ ಮ್ಯೂಸಿಯ್ಂ ಪಕ್ಕದಲ್ಲೇ ಒಂದು ಪ್ರವಾಸಿಗರ ಮಾಹಿತಿ ಕೇಂದ್ರ ನೋಡಿದ್ದು ನೆನಪಾಯಿತು. ನಾನು ಇದನ್ನು ಹೇಳುವುದೂ, ನಮ್ಮ ಕಾರ್ ಆ ಕಟ್ಟಡದ ಎದುರಿನಲ್ಲಿ ಹಾದು ಹೋಗುವುದೂ ಸರಿಯಾಯಿತು.ತಕ್ಷಣವೇ ಕಾರು ನಿಲ್ಲಿಸಿ, ಅಪ್ಪ– ಮಗ ಆಫೀಸಿನ ಕೌಂಟರ್ ನೆಡೆಗೆ ಓಡಿದರು. ಅಲ್ಲಿ ವಿವರವಾಗಿ ಮಾಹಿತಿ ಸಂಗ್ರಹಿಸಿ ಬಂದರು. ಈಗ ಸಾರಥಿಗೆ ನಾವೇ ನಿರ್ದೇಶನ ಕೊಟ್ಟು, ಅದೇ ರಸ್ತೆಯಲ್ಲಿ ೧೫ ಕಿ.ಮೀ ಮುಂದಕ್ಕೆ ಹೋಗಲು ಹೇಳಿದೆವು. ಮುಂದಿನ ೧೦ ನಿಮಿಷಗಳಲ್ಲಿ ಅವರು ನಮ್ಮನ್ನು ಫಾಸಿಲ್ ಪಾರ್ಕ್ ನ ಎದುರು ನಿಲ್ಲಿಸಿದ್ದರು!



ನಾವು ಊಹಿಸಿದಂತೇ, ಫಾಸಿಲ್ ಪಾರ್ಕ್ ನಲ್ಲಿ ನಾವಲ್ಲದೆ, ಇನ್ನಾರೂ ಪ್ರವಾಸಿಗರಿರಲಿಲ್ಲ. ಗೇಟಿನ ಬಳಿ ಒಬ್ಬರು ವಯಸ್ಸಾದ ಕಾವಲುಗಾರರಿದ್ದರು. ಅವರೇ ಕಾರಿನ ಬಳಿ ಬಂದು, ಟಿಕೆಟ್‌ಗೆ ದುಡ್ಡು ಪಡಕೊಂಡು, ರಸೀದಿ ಹರಿದು ಕೊಟ್ಟರು. ಅಲ್ಲೇ ಪಕ್ಕ ಇದ್ದ ಗುಡಿಸಲಿನಲ್ಲಿ ಅವರ ವಾಸವಂತೆ. ಗೇಟಿನ ಒಳಗೆ ಬಂದ ಮೇಲೆ ಸುಮಾರು ೨-೩ ಕಿ.ಮೀಗಳಷ್ಟು ಮಣ್ಣು ರಸ್ತೆಯಲ್ಲಿ ಪ್ರಯಾಣಿಸಿದೆವು. ಮೊದಲಿಗೆ ಕೆಲವು ಔಷಧೀಯ ಮರಗಳು ಕಂಡು ಬಂದವು. ಮುಂದೆ ಮುಂದೆ ಹೋದಂತೆ, ಬೋಳು ಗುಡ್ಡೆಗಳು ಎದುರಾದವು.ಆ ರಸ್ತೆಯಲ್ಲೇ, ಸಾಧ್ಯವಾದಷ್ಟು ದೂರ ಕಾರಿನಲ್ಲಿ ಹೋದೆವು. ಇಲ್ಲಿ ಏನನ್ನು ನೋಡಬೇಕು? ಎಲ್ಲಿಂದ ನಡೆಯುವುದು? ಎಂಬ ಸ್ಪಷ್ಟತೆ ಇರಲಿಲ್ಲ. ಟಿಕೆಟಿನ ಜತೆ ಇಂಗ್ಲೀಷಿನಲ್ಲಿ ಬರೆದ ಪತ್ರವೊಂದನ್ನು ಕೊಟ್ಟಿದ್ದರು. ಅದರಲ್ಲಿ ಫಾಸಿಲ್ ಉಡ್ ಅಂದರೆ ಏನು? ಅದರ ವಿವಿಧ ನಮೂನೆಗಳು, ಅವು ಯಾವ ಕಾಲಮಾನವನ್ನು ಸೂಚಿಸುತ್ತವೆ ಎಂಬಿತ್ಯಾದಿ ವಿವರಗಳಷ್ಟೇ ಇದ್ದವು.







ಕಾರ್ ನಿಲ್ಲಿಸಿದಲ್ಲಿಂದ, ಅನತಿ ದೂರದಲ್ಲಿ ಕಬ್ಬಿಣದ ಸರಳುಗಳುಳ್ಳ ಪೆಟ್ಟಿಗೆಗಳಂತಹ ರಚನೆಗಳು ಕಂಡು ಬಂದವು. ಅಂತೂ ನಾವು ನೋಡಬೇಕಾದ್ದು ಅದೇ ಇರಬೇಕೆಂದು ತೀರ್ಮಾನಿಸಿ, ಅಲ್ಲಿಗೆ ನಡಕೊಂಡು ಹೋದೆವು. ಒಂದು ಮರದ ತುಂಡಿನಂತಹ ವಸ್ತುವನ್ನು ಭಾರೀ ಜತನದಿಂದ, ಪಂಜರದಲ್ಲಿಟ್ಟು, ಬೀಗ ಜಡಿಯಲಾಗಿತ್ತು.ಮರದ ಬೊಡ್ಡೆಯಂತಿದ್ದರೂ, ಮುಟ್ಟಿದಾಗ ಅದು ಕಲ್ಲು ಎಂಬುದು ಅರ್ಥವಾಯಿತು. ಈ ರೀತಿ ಸುಮಾರು ೧೩ ಕಡೆಗಳಲ್ಲಿ, ಪಳೆಯುಳಿಕೆಗಳನ್ನು ಜೋಡಿಸಿ, ಮಲಗಿಸಿದ್ದಾರೆ. ನಾವು ಆಹ್! ಓಹ್! ಎಂದು ಫೋಟೋ ಕ್ಲಿಕ್ಕಿಸುವ ಪರಿಗೆ, ಕಬ್ಬಿಣದ ಪಂಜರದೊಳಗೆ ಏನೋ ಅಪರೂಪದ್ದು ಇರಬೇಕು ಎಂದು ಕುತೂಹಲದಿಂದ ಹೇಮಜೀ ಯವರು ಕಾರು ನಿಲ್ಲಿಸಿದ ಜಾಗಕ್ಕೆ ಅತಿ ಹತ್ತಿರವಿದ್ದ ಒಂದು ಪಂಜರದೆಡೆಗೆ ಬಂದು ಇಣುಕಿದರು. “ಏ ತೋ ಪಥ್ಥರ್ ಹೈ”! ಎಂದು ಉದ್ಗರಿಸಿದರು. ಈ ಕಲ್ಲಿನ ತುಂಡು ನೋಡಲು ಈ ಹುಚ್ಚರು ಅಷ್ಟು ದೂರ ಕಾರು ಓಡಿಸಿ ಬಂದರಲ್ಲಾ! ಎಂದು ಅವರಿಗೆ ಆಘಾತವಾಗಿತ್ತು. “ಏ ಸಿರ್ಫ್ ಪಥ್ಥರ್ ನಹೀ, ಲಕ್ಡೀ ಥೀ, ಎ ಅಬ್ ಪಥ್ಥರ್ ಬನ್ ಗಯಾ, ಬಹುತ್ ಪುರಾನಾ ಲಕ್ಡೀ, ಲಗ್ ಬಗ್ ೨ ಕರೋಡ್ ವರ್ಷ್ ಪೆಹಲೇ ಕಾ” ಎಂದರೆ, “ನಿಮಗೆ ಹುಚ್ಚು ಅನ್ನುವುದು ನನಗೆ ೧೦೦% ಗ್ಯಾರಂಟಿಯಾಯಿತು” ಎಂಬಂತೆ ಸಣ್ಣಗೆ ನಕ್ಕರು. “ಇಂತಹವು ನನ್ನ ಹುಟ್ಟೂರಲ್ಲಿ ಎಷ್ಟೊಂದು ಇವೆ" ಎಂದರು.ಮುಂದಿನ ಕ್ಷಣದಿಂದ ಆ ಪಂಜರದ ಬಗ್ಗೂ, ನಮ್ಮ ಬಗ್ಗೂ ಅವರಿಗೆ ಒಂದಿನಿತೂ ಕುತೂಹಲ ಉಳಿದಿರಲಿಲ್ಲ. ಸೀದಾ ಕಾರು ಹತ್ತಿ ಕುಳಿತರು.

ನಾವೇ ನಾವಾಗಿದ್ದ ಆ ಬೋಳು ಗುಡ್ಡವನ್ನು ಕಣ್ತುಂಬಾ ನೋಡಿದೆವು. ಕಾಲಿಟ್ಟಲ್ಲಿ ಬುರಬುರನೆ ಕಲ್ಲಿನ ತುಂಡುಗಳು ಕೆಳಗೆ ಬೀಳುತ್ತಿದ್ದವು. ಅಲ್ಲಿ ಒಂದು ಪುಟ್ಟ ಹಕ್ಕಿ, ತನ್ನ ಕಳೆದು ಹೋದ ಮರಿಗಾಗಿಯೋ, ಸಂಗಾತಿಗಾಗಿಯೋ ಒಂಟಿ ರೋದನದಲ್ಲಿ ತೊಡಗಿತ್ತು. ನಮ್ಮ ಪ್ರವೇಶದಿಂದ ಅದರ ಶೋಕಾಚರಣೆಗೆ ಭಂಗವಾದಂತೆ ತೋರಿತು. ‘ಭಾಷೆ ಇಲ್ಲದ ಮನುಷ್ಯ’ ಎಂದು ತಿರಸ್ಕಾರದ ನೋಟ ಕೊಟ್ಟು ಹಾರಿ ಹೋಯಿತು.

ಮರುಭೂಮಿಗೆ ಮಾರುಹೋದವರು





ಸುಮಾರು ಕಿ.ಮೀಗಳವರೆಗೂ ಬರೀ ಬೋಳು ಗುಡ್ಡೆಗಳೇ ಕಾಣುತ್ತಿದ್ದವು. ಸುಮಾರು ೩೧೬೨ ಚದರ ಕಿ.ಮೀಗಳಷ್ಟಿರುವ ಈ ಭೂಭಾಗ, ಮರುಭೂಮಿಯ ರಕ್ಷಿತಾರಣ್ಯವಾಗಿದೆ.ಸುಮಾರು ೨ ಕೋಟಿ ವರ್ಷಗಳ ಹಿಂದೆ, ನಿಜಕ್ಕೂ ದಟ್ಟ ಅರಣ್ಯವಾಗಿದ್ದ ಈ ಭೂಭಾಗ, ಯಾವುದೋ ಉಲ್ಕಾಘಾತವೋ ಇನ್ನಿತರ ಪ್ರಾಕೃತಿಕ ವಿಕೋಪಕ್ಕೋ ಬಲಿಯಾಗಿ ಮುಂದೆ ಮರುಭೂಮಿಯಾಯಿತಂತೆ.ಇದರ ಬಗ್ಗೆ ಅಲ್ಲಿ ಸಾಕಷ್ಟು ಪುರಾವೆಗಳಿವೆ.

ಒಂದಿಷ್ಟೂ ಹಸಿರು ಕಾಣದ ಬರೀ ಕಲ್ಲುಗಳ ಬೋಳು ಗುಡ್ಡೆಯಲ್ಲಿ ಬಿಸಿಲಿನ ಝಳ ಹೆಚ್ಚಿದಂತೆ, ನಿಲ್ಲಲಾಗದೇ ಕೆಳಗಿಳಿದೆವು. ಎಲ್ಲಾ ೧೩ ಪಂಜರಗಳನ್ನೂ ನೋಡಿ ಏನೂ ವ್ಯತ್ಯಾಸವಿಲ್ಲದೆಂದು ಖಚಿತಪಡಿಸಿಕೊಂಡು, ಕಾರಿನಲ್ಲಿ ಗೇಟಿನ ಬಳಿ ಬಂದೆವು. ಅಲ್ಲಿದ್ದ ಔಷಧೀಯ ಮರಗಳಲ್ಲಿ ಕೆಲವು ಹಕ್ಕಿಗಳಿದ್ದವು. ಅವುಗಳ ಚಿಲಿಪಿಲಿಯನ್ನೂ, ನಮ್ಮೂರಿನವಕ್ಕಿಂತ ಭಿನ್ನವಾಗಿರುವ ಅವುಗಳ ಬಣ್ಣವನ್ನೂ ಗುರುತಿಸಿಕೊಂಡೆವು. ಅಲ್ಲಿನ ಅಳಿಲಿನ ಮೈ ಬಣ್ಣವೂ ಭಿನ್ನವಾಗಿತ್ತು.ಸಾಕಷ್ಟು ಚಿತ್ರಗಳನ್ನು ಕ್ಲಿಕ್ಕಿಸಿ, ಅಲ್ಲೇ ಇದ್ದ ಬುಗರಿ ಗಿಡದ ಹಣ್ಣುಗಳನ್ನು ಕಿತ್ತುಕೊಂಡೆವು.

ಇಡೀ ಸಂಸಾರವೇ ಹುಚ್ಚರದ್ದು ಎಂದು ಖಾತ್ರಿಯಾದ ಮೇಲೆ ಡ್ರೈವರ್ ಸಾಹೇಬರು, ಮುಂದೆ ಯಾವುದೇ ಸ್ಥಳದ ಬಗ್ಗೆ ನಮಗೆ ಸಲಹೆ ಕೊಡುತ್ತಿರಲಿಲ್ಲ. ನಾವು ಹೇಳಿದಲ್ಲಿಗೆ ಮರು ಮಾತಾಡದೇ ಕರೆದೊಯ್ಯುತ್ತಿದ್ದರು.



ಸಾಧಾರಣವಾಗಿ ಜೈಸಲ್ಮೇರ್ ನಲ್ಲಿ ಪ್ರವಾಸಿಗರು ನೋಡುವುದನ್ನು ಮುಗಿಸಿದ್ದೆವಾದರೂ, ನಮ್ಮ ಪಟ್ಟಿಯಲ್ಲಿ ಇನ್ನೂ ಹಲವು ಇದ್ದವು. ಅದರಲ್ಲಿ ಸೀಮಾಗ್ರಾಂ ಎನ್ನುವುದು, ಖಾದಿ ಬಟ್ಟೆಗಳು ತಯಾರಾಗುವ ಜಾಗ ಎಂಬುದಾಗಿ ತಿಳಕೊಂಡಿದ್ದೆವು. ನೋಡುವ ಕುತೂಹಲವೂ, ಕಾಲಾವಕಾಶವೂ ಇತ್ತಾದರೂ, ಅದನ್ನು ಹುಡುಕುವ ಬಗೆ ಹೇಗೆ? ಎಂದು ಯೋಚನೆಯಾಯಿತು. ಸೀಮಾಗ್ರಾಂ ಎಂಬ ಜಾಗದ ಬಗ್ಗೆ ತಿಳಿದಿದೆಯೇ? ಎಂದು ಹೇಮ್ ಜೀ ಯವರನ್ನು ಕೇಳಿದೆವು. ಇದರ ವಿವರಣೆಗೆ ಮಹಾತ್ಮಾ ಗಾಂಧೀ ಎಂಬ ಹೆಸರನ್ನೂ ಹೇಳಿದೆವು. ಏನೋ ಈ ತರಹದ್ದು ಕೇಳಿದ ಹಾಗಿದೆ, ಪ್ರಯತ್ನಿಸುವಾ ಅಂದರು. ಸೀದಾ ವಾಪಾಸು ಜೈಸಲ್ಮೇರ್ ಕಡೆಗೆ ಗಾಡಿ ಓಡಿಸಿ, ಊರಿನ ಹೃದಯಭಾಗದಲ್ಲಿರುವ ಗಾಂಧೀ ಚೌಕ್ ನ ಬಳಿ ಬಂದರು. ಒಂದೆಡೆ ಕಾರು ನಿಲ್ಲಿಸಿ, ಇಲ್ಲೇ ಇದೆ, ಹೀಗೆ ಹೋಗಿ ಎಂದು ಒಂದು ದೊಡ್ಡ ಕಟ್ಟಡವನ್ನು ತೋರಿಸಿದರು. ಒಳಹೊಕ್ಕು ನೋಡಿದರೆ, ಎಲ್ಲೂ ನಮ್ಮ ಖಾದಿ ಗ್ರಾಮ ಕಾಣಿಸಲೇ ಇಲ್ಲ. ಬದಲಾಗಿ, ಮಂದಿರ ಪ್ಯಾಲೇಸ್‌ನ ಟಿಕೆಟ್ ಕೌಂಟರ್ ಕಾಣಿಸಿತು. ಬೇಸ್ತು ಬಿದ್ದೆವು ಎಂದು ಅರಿವಾದರೂ, ಇದನ್ನೂ ನೋಡೇ ಬಿಡೋಣ ಎಂದು ಟಿಕೆಟ್ ಕೊಂಡೆವು. ಇದೊಂದು ಅರಮನೆಯ ಭಾಗ, ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ಒಂದು ಭಾಗದಲ್ಲಿ ಐಷಾರಾಮೀ ಹೋಟೆಲ್ ಕೂಡಾ ಇದೆ.ಅಲ್ಲಿಗೆ ನಮಗೆ ಪ್ರವೇಶವಿಲ್ಲ. ಹತ್ತೇ ನಿಮಿಷದಲ್ಲಿ ಒಂದು ಸುತ್ತು ಹಾಕಿ ಮುಗಿಸಿದೆವು. ಇಲ್ಲಿಯೂ ಅದ್ಭುತ ಕೆತ್ತನೆಗಳಿದ್ದವು. ದೊಡ್ಡ ದೊಡ್ಡ ಪಾತ್ರೆ, ಪರಿಕರಗಳು ಇದ್ದವು. ನಮಗೆ ಅಷ್ಟರಲ್ಲೇ, ಹಳೆ ವಸ್ತುಗಳ ಮೋಹ ತೊಲಗಿತ್ತಾದ್ದರಿಂದ, ಬೇಗನೇ ಅಲ್ಲಿಂದ ಕಾಲ್ಕಿತ್ತು, ಮತ್ತೆ ಖಾದಿ ಬೇಟೆಗೆ ಹೊರಟೆವು.

ಸುಧನ್ವನ ಜಿ.ಪಿ.ಎಸ್ ಕೂಡಾ ನಾವಿದ್ದ ಜಾಗದಲ್ಲೇ ಖಾದಿಭವನವಿರುವುದೆಂದು ತೋರಿಸುತ್ತಿತ್ತು. ಆದರೂ ಅದು ಕಣ್ಣಿಗೆ ಬೀಳಲಿಲ್ಲ. ಮತ್ತೆ ಹೇಮ್ ಜೀ ಯವರು ದಾರಿಹೋಕರನ್ನೆಲ್ಲಾ ಕೇಳುತ್ತಾ, ಇಡೀ ಊರಿಗೆ ಮತ್ತೊಂದು ಸುತ್ತು ಹೊಡೆದರು. ಅಂತೂ ಸುಮಾರು ಅರ್ಧ ಗಂಟೆ ಸುತ್ತಾಡಿದ ಮೇಲೆ, ನಾವು ಹುಡುಕುತ್ತಿದ್ದ ಸೀಮಾಗ್ರಾಂ ಅಲ್ಲೇ ಕೋಟೆಯ ಹತ್ತಿರದಲ್ಲೇ ಇದ್ದುದ್ದು ತಿಳಿಯಿತು.





ಸೀಮಾಗ್ರಾಂನಲ್ಲಿ ಖಾದಿ ಬಟ್ಟೆಗಳ ಮಾರಾಟದ ಮಳಿಗೆ ಮಾತ್ರಾ ಇದೆ. ತಯಾರಿಸುವ ಘಟಕ ದೂರದ ಹಳ್ಳಿಗಳಲ್ಲಿರುವುದು ಎಂದು ತಿಳಿದು ನಿರಾಸೆಯಾಯಿತು. ಹೆಸರಿನಲ್ಲಿದ್ದ, 'ಗ್ರಾಂ' ನಮ್ಮನ್ನು ಬೇಸ್ತು ಬೀಳಿಸಿತ್ತು. ಆದರೂ ಖಾದಿ ಬಟ್ಟೆಗಳ ಸಂಗ್ರಹ ಮನ ಸೆಳೆಯಿತು; ಬಟ್ಟೆಗಳ ಖರೀದಿ ಮಾಡಿ ಬೇಸರ ನೀಗಿಸಿಕೊಂಡೆವು.

ಅಲ್ಲೇ ಹತ್ತಿರವಿದ್ದ ಹೋಟೆಲಲ್ಲಿ ರಾಜಸ್ಥಾನೀ ತಾಲಿಯ ಊಟ ಮಾಡಿ ಇನ್ನುಳಿದ ಜಾಗಗಳನ್ನೂ ನೋಡಲು ನಿರ್ಧರಿಸಿದೆವು.



ಬಡಾ ಬಾಗ್

ಬಡಾ ಬಾಗ್ ಜೈಸಲ್ಮೇರ್ ನಿಂದ ೫ ಕಿ.ಮೀ ದೂರದಲ್ಲಿದೆ. ಕಾರಿನಲ್ಲಿ ೧೦ ನಿಮಿಷಗಳಲ್ಲಿ ತಲಪಿದೆವು. ಬಡಾಬಾಗ್‌ಗೆ ಹೋಗುವ ದಾರಿಯು ಗಡಿ ರಕ್ಷಣಾ ದಳದ ಕ್ಯಾಂಪ್‌ನ ಮೂಲಕವೇ ಸಾಗುತ್ತದೆ. ಇಲ್ಲಿ ಜನವಸತಿಯೂ ಕಡಿಮೆ, ವಾಹನ ಸಂಚಾರವೂ ಅಷ್ಟೇ. ಹಗಲಿನಲ್ಲೇ ದಾರಿ ತಪ್ಪಿದರೆ, ಕೇಳಲು ಯಾರೂ ಸಿಗುವುದಿಲ್ಲ. ಪ್ರವಾಸಿಗರು ಇಲ್ಲಿಗೆ ಬರುವುದೂ ಕಡಿಮೆಯೇ. ನಾವಿದ್ದ ಅರ್ಧ ಗಂಟೆಯಲ್ಲಿ ನಮ್ಮ ಹೊರತಾಗಿ ಇನ್ನೊಂದು ವಿದೇಶೀಯರನ್ನು ಹೊತ್ತ ವಾಹನ ಮಾತ್ರ ಅಲ್ಲಿಗೆ ಬಂದದ್ದು.





ಬಡಾಬಾಗ್ ನಲ್ಲಿಜೈಸಲ್ಮೆರ್ ನ್ನು ಆಳಿದ ರಾಜರುಗಳ ಸ್ಮಾರಕಗಳಿವೆ. ಒಬ್ಬೊಬ್ಬ ರಾಜನಿಗೂ ಒಂದೊಂದು ಕೊಡೆಯಾಕಾರದ ಮಂಟಪದ ಸ್ಮಾರಕವನ್ನು ಕಟ್ಟಿದ್ದಾರೆ. ಹೀಗೆ, ದೂರದಿಂದಲೇ ನೂರಾರು ಕಲ್ಲಿನ ಕೊಡೆಗಳನ್ನು ಕಟ್ಟಿದಂತೆ ಕಾಣುತ್ತದೆ. ಸುಂದರ ಕೆತ್ತನೆಯೂ ಇರುವುದರಿಂದ, ಆಕರ್ಷಣೀಯವಾಗಿದೆ. ಕ್ರಿ.ಶ ೧೭೪೩ ರಲ್ಲಿ ಮರಣ ಹೊಂದಿದ ರಾಜಾ ಜೈ ಸಿಂಗ್ ರಿಂದ ಆರಂಭವಾಗಿ ಸ್ವಾತಂತ್ರ್ಯ ಸಿಗುವವರೆಗೆ ಆಳಿದ ಎಲ್ಲಾ ರಾಜರುಗಳಿಗೆ ಒಂದೊಂದು ಕೊಡೆ ಇದೆ. ಕೊನೆಯ ರಾಜ ಜವಹರ ಸಿಂಗ್ ರ ಸ್ಮಾರಕದ ಕೆಲಸ ಮಾತ್ರ ಅಪೂರ್ಣವಾಗಿ ನಿಂತಿದೆ. ಬಡಾಬಾಗ್, ಒಂದು ಕಾಲಕ್ಕೆ ಉದ್ಯಾನವನಕ್ಕೆ ಹೆಸರುವಾಸಿಯಾಗಿದ್ದರೂ, ಈಗ ಏನೂ ಇಲ್ಲ. ಬೋಳು

ಗುಡ್ಡೆಯ ಮೇಲೆ ನೂರಾರು ಕಲ್ಲಿನ ಛತ್ರಿಗಳು.ಅಲ್ಲಲ್ಲಿ ಕೆಲವು ಮರಗಳಿವೆ. ಒಂದು ಮಾವಿನ ಮರವೂ ಇತ್ತು.ಜೈಸಲ್ಮೇರ್ ಪ್ರದೇಶದಲ್ಲಿ ಬೇವು, ಜಾಲಿ ಮರಗಳು ತುಂಬಾ ಕಂಡು ಬಂದವು.ಮರುಭೂಮಿಯ ಭಾಗದಲ್ಲಿ ಕಳ್ಳಿ, ಕುರುಚಲು ಪೊದೆಗಳು ಇವೆ. ಜನವಸತಿ ಹೆಚ್ಚಿರುವ ಹಳ್ಳಿಗಳಲ್ಲಿ ಹಸಿರು ಸ್ವಲ್ಪ ಜಾಸ್ತಿ.

ಲುಧರ್ವ

ಬಡಾಬಾಗ್‌ನಿಂದ ಸುಮಾರು ೧೫ ಕಿ.ಮೀ ಗಳಷ್ಟು ದೂರದಲ್ಲಿ ಲುಧರ್ವ ಎಂಬ ಹಳ್ಳಿಗೆ ಹೋಗುವುದೆಂದು ನಿರ್ಧರಿಸಿದೆವು. ಹೇಮ್ ಜೀಯವರು ಆ ಕಡೆಗೆ ಗಾಡಿ ತಿರುಗಿಸಿದರೂ, ಅನುಮಾನವಾಗಿ ದಾರಿಹೋಕರನ್ನು ಕೇಳಿ ರಸ್ತೆ ಸರಿಯಾದುದೆಂದು ಖಚಿತಪಡಿಸಿಕೊಂಡರು. ನಾವೂ ಜಿ.ಪಿ.ಎಸ್ ಹಾಕಿ ಮತ್ತೊಮ್ಮೆ ಖಚಿತಪಡಿಸಿಕೊಂಡೆವು.

ಈ ರಸ್ತೆ ಪ್ರಯಾಣದಲ್ಲಿ ನಮಗೆ ಹಳ್ಳಿಗಳ ಸಮೀಪದರ್ಶನ ಆಯಿತು. ಸುಮಾರು ೧೦–೧೫ ಗುಡಿಸಲುಗಳಿರುವ ಜಾಗವೇ ಒಂದು ಹಳ್ಳಿ. ಹೆಚ್ಚಿನವು ಹುಲ್ಲಿನ ಮಾಡಿನ, ಮಣ್ಣಿನ ಗೋಡೆಯ ಗುಡಿಸಲುಗಳು. ಅವರವರ ಅಭಿರುಚಿಗೆ ತಕ್ಕಂತೆ ಗೋಡೆಗಳ ಅಲಂಕಾರ.ಸುತ್ತಲಿನ ಜಾಗವನ್ನು ಶುಚಿಯಾಗಿಟ್ಟುಕೊಂಡಿದ್ದಾರೆ. ಹೆಚ್ಚಿನ ಮನೆಗಳ ಪಕ್ಕದಲ್ಲೇ ದನ, ಎತ್ತು, ಒಂಟೆ, ಕುರಿ, ಮೇಕೆ, ಕೋಳಿ ಹೀಗೆ ಪ್ರಾಣಿಗಳೂ ಇರುತ್ತಿದ್ದವು.ಅಲ್ಲೇ ಮೇಯುತ್ತಲೋ, ಮಲಗಿಕೊಂಡೋ ಇರುತ್ತಿದ್ದವು. ಹೆಂಗಸರು ಮೈ ತುಂಬಾ ಬಟ್ಟೆ, ತಲೆಗೆ ಸೆರಗು ಹೊದ್ದಿರುತ್ತಿದ್ದರು. ಏನಾದರೂ ಕೆಲಸದಲ್ಲಿ ಮಗ್ನರಾಗಿರುವುದು ಕಂಡುಬರುತ್ತಿತ್ತು. ಕೆಲವು ಕಡೆ, ಬಿರು ಬಿಸಿಲಿಗೆ ಹಾಯಾಗಿ ಮಕ್ಕಳು ಆಟವಾಡುತ್ತಿದ್ದರು. ರಾಜಸ್ಥಾನಿಗಳಿಗೆ ವಿಟಮಿನ್ ಡಿ ಕೊರತೆ ಕಾಡಲು ಸಾಧ್ಯವೇ ಇಲ್ಲ ಎಂದೆನಿಸಿತು. ಹೆಚ್ಚಿನ ಸಮಯವನ್ನು ಅವರು ಅಂಗಳ ಅಥವಾ ಬಯಲಿನಲ್ಲೇ ಕಳೆಯುತ್ತಾರೆ ಎಂದು ಅನಿಸುತ್ತದೆ. ಅಲ್ಲಲ್ಲಿ ಪ್ರಾಣಿಗಳಿಗೆ ಕುಡಿಯಲು ನೀರಿನ ವ್ಯವಸ್ಥೆಗೆ ಕಟ್ಟೆಗಳನ್ನು ಕಟ್ಟಿ, ನೀರು ತುಂಬಿಟ್ಟದ್ದು ಕಾಣುತ್ತಿತ್ತು. ಮೇವಿಗಾಗಿ ಪ್ರಾಣಿಗಳ ತುಂಬಾ ದೂರ ಹೋಗಬೇಕಾಗುವುದರಿಂದ, ಅಲ್ಲಿನ ಬಿರು ಬಿಸಿಲಿಗೆ, ಒಣ ಹವೆಗೆ ನೀರಿನ ವ್ಯವಸ್ಥೆ ತುಂಬಾ ಅಗತ್ಯ. ಈ ಕೆಲಸವನ್ನು ಅವರು ಒಂದು ಸೇವೆ ಎಂಬಂತೆ ಮಾಡುತ್ತಾರೆ ಹಾಗೂ ಮಕ್ಕಳಿಗೂ ಅದನ್ನು ಮುಂದುವರಿಸಲು ಪ್ರಚೋದಿಸುತ್ತಾರೆ.

ನಮ್ಮ ವಾಹನ ಹಳ್ಳಿಗಳ ಮೂಲಕ ಸಾಗಿ ಮುಂದೆ ಮುಂದೆ ಹೋಗುತ್ತಿತ್ತು.ಕೆಲವು ದೊಡ್ಡ ಕಲ್ಲಿನ ಮನೆಗಳೂ, ಗುಡಿಸಲುಗಳ ಮಧ್ಯೆ ಇದ್ದವು.ಅವು ಬಹುಶಃ ಶ್ರೀಮಂತರದ್ದಿರಬೇಕು ಎಂದು ಊಹಿಸಬಹುದು. ಆ ಜಾಗಕ್ಕೆ, ಈ ಕಾಲದ ಹವೇಲಿಗಳು!

ಜೈನ ದೇವಾಲಯ



ಲುಧರ್ವದ ಜೈನ ದೇವಾಲಯ ತುಂಬಾ ಪುರಾತನವಾದದ್ದು.೧೦೦೦ ವರ್ಷಗಳ ಹಿಂದೆ ಕಟ್ಟಲ್ಪಟ್ಟು, ಬಳಿಕ ಮುಸಲ್ಮಾನರ ಆಕ್ರಮಣಕ್ಕೆ ಒಳಗಾಯಿತಂತೆ.ಇದರ ಬಗ್ಗೆ ಇಂಟರ್ನೆಟ್ ಮೂಲಕವೇ ತಿಳಿದುಕೊಂಡೆವು.ದೇವಸ್ಥಾನದ ಬಳಿ ಮರದಡಿಯಲ್ಲಿ ಕಾರು ನಿಲ್ಲಿಸಿದರು, ಹೇಮ ಜೀ. ಕಾರಿನಿಂದಿಳಿದು ದೇವಸ್ಥಾನದ ಪ್ರವೇಶಮಾಡುತ್ತಿದ್ದಂತೇ, ಅಲ್ಲೇ ಹೊರಗೆ, ಕಾಲು,ಮುಖ ತೊಳೆಯಲೂ, ಕುಡಿಯಲೂ ನೀರಿನ ವ್ಯವಸ್ಥೆ ಮಾಡಿರುವುದು ಕಣ್ಣಿಗೆ ಬಿತ್ತು. ನಾವು ತಲಪುವಾಗ ಮಧ್ಯಾಹ್ನದ ೨.೩೦ ರ ಸಮಯವಾಗಿದ್ದರೂ, ಅರ್ಚಕರು ಪೂಜೆ ಮಾಡುತ್ತಿದ್ದರು.

ಲುಧರ್ವ ಜೈನ ದೇವಾಲಯದ ಕೆತ್ತನೆ ನಾವು ಇದುವರೆಗೆ ನೋಡಿದ್ದ ಕೆತ್ತನೆಗಳಲ್ಲಿ ಹೆಚ್ಚು ಸುಂದರವಾದದ್ದು ಎಂದು ಅನಿಸಿತು. ಗರ್ಭಗುಡಿಯಲ್ಲಿ ಸ್ವಾಮಿ ಪಾರ್ಶ್ವನಾಥರ ವಿಗ್ರಹ ಮಿರಮಿರನೆ ಮಿಂಚುತಿತ್ತು. ಸುತ್ತಲಿನ ಜಾಲಂಧ್ರಗಳು, ಗೋಪುರವೂ ಅತ್ಯಾಕರ್ಷಕವಾಗಿದ್ದವು. ದೇವಸ್ಥಾನದ ಒಳ ಸುತ್ತಿನಲ್ಲೇ, ಹಕ್ಕಿಗಳಿಗೇ ವಿಶೇಷವಾಗಿ ನಿರ್ಮಿಸಿದ ರಚನೆಯೊಂದನ್ನು ಕಂಡೆವು. ಎತ್ತರದ ಕಂಬದ ಮೇಲಿಟ್ಟ ದೊಡ್ಡ ಗಂಟೆಯಾಕರದ ಗೂಡಿನಂತಿತ್ತು. ಹಲವಾರು ಹಕ್ಕಿಗಳು ಇದರ ಒಳಗೂ, ಹೊರಗೂ ಓಡಾಡುತ್ತಿದ್ದವು.



ಇದು, ಕಲ್ಪತರು ಮರದ ಪ್ರತಿಕೃತಿಯಂತೆ. ಈ ರಚನೆಯ ಬಗ್ಗೆ ನಮಗೆ ಬೇರೇನೂ ಅರ್ಥವಾಗಲಿಲ್ಲ. ದೇವಸ್ಥಾನದ ಪ್ರವೇಶ ದ್ವಾರದ ಬಳಿ ಒಂದು ಸುಂದರ ಕಮಾನಿನ ರಚನೆ ಇತ್ತು.ಇದನ್ನು ಕಲ್ಲಿನಲ್ಲಿ ಕೆತ್ತಿ ಹೇಗೆ ಜೋಡಿಸಿದ್ದಾರೆಂದೇ ತಿಳಿಯಲಿಲ್ಲ. ವಾಪಾಸು ಬಂದ ಮೇಲೆ, ನಮ್ಮ ಸಂಬಂಧಿಕರಾಗಿರುವ ಶಿಲ್ಪಿ ವಿನಯ್ ಹೆಗಡೆಯವರಿಗೆ ಫೋಟೋ ತೋರಿಸಿ ಕೇಳಿದಾಗ, ಎರಡೂ ಬದಿಯ ತೂಕ – ಸಮತೂಕ – ಸಮತೋಲನದ ತತ್ವದ ಮೇಲಿದು ನಿಂತಿದೆ ಎಂದು ಗೊತ್ತಾಯಿತು.

ಲುಧರ್ವದಿಂದ ಹೊರಟು, ಸಮ್ ಕಡೆಗೆ ಹೊರಟೆವು. ದಾರಿಯಲ್ಲಿ ಕುಲ್ ದಾರಾ ಎಂಬ ಹಳ್ಳಿಯನ್ನು, ಅದರ ಗತವೈಭವವನ್ನೂ ನೋಡುವವರಿದ್ದೆವು.



ಕುಲ್ ದಾರಾ





ರಾಜಸ್ಥಾನದ ಸಾಂಪ್ರದಾಯಿಕ ಹಳ್ಳಿಯನ್ನು ನೋಡುತ್ತಲೇ, ಅಲ್ಲಿನ ನೀರಿನ ಸಂಗ್ರಹಣೆಯ ವಿಧಿ– ವಿಧಾನಗಳನ್ನು ನೋಡಬೇಕೆಂದು ನೆನಪಿಸಿಕೊಂಡೆವು. ನೀರಿನ ಟಾಂಕಾ ಒಂದನ್ನು ತೋರಿಸಿಕೊಡಬೇಕೆಂದು ಹೇಮಜೀಯವರನ್ನು ಕೇಳಿದೆವು. ಅವರು ಇಲ್ಲೇ ಸಮೀಪದ ಹಳ್ಳಿಯೊಂದರಲ್ಲಿ ನೀರಿನ ಸಂಗ್ರಹಣೆಯ ವ್ಯವಸ್ಥೆಯೊಂದಿದೆ, ಆದರೆ ಈಗ ಅದರಲ್ಲಿ ನೀರು ಇದೆಯೋ, ತಿಳಿಯದು ಎಂದರು.

ನಮ್ಮ ಕೋರಿಕೆಯಂತೆ, ಅಮರ್ ಸಾಗರ್ ಲೇಕ್ ನ ಬಳಿ ಬಂದೆವು. ಬಿಸಿಲಿನ ಅಬ್ಬರ ಜೋರೇ ಇತ್ತು. ಮನೋಹರ್ ಮಾತ್ರ ಕಾರಿನಿಂದಿಳಿದು, ವೀಕ್ಷಣೆಗೆ ಹೊರಟರು. ೨೦–೨೫ ಮೆಟ್ಟಲುಗಳನ್ನಿಳಿದು, ಫೋಟೋ ತೆಗೆದರು.ಸುಮಾರು ದೊಡ್ಡ ನೀರು ಸಂಗ್ರಹಣೆಗೆ ಬೇಕಾದ ವ್ಯವಸ್ಥೆ ಇದ್ದರೂ, ಈಗ ನೀರಿರಲಿಲ್ಲ. ಬೇರೆ ಬೇರೆ ಕಡೆಗಳಿಂದ ಮಳೆ ನೀರು ಹರಿದು ಬಂದು ಇಲ್ಲಿ ಸಂಗ್ರಹವಾಗುವ ವ್ಯವಸ್ಥೆಯೂ ಕಂಡಿತು.

ಕುಲ್ ದಾರಾ ಎಂಬ ಹಳ್ಳಿ ಜೈಸಲ್ಮೇರಿನ ಪ□□□□ಮಕ್ಕೆ ಸುಮಾರು ೨೮ ಕಿ.ಮೀ ದೂರದಲ್ಲಿದೆ. ಹಳ್ಳಿಯ ಪ್ರವೇಶ ದ್ವಾರದಲ್ಲಿ ಟಿಕೆಟ್ ಕೌಂಟರ್ ಇದೆ. ಇದೊಂದು ಶಾಪಗ್ರಸ್ತ ಹಳ್ಳಿ ಎಂದು ಕರೆಯಲ್ಪಡುತ್ತದೆ. ಒಂದು ಕಾಲದಲ್ಲಿ ಬುದ್ಧಿವಂತರೂ, ಉತ್ತಮ ವರ್ತಕರೂ ಆಗಿದ್ದ ಪಾಲಿವಾಲ್ ಬ್ರಾಹ್ಮಣರು ನೆಲೆಸಿದ್ದ ಇಲ್ಲಿ ಈಗ, ಒಬ್ಬನೇ ಒಬ್ಬ ವ್ಯಕ್ತಿ ಇಲ್ಲ. ರಾತ್ರೋ ರಾತ್ರಿ ೮೪ ಹಳ್ಳಿಗಳ ಜನರು ಗಂಟು, ಮೂಟೆ ಕಟ್ಟಿಕೊಂಡು, ಎಲ್ಲಿಗೆ ಹೋದರೆಂದು ಯಾರಿಗೂ ತಿಳಿದಿಲ್ಲವಂತೆ. ಇದಕ್ಕೆ ಕಾರಣವಾಗಿ ಹುಟ್ಟಿಕೊಂಡ ಕಥೆ ಇಂಟರ್ನೆಟ್ ನಲ್ಲಿದೆ.ಇಲ್ಲಿನ ಜನರೂ ಈ ಕಾರಣವನ್ನೇ ನಂಬುತ್ತಾರೆ.




ಕೃಷಿಯಲ್ಲೂ, ವ್ಯಾಪಾರದಲ್ಲೂ, ಬುದ್ಧಿವಂತಿಕೆಯಲ್ಲೂ ಮುಂದಿದ್ದ ಪಾಲಿವಾಲ್ ಬ್ರಾಹ್ಮಣರ ೮೪ ಹಳ್ಳಿಗಳು, ಸುಮಾರು ೨೦೦ ವರ್ಷಗಳ ಮೊದಲು ಇಲ್ಲಿದ್ದುವಂತೆ.ಜೈಸಲ್ಮೇರ್ ರಾಜನಿಗೆ ಇವರಿಂದ ಸಾಕಷ್ಟು ಆದಾಯವೂ ಆಗುತ್ತಿತ್ತಂತೆ. ಒಮ್ಮೆ, ಆ ರಾಜನ ದಿವಾನನೊಬ್ಬ ಈ ಬ್ರಾಹ್ಮಣರ ಮಗಳನ್ನು ಇಷ್ಟಪಟ್ಟು ಮದುವೆ ಮಾಡಿಕೊಡಲು ಒತ್ತಾಯಿಸಿದನಂತೆ. ಇವರು ಆತನ ಬೇಡಿಕೆಯನ್ನು ನಿರಾಕರಿಸಲು, ಆತ ಒಂದು ರಾತ್ರಿಯ ಗಡುವನ್ನು ಕೊಟ್ಟು, ತನ್ನ ಬೇಡಿಕೆಯನ್ನು ಮನ್ನಿಸದಿದ್ದಲ್ಲಿ, ಮುಂದಿನ ಪರಿಣಾಮಗಳನ್ನು ಎದುರಿಸಿ! ಎಂಬ ಎಚ್ಚರಿಕೆಯನ್ನು ಕೊಟ್ಟು ಹೋದನಂತೆ. ಆ ರಾತ್ರಿಯೇ, ಎಲ್ಲಾ ೮೪ ಹಳ್ಳಿಗಳ ಜನರು, ಬೇರೆ ಯಾರಿಗೂ ತಿಳಿಯದ ರೀತಿ ಹಳ್ಳಿಯಿಂದ ಎಲ್ಲಿಗೋ, ಬಹುಶಃ ಜೋಧಪುರದ ಬಳಿ ಯಾವುದೋ ಜಾಗಕ್ಕೆ, ತೆರಳಿದರಂತೆ. ಆ ಹಳ್ಳಿಯಲ್ಲಿ ಯಾರೂ ನೆಲೆಸುವಂತಾಗಬಾರದೆಂದು ಶಪಿಸಿದ್ದಾರಂತೆ. ಈಗಲೂ ಈ ಹಳ್ಳಿಗೆ ಬಂದು ಇರಲು ಪ್ರಯತ್ನಿಸಿದ ಯಾರೂ ಜಯಶೀಲರಾಗಿಲ್ಲವಂತೆ.

ಸುಮಾರು ೧ ಕಿ.ಮೀ ದೂರ ಮಣ್ಣಿನ ಹಾದಿಯಲ್ಲಿ ಬಂದರೆ, ಮಾಡು ಕಳಚಿ, ಬರೀ ಗೋಡೆ ಮಾತ್ರ ಉಳಿದಿರುವ ನೂರಾರು ಕಲ್ಲಿನ ಮನೆಗಳು ಕಾಣಸಿಗುತ್ತವೆ. ಒಂದೆರಡು ಮಹಡಿ ಮನೆಗಳೂ, ಒಂದು ದೇವಾಲಯವೂ ಸ್ವಲ್ಪ ಉತ್ತಮ ಸ್ಥಿತಿಯಲ್ಲಿದ್ದು, ಇನ್ನೂ ಉಳಿದಿವೆ. ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆಗಳೂ ಇದ್ದ ಕುರುಹು ಈಗಲೂ ಕಾಣ ಸಿಗುತ್ತವೆ.

ಹಂಪಿಯಂತಹ ಬೃಹತ್ ಸಾಮ್ರಾಜ್ಯವಲ್ಲವಾದರೂ ಗತವೈಭವದವಿಷಯದಲ್ಲಿ ಸಮಾನರೆಂದು ಅನಿಸಿತು, ಒಂದು ಉತ್ಕೃಷ್ಟ ಸಮುದಾಯದ ಅವಸ್ಥೆ ಏನಾಗಿರಬಹುದು? ಎಂದು ದುಃಖವಾಯಿತು.







ಸಮ್

ಸಂಜೆ ಸುಮಾರು ೪ ಗಂಟೆಗೆ ನಾವು ಸಮ್ ಎಂಬ ಜಾಗ ತಲಪಿದೆವು. ಜೈಸಲ್ಮೇರ್‌ನಿಂದ ಪಶ್ಚಿಮದ ಕಡೆಗೇ ಅಂದರೆ, ಮರುಭೂಮಿಯ ಕಡೆಗೆ ಹೋಗುತ್ತಿದ್ದೆವಾದ್ದರಿಂದ, ಹಸಿರು ಕಡಿಮೆಯಾಗುತ್ತಾ, ಬೋಳು ಗುಡ್ಡೆಗಳು, ಬಟ್ಟ ಬಯಲಿನ ಜಾಗಗಳು ಕಾಣುತ್ತಿದ್ದವು.ರಸ್ತೆ ಮಾತ್ರ ಉತ್ತಮವಾಗಿದ್ದು, ನೇರವಾಗಿತ್ತು.ಸಮ್ ಹತ್ತಿರ ಬರುತ್ತಿದ್ದಂತೆ, ರಸ್ತೆಯ ಬಲಬದಿಯಲ್ಲಿ ಒಂದು ಐಷಾರಾಮಿ ಹೋಟೆಲ್, 'ಸೂರ್ಯಗಢ' ಕಾಣಿಸಿತು.ಇಷ್ಟು ದೂರದಲ್ಲಿ, ಅಂತಹ ಕಟ್ಟಡ ಕಟ್ಟಲು ಬಿಸಿಲ ಬೇಗೆಯಲ್ಲಿ ಎಷ್ಟು ಕಷ್ಟ ಪಟ್ಟಿರಬಹುದು? ಎನಿಸಿತು. ಇದಾಗಿ ಕೆಲವು ನಿಮಿಷಗಳಲ್ಲಿ ಚೆಕ್ ಪೋಸ್ಟ್ ನಂತಹ ಜಾಗ ಬಂತು.ಇಲ್ಲಿ ಸುಮಾರು ಕಾರು, ಬಸ್, ಜೀಪ್ ಗಳು ನಿಂತಿದ್ದವು.ನಮ್ಮಂತೆಯೇ ಬಂದ ನೂರಾರು ಪ್ರವಾಸಿಗರು ಇಲ್ಲಿಂದ ಮುಂದಿನ ದಾರಿಯನ್ನು ಒಂಟೆ ಸವಾರಿ ಮೂಲಕ ಮಾಡಿಸುವುದು ಟ್ರಾವೆಲ್ ಏಜೆಂಟ್ ಗಳು ತಯಾರಿಸುವ ಪ್ಯಾಕೇಜ್‌ನಲ್ಲಿ ಸೇರಿಕೊಂಡಿದೆ.







ಕಾರು ನಿಲ್ಲಿಸಿದಲ್ಲಿಂದ ಸುಮಾರು ೪ ಕಿ.ಮೀ ದೂರದಲ್ಲಿ ನಮ್ಮ ಟೆಂಟ್ ಇರುವುದೆಂದು ಗೊತ್ತಾಯಿತು. ಕಾರಿನಲ್ಲೇ ಲಗೇಜನ್ನು ಬಿಟ್ಟು ನಾವು ಒಂಟೆ ಹತ್ತಬೇಕಿತ್ತು. ಆನೆ, ಕುದುರೆ, ಒಂಟೆ, ವಿಮಾನ ಸವಾರಿಗಳಲ್ಲೆಲ್ಲಾ, ಏರುವುದು (ಟೇಕಾಫ್) ಮತ್ತು ಇಳಿಯುವುದು (ಲ್ಯಾಂಡಿಂಗ್) ಹೆದರಿಕೆ ಹುಟ್ಟಿಸುತ್ತವೆ ಎಂದು ಕೇಳಿದ್ದರಿಂದ, ಈ ಒಂಟೆ ಸಹವಾಸವೇ ಬೇಡ ಎನಿಸಿತು. ಹೇಗೂ ಕಾರು ಹೋಗುತ್ತದಲ್ಲಾ, ಕಾರಲ್ಲೇ ಹೋಗಿ ಬಿಡುವಾ ಅಂದರೆ ಟ್ರಾವೆಲ್ ಏಂಜೆಟ್‌ಗೆ ಒಪ್ಪಿಗೆ ಆಗಲೇ ಇಲ್ಲ. ಒಂಟೆ ಸವಾರಿ ಮಾಡಿದರೇನೇ ನಿಮಗೆ ಮರುಭೂಮಿಯ ನಿಜವಾದ ಅನುಭವ ಸಿಗುವುದು ಎಂದ. ಇದು ಕೇಳಿದ್ದೇ, 'ಸರಿ' ಎಂದು ಮನೋಹರ್ ಹಾರಿ ಒಂಟೆ ಏರಿಯೇ ಬಿಟ್ಟರು. ಸಾಲದ್ದಕ್ಕೆ ಮಗನನ್ನೂ ಎಳೆಯತೊಡಗಿದರು.ಅವನೋ, 'ಫಿಫ್ಟಿ ಫಿಫ್ಟಿ' ಎಂದು ಕಾರಾದರೂ ಸರಿ, ಒಂಟೆಯಾದರೂ ಸರಿ ಎಂದನಾದರೂ, ಒಂಟೆ ಕಡೆಗೇ ಹೆಚ್ಚು ವಾಲಿದ.ಇನ್ನು ನಾನೊಬ್ಬಳೇ ಕಾರಲ್ಲಿ ಹೋಗಿ ಏನು ಮಾಡುವುದು?ಇವರಿಬ್ಬರೂ ಅರೇಬಿಯಾ ದೇಶಕ್ಕೇ ಹೋದವರಂತೆ ಅನುಭವ ಹೇಳಿ, ನನಗೇನೋ ಕಳಕೊಂಡೆನೆಂಬ ಭಾವನೆ ಹುಟ್ಟಿಸುತ್ತಾರಲ್ಲಾ ಎಂದು ಜಿಜ್ಞಾಸೆಯಲ್ಲಿ ಏನೂ ತೋಚದೆ ಸುಮ್ಮನಾದೆ.ಇದಕ್ಕೇ ಕಾದಿದ್ದ ಮಗ, 'ಏನೂ ಆಗುವುದಿಲ್ಲ, ಅಮ್ಮ ಬಾ' ಎಂದು ಕೈ ಎಳದೇ ಬಿಟ್ಟ, ಅವನು ಮೊದಲೊಮ್ಮೆ ಒಂಟೆ ಸವಾರಿ ಮಾಡಿದ್ದರಿಂದ ಪರಿಣತನೆಂಬ ಧಿಮಾಕಿನಲ್ಲಿ. ಆಯ್ಕೆಗೆ ಎಡೆಯೇ ಇರಲಿಲ್ಲವಾಗಿ ಲಗುಬಗೆಯಿಂದ ಒಂಟೆ ಬಳಿ ಬಂದೆವು. ಕಣ್ಣು ಮುಚ್ಚಿ ತೆರೆಯುವುದರೊಳಗೆ ಒಂಟೆ ಎದ್ದು ನಿಂತಿತು.ಮರಳಿನ ರಾಶಿಯಲ್ಲಿ ಒಂದೊಂದೇ ಹೆಜ್ಜೆ ಇಡುತ್ತಾ ಮುಂದೆ ಮುಂದೆ ಸಾಗಿತು.ನಾನು ಮುಂದಿನ ಡುಬ್ಬವನ್ನು ಆಧರಿಸಿ ಕುಳಿತರೆ, ಅನುಭವೀ ಮಗ ಹಿಂದೆ ಕುಳಿತಿದ್ದ. ಮನೋಹರ್ ಆಗಲೇ ಇನ್ನೊಂದು ಒಂಟೆಯ ಮೇಲೆ ಕುಳಿತು, ನನ್ನ ಸಾಹಸವನ್ನು ಕ್ಯಾಮರಾದಲ್ಲಿ ಸೆರೆ ಹಿಡಿಯಲು ಆರಂಭಿಸಿದ್ದರು.

ಕೆಲವೇ ಕ್ಷಣಗಳಲ್ಲಿ ಒಂಟೆ ಸವಾರಿ ಅಭ್ಯಾಸವಾದಂತೆನಿಸಿ, ಮಗನ ಜತೆಗೆ ಮಾತಿಗಿಳಿದೆ. ನಮ್ಮನ್ನು ಹೊತ್ತು ಕಷ್ಟಪಡುತ್ತಿರುವ ಒಂಟೆಯ ಬಗ್ಗೆ ಪ್ರೀತಿ ಹುಟ್ಟಿತು. 'ಪುಟ್ರಾಜಾ' ಎಂಬ ನಮ್ಮ ಮುದ್ದಿನ ಬೆಕ್ಕಿನ ಹೆಸರಿನಿಂದಲೇ ಒಂಟೆಯನ್ನೂ ಕರೆದು, ಪ್ರೀತಿಯ ಆಳದ ಪ್ರದರ್ಶನ ಮಾಡಿದೆ, ಅದಕ್ಕೆ ಎಷ್ಟು ಅರ್ಥವಾಯಿತೋ ಗೊತ್ತಿಲ್ಲ, ಮೌನವಾಗಿ ಹೆಜ್ಜೆ ಹಾಕುತ್ತಿತ್ತು. ನಮ್ಮ ಮುಂದೆ ಸಾಲು ಸಾಲು ಪ್ರವಾಸಿಗರು ಹೀಗೇ ಸಾಗುತ್ತಿದ್ದರು.ಪ್ರತಿ ಒಂಟೆಯ ಜತೆಗೆ ಅದರ ಯಜಮಾನ ಅಥವಾ ಅವನ ಮಗ ನಡೆದು ಬರುತ್ತಿದ್ದರು.ನಮ್ಮ ಒಂಟೆಯ ಜತೆಗೆ ಬಂದವ ಸುಮಾರು ೧೦-೧೨ ವರ್ಷಗಳ ಬಾಲಕ. ಹೆಸರೇನು ಎಂದು ಕೇಳಿದೆ, 'ಅಬ್ದುಲ್' ಎಂದ. ಶಾಲೆಗೆ ಹೋಗ್ತೀಯಾ? ಎಂದೆ, ಹೌದು ಎಂದ. ಮತ್ತೆ ಹೇಗೆ ಈ ಕೆಲಸ ಮಾಡ್ತಾ ಇದ್ದೀ? ಎಂದರೆ ಉತ್ತರಿಸಲಿಲ್ಲ. ಅಲ್ಲಿಯ ಮಕ್ಕಳು ಪ್ರವಾಸಿಗರ ಸೀಸನ್‌ನಲ್ಲಿ ತಮ್ಮ ಹೆತ್ತವರೊಂದಿಗೆ ದುಡಿಯುವುದು ಮಾಮೂಲಿ. ಮನೆಯ ಆದಾಯಕ್ಕೆ ನೆರವಾಗುವ ಜತೆಗೇ, ಕೆಲಸಗಳನ್ನು ಕಲಿಯುವ ಆಸೆಯೂ,

ಶಾಲೆಯಿಂದ ದೂರವಿರುವ ಖುಶಿಯೂ ಇದ್ದಂತೆ ಕಾಣುತ್ತದೆ. ಶಾಲೆಯ ಬಗ್ಗೆ ಏನಾದರೂ ಕೇಳಿದರೆ ಮಾತ್ರ ಹಾರಿಕೆಯ ಉತ್ತರ ಕೊಡುತ್ತಾರೆ. ಕಟ್ಟುನಿಟ್ಟಿನ, ನಾಲ್ಕು ಗೋಡೆಗಳ ಶಿಕ್ಷಣವನ್ನು ಅವರು ಇಷ್ಟಪಡುವಂತೆ ಕಾಣುವುದಿಲ್ಲ.

ಮರಳಲ್ಲಿ ಕಾಲುಗಳನ್ನು ಎತ್ತಿ, ಎತ್ತಿ ಒಂಟೆ ನಡೆಯುತ್ತಿತ್ತು.ಸಂಜೆಯ ೪ ಗಂಟೆಯಾದರೂ ಬಿಸಿಲಿನ ಖಾರ ಜೋರಾಗಿಯೇ ಇತ್ತು. ಗಾಳಿ ಬೀಸಿದಾಗ ಧೂಳು ಹಾರುವುದೂ ಇತ್ತು. ಒಣ ಹವೆ, ಜೋರಾದ ಗಾಳಿ ಬೀಸಿದಾಗ ತಲೆ, ಮುಖ, ಕಣ್ಣು, ಮೈಯೆಲ್ಲಾ ಸಣ್ಣ ಧೂಳಿನ ಕಣಗಳಿಂದ ತುಂಬಿಕೊಳ್ಳುತ್ತವೆ. ಇದಕ್ಕಾಗಿಯೇ ಈ ಪ್ರವಾಸದ ಉದ್ದಕ್ಕೂ ಒಂದು ಶಾಲನ್ನು ರೆಡಿಯಾಗಿ ಇಟ್ಟುಕೊಂಡಿದ್ದೆ.ಅಲ್ಲಿನ ಹೆಂಗಸರಂತೆ ತಲೆ ಮೇಲಿಂದ ಹೊದ್ದು, ಕೆನ್ನೆ, ಮುಖ, ಬಾಯಿಗಳನೆಲ್ಲಾ ಅದರಲ್ಲಿ ಮುಚ್ಚಿಕೊಳ್ಳುತ್ತಿದ್ದೆ.ಇದು ಜಾರಿ ಬೀಳದಂತೆ ತಲೆ ಮೇಲೆ ಟೋಪಿ ಇಡುತ್ತಿದ್ದೆ. ಥೇಟ್ ಅರೇಬಿಯಾದ ಸುಲ್ತಾನರ ವೇಷ. ಅಂತೂ ವೇಷ ಭೂಷಣಗಳು ಆಯಾ ಪ್ರದೇಶದ ಹವೆ, ಕೆಲಸ, ಅಗತ್ಯಗಳಿಗನುಗುಣವಾಗಿ ರೂಪುಗೊಳ್ಳುತ್ತವೆ ಎಂಬುದು ಸರಿಯಾಗಿ ಅರ್ಥವಾಯಿತು.



೪ ಕಿ.ಮೀ ದೂರವನ್ನು ಸುಮಾರು ೪೫ ನಿಮಿಷಗಳಲ್ಲಿ ಕ್ರಮಿಸಿದೆವು. ಟೆಂಟ್‌ನಿಂದ ಅನತಿ ದೂರದಲ್ಲಿ ಒಂಟೆಯಿಂದ ಕೆಳಗಿಳಿದೆವು. ಅಷ್ಟರಲ್ಲಿ ಅಲ್ಲಿಗೆ ಮಗಳ ಜತೆ ಪುಂಗಿ ಊದುತ್ತಾ ಬಂದ ಕಲಾವಿದ ಮಗಳ ನೃತ್ಯ ನೋಡಿರೆಂದ.ಪುಟ್ಟ ಹುಡುಗಿ, ಸುಡು ಬಿಸಿಲಿಗೆ ಮರಳಿನ ಮೇಲೆ ನೃತ್ಯ ಮಾಡಿದಳು, ದುಡ್ಡಿಗೆ ಕೈ ಚಾಚಿದಳು. ಮರಳುಗಾಡಿನ ಕಷ್ಟಕರ ಜೀವನ ಸಾಗಿಸಲು ಏನೆಲ್ಲಾ ವೇಷ ತೊಡುತ್ತಾರೆ! ಎಂದುಕೊಂಡೆ.







ಮುಂದೆ ೧೦ ನಿಮಿಷ ನಡೆದು, ಟೆಂಟ್ ಸೇರಿದೆವು. ನಮ್ಮ ಸಾಮಾನು, ಸರಂಜಾಮುಗಳೆಲ್ಲಾ ಆಗಲೇ ಬಂದು ಕೂತಿದ್ದವು. ಟೆಂಟ್ ಹೊಕ್ಕ ಕೂಡಲೇ ಬಚ್ಚಲು ಹೇಗಿದೆ? ಎಂದು ನೋಡಿದೆ. ಇಡೀ ಟೆಂಟ್‌ನ್ನು ಟಾರ್ಪಾಲಿನಂತಹ ಬಟ್ಟೆಯಿಂದ ರಚಿಸಿ ಎಳೆದು ಗೂಟಗಳಿಗೆ ಕಟ್ಟಿರುತ್ತಾರೆ. ಬಚ್ಚಲು ಮಾತ್ರ, ಒಂದು ಸ್ಥಿರ ವ್ಯವಸ್ಥೆಯಂತೆ ಇದೆ. ನೀರಿನ ಪೈಪುಗಳೂ, ಸಿಂಕ್ ಕೂಡಾ ಇದೆ. ಬಕೆಟ್, ಮಗ್ ಎಲ್ಲವೂ ಇತ್ತು. ಅರ್ಧದವರೆಗೆ ಸಿಮೆಂಟ್ ಗೋಡೆಯಾದರೆ, ಇನ್ನುಳಿದಂತೆ ಟೆಂಟ್ ಬಟ್ಟೆಯಿಂದ ಮುಚ್ಚಿರುತ್ತಾರೆ. ಬಟ್ಟೆಯದೇ ಬಾಗಿಲು, ಒಂದೇ ಕುಟುಂಬದ ನಮಗೆ, ವ್ಯವಸ್ಥೆ ಧಾರಾಳ ಸಾಕು ಎನಿಸಿತು. ಸದ್ಯ, ರಾತ್ರಿ ವಾಪಾಸು ಹೋಗುವ ಪರಿಸ್ಥಿತಿ ಏನೂ ಇಲ್ಲವಲ್ಲ ಎಂದು ನಿರಾಳವಾಯಿತು.

ಸ್ವಲ್ಪ ಹೊತ್ತು ಅಲ್ಲೇ ಅಡ್ಡಾಡಿ , ಸೂರ್ಯಾಸ್ತಮಾನ ನೋಡಲು ರೆಡಿಯಾದೆವು. ಮರಳು ದಿನ್ನೆಗಳು ನಾವಿದ್ದ ಟೆಂಟ್ ನಿಂದ ಸುಮಾರು ೧೦೦ ಮೀಟರ್ ದೂರದಲ್ಲಿದ್ದವು.ನಡೆಯಲು ಸುಮಾರು ೧೦–೧೫ ನಿಮಿಷಗಳೇ ಹಿಡಿದವು. ದಿನ್ನೆಗಳನ್ನು ಏರಿ, ಸೂರ್ಯ ಸರಿಯಾಗಿ ಕಾಣುವ ಜಾಗ ಹುಡುಕಿ ಕುಳಿತೆವು. ಅಲ್ಲಿಗೆ ಬಂದಿದ್ದ ಎಲ್ಲಾ ಪ್ರವಾಸಿಗರೂ ಈಗ ದಿನ್ನೆಗಳ ಮೇಲೇ ಬಂದು ಜಮಾಯಿಸಿದ್ದರಿಂದ, ಒಂದು ಸಂತೆಯೇ ಏರ್ಪಟ್ಟಿತ್ತು.ಇದೇ ಅವಕಾಶಕ್ಕಾಗಿ ಕಾದಿದ್ದ ಪೆಪ್ಸಿ, ಕೋಲಾ ಮಾರಾಟಗಾರರೂ ಜೋರಾಗಿ ಓಡಾಡುತಿದ್ದರು.

ಸುಂದರ ಸೂರ್ಯಾಸ್ತವನ್ನು ಮೌನದಲ್ಲಿ ಕಳೆಯಬೇಕೆಂಬ ನನ್ನ ಮತ್ತು ಮಗನ ಆಸೆಗೆ ಭಂಗವಾದಂತೆ ಅನಿಸಿತು. ಯಾರೂ ಇಲ್ಲದ ದಿನ್ನೆಯೊಂದನ್ನು ಗುರುತಿಸಿ, ನಾವಿಬ್ಬರೂ ಅಲ್ಲಿಗೆ ಓಡಿದೆವು.ಓಡುವುದು ಸಾಧ್ಯವಾಗದೇ, ಹೊರಳಿದೆವು, ತೆವಳಿದೆವು ಎಂಬುದೇ ಸೂಕ್ತ.






ಮರಳ ದಿನ್ನೆಗಳಲ್ಲಿ ಪದರು ಪದರಾಗಿ ಮರಳು ಬಿದ್ದು ಚೆಂದದ ಡಿಸೈನ್ ಗಳಂತೆ ಕಾಣುತ್ತಿದ್ದವು.ಇವುಗಳ ಮೇಲೆ ಕೆಂಪನೆಯ ಸೂರ್ಯರಶ್ಮಿ ಬಿದ್ದು, ಇನ್ನೂ ಚೆಂದದ ಚಿತ್ರಗಳಾಗುತ್ತಿದ್ದವು.ಮುಳುಗುವ ಸೂರ್ಯನೂ ತುಂಬಾ ದೊಡ್ಡದಾಗಿ ಕಾಣುತ್ತಿದ್ದ.ಸಮುದ್ರ ತೀರದಲ್ಲಾದರೆ, ಸೂರ್ಯ ನಿಜಕ್ಕೂ ನೀರೊಳಗೆ ಮುಳುಗಿಯೇ ಹೋದ ದೃಶ್ಯ ಗೋಚರಿಸಿದರೆ, ಇಲ್ಲಿ ಸುಮ್ಮಗೆ ದೂರ ದೂರಕ್ಕೆ ಸಣ್ಣದಾಗಿ ಮರೆಯಾಗುತ್ತಿದ್ದಂತೆ, ಮರೆಯಾದರೂ ಬಣ್ಣದ ಓಕುಳಿಯನ್ನು ನೆನಪಿಗಾಗಿ ಉಳಿಸಿಹೋದಂತೆ ಕಾಣುತ್ತಿತ್ತು. ಸೂರ್ಯ ಕಾಣದಾದರೂ ಅವನ ಇರವನ್ನು ಊಹಿಸಬಹುದಿತ್ತು.ಆದರೆ, ಉಷ್ಣತೆಯಲ್ಲಾಗುವ ಬದಲಾವಣೆ ಮಾತ್ರ ಗಮನಾರ್ಹ. ತಣ್ಣನೆ ಗಾಳಿ ಸುಯ್ ಗುಟ್ಟತೊಡಗಿತ್ತು. ಬರಿಯ ಶಾಲು ಹೊದ್ದರೆ ಸಾಲದೆಂಬಂತೆ ಅನಿಸಿತು.ಸುತ್ತಲಿನ ಜನ ಸಂಜೆಯ ಬೆಳಕಿನಂತೆಯೇ, ನಿಧಾನವಾಗಿ ಕರಗತೊಡಗಿದರು.ಕೆಲವೇ ಕ್ಷಣಗಳಲ್ಲಿ, ನಾನು ಮತ್ತು ಸುಧನ್ವ ಮಾತ್ರ ಉಳಿದೆವು.ದೂರದಲ್ಲಿ ಕ್ಯಾಮರಾದೊಂದಿಗೆ ತಿರುಗಾಡುತ್ತಾ ಫೋಟೋ ತೆಗೆಯುವ ಮನೋಹರ್ ಚಿಕ್ಕ ಕಪ್ಪು ಆಕೃತಿಯಂತೆ ಕಂಡರು.

ನಮ್ಮ ಹಾಗೇ, ಜನ ಜಂಗುಳಿಯಿಂದ ದೂರಕ್ಕೆ ಓಡಿ ಬಂದಿದ್ದ ವಿದೇಶಿ ಪ್ರವಾಸಿಗರೂ ತಮ್ಮ ಭಾರದ ಕ್ಯಾಮರಾಗಳನ್ನು ಹೊತ್ತು ಟೆಂಟ್ ಗಳೆಡೆಗೆ ವಾಪಾಸಾಗುತ್ತಿದ್ದರು. ಮುಳುಗುವ ಸೂರ್ಯನನ್ನು ಹಿನ್ನಲೆಯಾಗಿಟ್ಟು, ಒಂಟೆ, ಒಂಟೆ ಸವಾರರನ್ನುಫೋಟೋ ತೆಗೆಯುವುದು ಇಲ್ಲಿನ ವಿಶೇಷತೆ.ವಸ್ತುಗಳು ಕಪ್ಪಾಗಿಯೂ, ಸೂರ್ಯ ಕೆಂಪಾಗಿಯೂ ಕಾಣುವ ಈ ಚಿತ್ರಗಳುತುಂಬಾ ಸುಂದರವಾಗಿರುತ್ತವೆ.





ಟೆಂಟ್ ಬಳಿಗೆ ಬರುವಾಗ ಸುಮಾರು ೭ ಗಂಟೆಯ ಸಮಯ. ಈಗ ಪ್ರವೇಶ ದ್ವಾರದಲ್ಲಿ ತಟ್ಟೆ ಹಿಡಿದು, ಆರತಿ ಬೆಳಗಿ ತಿಲಕವಿಟ್ಟು ಸ್ವಾಗತಿಸಿದರು, ಜಿಪ್ಸಿ ಕಲಾವಿದೆಯರು. ಸಂಜೆಯ ತಿಂಡಿ ಒಗ್ಗರಿಸಿದ ಅವಲಕ್ಕಿ ಮತ್ತು ಚಹಾ.ಇದರ ಜತೆಗೇ, ತೆರೆದ ರಂಗ ಮಂದಿರದಲ್ಲಿ ಲೋಕ ಸಂಗೀತ ಮತ್ತು ನೃತ್ಯ ಏರ್ಪಾಟಾಗಿತ್ತು. ಬೇರೆ ಬೇರೆ ಟ್ರಾವೆಲ್ ಏಜೆಂಟರ ಟೆಂಟ್ ಸಮೂಹಗಳು ಅಕ್ಕ ಪಕ್ಕದಲ್ಲೇ ಇರುವುದರಿಂದ, ಒಂದು ಕಡೆ ಹಾಡು ಮುಗಿದಾಗ ಇನ್ನೊಂದೆಡೆ ಸುರುವಾಗುತ್ತಿತ್ತು. ರಾತ್ರಿ ೯.೩೦ ರವರೆಗೂ ಈ ಕಾರ್ಯಕ್ರಮ ನಡೆಯಿತು. ಮರಳುಗಾಡಿನ ಕಲಾವಿದರಾದ ಲಂಗಾಸ್ ಮತ್ತು ಮಂಘಾರಿಯಾಸ್ ಎಂದು ಗುರುತಿಸಿಕೊಳ್ಳುವ ಕಲಾವಿದರೇ ಜಾನಪದ ಸಂಗೀತ ಕಛೇರಿ ನಡೆಸಿ ಕೊಟ್ಟರು. ಇಲ್ಲಿಯೂ, ನಿಮುಡ ನಿಮುಡ, ಓ ಪರದೇಶಿ ಎಂಬ ಪ್ರಸಿದ್ಧವಾಗಿರುವ ಜಾನಪದ ಹಾಡುಗಳನ್ನು ಅವುಗಳ ಅರ್ಥವನ್ನೂ ತಿಳಿಸಿ ಹೇಳಿದರು. ಜತೆ ಜತೆಗೇ ಹೊಸ, ಹಾಸ್ಯ ಭರಿತ ಗೀತೆಗಳನ್ನೂ ತಾವೇ ರಚಿಸಿ ಹಾಡಿದರು. ಹಾಡಿನೊಂದಿಗೇ ಜಿಪ್ಸಿ ನೃತ್ಯವೂ ನಡೆಯಿತು.ಕಣ್ಣಿಗೆ ಸೂಜಿ ಚುಚ್ಚಿಕೊಳ್ಳುವ, ಗಾಜಿನ ಚೂರುಗಳ ಮೇಲೆ ನೃತ್ಯ ಮಾಡುವ, ಬಾಯಿಂದ ಬೆಂಕಿ ಉಗುಳುವ, ಕಣ್ಣಿನ ರೆಪ್ಪೆಯಿಂದ ಹಣದ ನೋಟ್‌ನ್ನು ಎತ್ತುವ ಹೀಗೆ ಸಾಹಸ ಪ್ರದರ್ಶನಗಳೂನೃತ್ಯದ ಜತೆಜತೆಗೇ ನಡೆದವು.











ರಾತ್ರಿ ಆಗುತ್ತಿದ್ದಂತೆಯೇ ಚಳಿಯ ಅನುಭವ ಜೋರಾಗತೊಡಗಿತು. ಥರ್ಮಲ್ ವೇರ್, ಸ್ವೆಟರ್, ಶಾಲು, ಮಂಕಿ ಕ್ಯಾಪ್, ಸಾಕ್ಸ್, ಬೂಟ್ಸ್ ಗಳಿದ್ದರೂ ನಡುಕ ನಿಲ್ಲುತ್ತಿರಲಿಲ್ಲ. ತಕ್ಷಣ ಊಟ ಮುಗಿಸಿ ಮಲಗುವ ತಯಾರಿ ಮಾಡಿದೆವು. ಟೆಂಟ್‌ನ ಒಳಗೆ ವಿಶಾಲವಾದ ಮಂಚವಿದ್ದು, ಮೂರು ದಿಂಬು, ಹಾಸಿಗೆ, ರಗ್ ಗಳಿದ್ದವು. ಒಬ್ಬೊಬ್ಬರು ಒಂದೊಂದು ರಗ್ ಹೊದೆಯುವ ಬದಲು ಪದರ ಪದರವಾಗಿ ಮೂವರೂ ಮೂರೂ ರಗ್ ಗಳನ್ನು ಹೊದೆದೆವು. ಇಷ್ಟಾದ ಮೇಲೆ ನಿದ್ದೆ ಮಾಡಲು ಸಾಧ್ಯವಾಯಿತು.



ಮರಳ ದಿನ್ನೆಗಳಿಂದ ಸೂರ್ಯಾಸ್ತ ಮಾತ್ರವಲ್ಲದೇ, ಸೂರ್ಯೋದವೂ ಸುಂದರವಾಗಿ ಕಾಣುತ್ತದೆ, ಬೇಗನೆ ಏಳಬೇಕು ಎಂದು ಮನೋಹರ್ ತಾಕೀತು ಮಾಡಿದ್ದರು. ಬೆಳಗ್ಗೆ ೬.೩೦ಕ್ಕೆ ಎಚ್ಚರವಾದಾಗ, ಛೇ! ಸೂರ್ಯೋದಯದ ಚೆಂದ ನೋಡಲೇ ಇಲ್ಲವಲ್ಲಾ ಎಂದು ಬೇಸರವಾಯಿತು. ದಡಬಡನೆ ಮೂವರೂ ಎದ್ದು, ಮರಳ ದಿನ್ನೆಗಳೆಡೆಗೆ ಓಡಿದೆವು. ಚಳಿಯು ಈಗಲೂ ಇದ್ದುದರಿಂದ, ನಾನು ಅರೇಬಿಯಾ ಸುಲ್ತಾನರ ವೇಷದಲ್ಲಿಯೇ ಇದ್ದೆ. ಉದ್ದನೆಯ ನಿಲುವಂಗಿಯ ಒಳಗೆ, ಜೀನ್ಸ್ ಪ್ಯಾಂಟ್, ಥರ್ಮಲ್ ವೇರ್ ಕೂಡಾ ಧರಿಸಿದ್ದೆ. ಬಟ್ಟೆ ರಾಶಿಗಳ ಭಾರವನ್ನೂ ಹೊತ್ತು ದಿನ್ನೆ ಹತ್ತಬೇಕಾಯಿತು. ಸುಧನ್ವ ಮಾತ್ರ ಬರೇ ಜೀನ್ಸ್ ಪ್ಯಾಂಟ್, ಟೀ ಶರ್ಟ್ ನಲ್ಲಿ ಓಡಾಡುತ್ತಾ, ತಾನು ಬಿಸಿರಕ್ತದವನೆಂದು ಗೊತ್ತುಪಡಿಸಿದ. ದಿನ್ನೆ ಹತ್ತಿ ನೋಡಿದರೆ, ಸೂರ್ಯ ಇನ್ನೂ ಬಂದಿರಲೇ ಇಲ್ಲ. ಸದ್ಯ! ಅವನೂ ಸೂರ್ಯವಂಶಿಯೇ, ಎಂದು ಖುಶಿಯಾಯಿತು. ಸುಮಾರು ೭ ಗಂಟೆಗೆ ಸೂರ್ಯ ರಶ್ಮಿಗಳು ಮರಳ ದಿನ್ನೆಗೆ ತಾಕತೊಡಗಿದವು. ಈ ದೃಶ್ಯವೂ ಅದ್ಭುತವೇ! ಚಿನ್ನದ ಬಣ್ಣದಲ್ಲಿ ಹೊಳೆಯುವ ಮರಳ ದಿನ್ನೆ, ಕೆಂಪು ಹಚ್ಚಿಕೊಂಡ ನೀಲಾಕಾಶ, ದೂರದಲ್ಲಿ ನಿಧಾನಕ್ಕೆ ಏರುತ್ತಿದ್ದ ಸೂರ್ಯ. ದೊಡ್ಡದಾಗಿ ಕಾಣುತ್ತಿದ್ದವ ನಿಧಾನಕ್ಕೆ ಚಿಕ್ಕವನಾಗುತ್ತಿದ್ದ, ಪ್ರಖರನಾಗುತ್ತಿದ್ದ! ಸೂರ್ಯ ಏರುತ್ತಿದ್ದಂತೆ, ಚಳಿ ಕಡಿಮೆಯಾಗತೊಡಗಿತು.



ಹಿಂದಿನ ಸಂಜೆ, ಇಡೀ ಸಮ್ ನ ಪ್ರವಾಸಿಗರ ದಂಡೇ ದಿನ್ನೆಗಳ ಮೇಲಿದ್ದರೆ, ಈಗ ನಾವು ಮೂವರು ಮಾತ್ರ!ಈ ಇಡೀ ಪ್ರಕೃತಿಯ ಸೊಬಗು ನಮಗೆ ಮಾತ್ರವಾಗಿತ್ತು! ಕಣ್ಣಿಗೆ ಕಾಣುವಷ್ಟು ದೂರದವರೆಗಿನ ಮರಳಿನ ದಿನ್ನೆಗಳೂ ನಮ್ಮವೇ ಆಗಿದ್ದವು.ಸಾಕಷ್ಟು ಖುಶಿಯಿಂದ ಅನುಭವಿಸಿದೆವು. ದೀರ್ಘ ಶ್ವಾಸ ತೆಗೆದು ಶುದ್ಧ ಗಾಳಿಯನ್ನು ತುಂಬಿಸಿಕೊಂಡೆವು. ವಿವಿಧ ಭಂಗಿಗಳಲ್ಲಿ ಫೋಟೋ ತೆಗೆಯಲು ಈಗ ಯಾರ ಅಡ್ಡಿಯೂ ಇರಲಿಲ್ಲ. ಸುಮಾರು ಅರ್ಧ ಗಂಟೆ ಕಳೆಯಿತು. ಬಿಸಿಲು ಏರುತ್ತಿದ್ದಂತೆ ನಾವು ಕೆಳಗಿಳಿದೆವು.



ಟೆಂಟ್ ಕಡೆಗೆ ಬರುತ್ತಿರಲು, ಹೇಮ್ ಜೀ ಕಾರು ರೆಡಿ ಮಾಡಿ ನಿಂತಿದ್ದರು. ಪಕ್ಕದಲ್ಲೇ ಇದ್ದ ಡ್ರೈವರ್ ಒಬ್ಬರಿಗೆ, ನಮ್ಮನ್ನು ತೋರಿಸಿ ಏನೋ ಹೇಳುತ್ತಿದ್ದರು. ಎಲ್ಲೆಲ್ಲೂ ಇರುವ ಸೂರ್ಯ, ಚಂದ್ರ, ಕಲ್ಲು, ಮಣ್ಣು ನೋಡಲು ಸಾವಿರಾರು ರೂಪಾಯಿ ಖರ್ಚು ಮಾಡುವ ಮೂರ್ಖರು ಎಂದಿರಬೇಕೆಂದು ಅನಿಸಿತು. ನಾವು ಹತ್ತಿರ ಬರುತ್ತಿದ್ದಂತೇ "ಸೂರಜ್ ದೇಖಾ?" ಎಂದು ಮುಗುಳ್ನಕ್ಕರು. ಹೂಂ ಎಂದಷ್ಟೇ ಹೇಳಿ, ಟೆಂಟ್ ನ ಒಳ ಹೊಕ್ಕೆವು. ಸ್ನಾನ, ತಿಂಡಿ ಮುಗಿಸಿ, ೯.೩೦ ಕ್ಕೆ ನಾವು ಹೊರಡುವಷ್ಟರಲ್ಲಿ, ನಮ್ಮ ಏಜೆಂಟನ ಎಲ್ಲಾ ೧೫ ಟೆಂಟ್‌ಗಳೂ ಖಾಲಿಯಾಗಿದ್ದವು. ಈಗ ಬಿಸಿಲಿನ ಝಳ ಎಷ್ಟಿತ್ತೆಂದರೆ, ನಾವು ಸಾದಾ ಉಡುಪಿನಲ್ಲೇ ಕಾರು ಹತ್ತಿದೆವು. ದಾರಿಯುದ್ದಕ್ಕೂ, ಮರಳಿನ ಸೊಬಗನ್ನೇ ಮನದ ತುಂಬಾ ತುಂಬಿಕೊಂಡು, ರಾವಣಹತ್ತಾದ ಸಿ.ಡಿ ಹಾಕಿ ಕೇಳಿ ಆನಂದಿಸಿದೆವು.



ವಾಪಾಸು ಜೋಧಪುರದೆಡೆಗೆ ಹೊರಟಿದ್ದೆವಾದರೂ, ಪೋಖರನ್ ಬಳಿ ಎಡಕ್ಕೆ ತಿರುಗಿ, ಇನ್ನೂ ಹಲವು ಸ್ಥಳಗಳನ್ನು ನೋಡಲು ಕಾತುರರಾಗಿದ್ದೆವು.

ರಾಮ್ದೇವ್ರಾ
(ದಿನ ನಾಲ್ಕು)

ಪೋಖರನ್ ನಿಂದ ಸುಮಾರು ೨೦ಕಿ.ಮೀ ದೂರದಲ್ಲಿ ಒಂದು ಪ್ರಸಿದ್ಧ ಯಾತ್ರಾ ಸ್ಥಳವಿರುವುದನ್ನು ಹೇಮ್ ಜೀಯವರು ಬರುವಾಗಲೇ ತಿಳಿಸಿದ್ದರು.ನಾವು ಅಷ್ಟಾಗಿ ಕುತೂಹಲ ತೋರಿಸಿರಲಿಲ್ಲ. ಈಗ ವಾಪಾಸು ತೆರಳುವಾಗ ಮತ್ತೆ ಆ ಜಾಗವನ್ನು ನೆನಪಿಸಿದರು. ನಾವು ಹೋಗುವ ಹಾದಿಯಲ್ಲೇ, ಕೇವಲ ೭ಕಿ.ಮೀ ದೂರದಲ್ಲಿ ಸಿಗುವುದಾದ್ದರಿಂದ, ಹೂಂ ಎಂದೆವು. ಅಲ್ಲಿ ಏನಿದೆ? ಏನು ಮಾಡಬೇಕು? ಎಂದು ಒಂದೂ ಗೊತ್ತಿರಲಿಲ್ಲ.



ಕಾರಿಳಿದು ನಡೆದು ಬರುವಾಗ, ಸಾಮಾನ್ಯವಾಗಿ ದೇವಸ್ಥಾನಗಳ ಬಳಿ ಕಾಣುವಂತಹ, ಅಂಗಡಿಗಳು ಸಾಲು ಸಾಲು ಇದ್ದವು. ದೇವಸ್ಥಾನ ಪ್ರವೇಶಿಸಿದರೆ, ಜನರು ಸಾಲು ಸಾಲುಗಳಲ್ಲಿ ಶಿಸ್ತಿನಿಂದ ನಿಂತಿದ್ದರು. ಎಲ್ಲಿಂದ ಹೋಗುವುದು, ಎಲ್ಲಿಂದ ಹೊರಬರುವುದು ಒಂದೂ ತಿಳಿಯಲಿಲ್ಲ. ಸಾಲಿನಲ್ಲಿ ನಿಂತರೆ ನಮ್ಮ ಮುಂದಿನ ಯೋಜನೆಗಳೆಲ್ಲಾ ಹಾಳಾಗುವುದು ಖಚಿತ, ಹೀಗಾಗಿ ಸಾಲಿನಲ್ಲಿ ನಿಲ್ಲದೇ, ಸುಮ್ಮನೆ ಒಂದು ಸುತ್ತು ಹಾಕಿ ಬಂದೆವು.ಮುಸಲ್ಮಾನರ ದರ್ಗಾದ ರೀತಿ ಕಾಣಿಸಿತು. ಅಲ್ಲಿನ ಸಂಪ್ರದಾಯಗಳೂ ಹಾಗೇ ಕಂಡವು. ಗಡಿ ರಕ್ಷಣಾದಳದ ಸೈನಿಕರು ತುಂಬಾ ಜನ ಬಂದಿದ್ದರು. ಕೇವಲ ೧೦ ನಿಮಿಷಗಳಲ್ಲೇ ವಾಪಾಸು ಬಂದ ನಮ್ಮನ್ನು ನೋಡಿ ಹೇಮ್ ಜೀಯವರಿಗೆ ಆಶ್ಚರ್ಯ. ನೀರಿನ ಬಾವಿ ನೋಡಿದಿರಾ? ಎಂದು ಕೇಳಿದರು. ನಿಜಕ್ಕಾದರೆ, ನಮಗೆ ಅಲ್ಲಿ ಜನರ ಸಾಲು ಕಂಡೇ ಭಯವಾಗಿತ್ತು, ನಾವು ಸುಮ್ಮನೇ, ಹೌದೌದು ಎಂದಷ್ಟೇ ಹೇಳಿ ತೆಪ್ಪಗೆ ಕುಳಿತೆವು.

ವಾಪಾಸು ಬಂದ ಮೇಲೆ ಇಂಟರ್ನೆಟ್ ನಲ್ಲಿ ಜಾಲಾಡಿಸಿದಾಗ, ನಾವು ಭೇಟಿ ಕೊಟ್ಟ ಜಾಗ, ರಾಮ್ದೇವ್ರಾ ಎಂದೂ, ಸಂತ ಬಾಬಾ ರಾಮ್ ದೇವ್ ಎಂಬವರ ಸಮಾಧಿಯೂ, ಅಲ್ಲಿಯೇ ಅವರಿಗಾಗಿ ನಿರ್ಮಿಸಿದ ದೇವಾಲಯ ಎಂದೂ ತಿಳಿಯಿತು. ಹಿಂದೂಗಳನ್ನೂ, ಮುಸ್ಲಿಮರನ್ನೂ, ದಲಿತರನ್ನೂ, ಬಡವ ಬಲ್ಲಿದರನ್ನೂ ಸಮಾನವಾಗಿ ಕಂಡ ಅವರು ನಿಜ ಅರ್ಥದಲ್ಲಿ ಜಾತ್ಯಾತೀತ, ಮಾನವತೆಯ ಸಂಕೇತವಾಗಿ ಸ್ಥಾಪಿತವಾಗಿದ್ದಾರೆಂದು ಅನಿಸಿತು.

ಕೀಶನ್

ಇಂಟರ್ನೆಟ್ ನಲ್ಲಿ, ಜೋಧಪುರ, ಜೈಸಲ್ಮೇರ್ ಗಳ ಸುತ್ತಮುತ್ತಲಿನ ಪ್ರೇಕ್ಷಣೀಯ ಸ್ಥಳಗಳ ಹುಡುಕಾಟದಲ್ಲಿದ್ದಾಗ, ಕೀಶನ್ ಎಂಬ ಪಕ್ಷಿಧಾಮದ ಬಗ್ಗೆ ಸ್ವಲ್ಪ ಮಾಹಿತಿ ಸಿಕ್ಕಿತ್ತು. ಬಳಿಕ ಗೂಗಲ್ ಮ್ಯಾಪ್ ಮೂಲಕ ನೋಡಿ ತಿಳಿದುಕೊಂಡೆವು. ಜೈಸಲ್ಮೇರ್ ನಿಂದ ವಾಪಾಸು ಜೋಧಪುರಕ್ಕೆ ಬರುವಾಗ ಪೋಖರನ್ ನಲ್ಲಿ ಎಡಕ್ಕೆ ತಿರುಗಿ ಫಿಲೋದಿ ಮಾರ್ಗವಾಗಿ ಕೀಶನ್ ತಲುಪಿದೆವು.

ಕೀಶನ್ ಒಂದು ಪುಟ್ಟ ಪಟ್ಟಣವೆನ್ನಬಹುದು. ಇದು ಪ್ರಸಿದ್ಧಿಗೆ ಬಂದುದು ಇಲ್ಲಿಗೆ ಪ್ರತಿವರ್ಷವೂ ವಲಸೆ ಬರುವ ಮಂಗೋಲಿಯಾದ ಕ್ರೇನ್ ಹಕ್ಕಿಗಳಿಂದ. ಈ ಹಕ್ಕಿಗಳಿರುವ ತಾಣವನ್ನು ಮಂಗಳೂರಿನಲ್ಲಿ ಗೂಗಲ್ ಮ್ಯಾಪ್ ನಲ್ಲಿ ನೋಡಿದಷ್ಟು ಸುಲಭವಾಗಿ ಕೀಶನ್ ಊರಿನಲ್ಲಿ ಆಗಲಿಲ್ಲ. ಊರು ತಲಪಿ ೨೦–೩೦ ನಿಮಿಷಗಳವರೆಗೂ ದಾರಿಹೋಕರನ್ನು ಕೇಳಿ ಅಲೆದಾಡಬೇಕಾಯಿತು. ಜಿ.ಪಿ.ಎಸ್ ಪ್ರಕಾರ ನಾವಿದ್ದ ಜಾಗದಲ್ಲೇ ಹಕ್ಕಿಗಳ ತಾಣವೆಂದು ಕಂಡು ಬಂದರೂ, ಪ್ರವಾಸಿಗರಿಗೆ ಸುಲಭವಾಗುವಂತಹ ನಾಮ ಫಲಕಗಳಿಲ್ಲದೇ, ಮಧ್ಯಾಹ್ನದ ೩ ಗಂಟೆಯ ಸಮಯಕ್ಕೆ ರಸ್ತೆಯಲ್ಲಿ ಜನರೂ ಇಲ್ಲದೆ ಪರದಾಡಿದೆವು.

ಅಂತೂ,ಇಂತೂ ನಮ್ಮ ಕಾರು ಹಕ್ಕಿಗಳಿರುವ ಕೆರೆಯ ಸಮೀಪ ಬಂದು ನಿಂತದ್ದೇ ತಡ, ೧೦–೧೨ ಬಾಲಕರು ಗೈಡ್ ಗಳ ರೂಪದಲ್ಲಿ ಬಂದರು. ನಾವು ಎಲ್ಲಿ ಹೋಗಿ ನಿಲ್ಲಬೇಕು? ಯಾವ ಜಾಗದಿಂದ ಫೋಟೋ ತೆಗೆಯಬೇಕು? ಹಕ್ಕಿಗಳು ಸಮೀಪ ಬರಬೇಕಿದ್ದರೆ ಏನು ಮಾಡಬೇಕು? ಅವುಗಳ ಹಾರಾಟ ನೋಡಬೇಕಿದ್ದರೆ ಏನು ಮಾಡಬೆಕು? ಮುಂತಾದ ವಿವರಗಳನ್ನೆಲ್ಲಾ ನಾ ಮುಂದು, ತಾ ಮುಂದು ಎಂದು ನಮಗೆ ಅರ್ಥವಾಗುವ ಹಿಂದಿಯಲ್ಲೇ ತಿಳಿಸಿದರು. ದುಡ್ಡು ಕೊಟ್ಟರೆ, ತಾವು ಹಕ್ಕಿಗಳಿಗೆ ಬಾಜ್ರಾ ಎಂಬ ಕಾಳನ್ನು ತಂದು ಹಾಕುವುದಾಗಿಯೂ, ಆಗ ಹಕ್ಕಿಗಳು ಸಮೀಪ ಬರುತ್ತವೆಂದೂ ತಿಳಿಸಿದರು. ಮಕ್ಕಳು ಹೇಳಿದಂತೆ ಕೇಳಿದೆವು.







ವಿಸ್ತಾರವಾದ ೨ ದೊಡ್ಡ ಸರೋವರಗಳಿದ್ದವು. ಸಾಕಷ್ಟು ನೀರೂ ಇತ್ತು. ದಡದಲ್ಲಿ ಕರ ಕರ ಎಂದು ಸದ್ದು ಮಾಡುತ್ತಾ ಸಾವಿರಾರು ಹಕ್ಕಿಗಳಿದ್ದವು.ಬೂದು ಮೈ ಬಣ್ಣದ, ಕಪ್ಪು ಕುತ್ತಿಗೆಯ ಕೊಕ್ಕರೆ ತರದ ಕ್ರೇನ್ ಹಕ್ಕಿಗಳು. ಒಂದೇ ರೀತಿಯ ಈ ಹಕ್ಕಿಗಳ ಸಮೂಹ, ಶಿಸ್ತಿನ ಸಿಪಾಯಿ ಬಿಡಿಸಿದ ಚಿತ್ರ ಎಂದು ಅನಿಸುತ್ತಿತ್ತು. ಸಾಧಾರಣ ಎಲ್ಲಾ ಒಂದೇ ಅಳತೆಯವಾಗಿ ಕಂಡವು. ಕೆಲವು ಹಾರುತ್ತಿದ್ದರೆ, ಉಳಿದವು ಸದ್ದು ಮಾಡುತ್ತಾ ದಡದಲ್ಲೇ ನಿಂತಿದ್ದವು. ಮಕ್ಕಳು ಬಾಜ್ರಾ ತಂದು ನೀರಿನ ಮೇಲೆ ಚೆಲ್ಲಿದ ಕೂಡಲೇ ಹಾರಿ ಬಂದು ತಿನ್ನುತ್ತಿದ್ದವು.

ಇಲ್ಲೂ ಹಕ್ಕಿಗಳು ಮತ್ತು ನಾವು ಮಾತ್ರ ಇದ್ದೆವಾದ್ದರಿಂದ, ನಮಗೆ ಬೇಕಾದಷ್ಟು ಕಾಲ ನೋಡಲು, ಫೋಟೋ ತೆಗೆಯಲು, ಆ ಪರಿಸರವನ್ನು ಅನುಭವಿಸಲು ಅವಕಾಶವಾಯಿತು. ನಿಜ ಹೇಳಬೇಕೆಂದರೆ, ಪರಿಸರದ ಉಳಿವಿಗೆ, ನಾಮಫಲಕವಿರಲೇಬಾರದು ಎಂದೆನಿಸಿತು.

ಕೀಶನ್‌ನ ಕ್ರೇನ್ ಹಕ್ಕಿಗಳನ್ನು ಅಲ್ಲಿನ ಜನ ತುಂಬಾ ಪ್ರೀತಿ, ಅಭಿಮಾನಗಳಿಂದ ಕಾಣುತ್ತಾರೆ. ೧೦-೧೨ ವರ್ಷಗಳ ಆ ಮಕ್ಕಳೂ ಹಕ್ಕಿಗಳಿಗೆ ಯಾವುದೇ ರೀತಿಯ ಹಾನಿಯನ್ನು ಸಹಿಸಲಾರರು." ನಾವು ಈ ಹಕ್ಕಿಗಳಿಗೆ ಬೇಕಾಗಿ ಪ್ರಾಣವನ್ನಾದರೂ ತೆತ್ತೇವು.ಹಾನಿ ಮಾಡಲು ಬಿಡೆವು" ಎಂದು ಮಕ್ಕಳು ಒಟ್ಟಾಗಿ ಹೇಳಿದಾಗ, ದಂಗಾಗಿ ಹೋದೆ.ಇಲ್ಲಿನವರ ಕಾಳಜಿಯ ಉದಾಹರಣೆಗೆ ಸಂಬಂಧಿಸಿದ ಘಟನೆಯನ್ನು ಜಾಲತಾಣವೊಂದರಲ್ಲಿ ಓದಿದ್ದೆವು. ಆ ಮಕ್ಕಳೂ ಮತ್ತೆ ಅದನ್ನೇ ನಮಗೆ ತಿಳಿಸಿದರು.

ಈ ಕ್ರೇನ್ ಹಕ್ಕಿಗಳ ಉಳಿವಿಗೆ ಇಲ್ಲಿನ ಪರಿಸರ ಪ್ರೇಮಿ ನಿವಾಸಿಗಳು ಎಷ್ಟು ಮುತುವರ್ಜಿ ತೋರಿಸಿದರೂ, ಅವರ ವಿರೋಧಿ ಬಣವೊಂದು ಹಕ್ಕಿಗಳಿಗೆ ತೊಂದರೆ ಕೊಡುವುದೂ, ಸಾಯಿಸುವುದೂ ಮಾಡುತ್ತಿತ್ತಂತೆ. ಆಗ ಊರಿನ ಜನ ಒಟ್ಟಾಗಿ ಅವರನ್ನು ವಿರೋಧಿಸಿದ್ದೂ ಅಲ್ಲದೇ, ಹೋರಾಟ ನಡೆಸಿ ತಮ್ಮ ಊರಿಗೆ ಒಂದು ಆರಕ್ಷಕ ಠಾಣೆ ಬರುವಂತೆ ಮಾಡಿದರಂತೆ.ತಮ್ಮ ಮಕ್ಕಳಿಗೆ ಈ ಕತೆಯನ್ನು ತಿಳಿಸುವುದಲ್ಲದೇ, ಯಾರಾದರೂ ಹಕ್ಕಿಗಳಿಗೆ ತೊಂದರೆ ಕೊಟ್ಟರೆ, ಅಲ್ಲಿ ದೂರು ನೀಡಿ ಎಂಬ ತಿಳುವಳಿಕೆಯನ್ನೂ ಕೊಟ್ಟಿದ್ದಾರೆ.

ಓಸಿಯಾನದ ಕಡೆಗೆ

ಕೀಶನ್ ನಿಂದ ಮುಂದೆ ಓಸಿಯಾನ್ ಎಂಬ ಶಿಲ್ಪಕಲೆಗೆ ಸಂಬಂಧಿಸಿದ ಪ್ರೇಕ್ಷಣೀಯ ಸ್ಥಳವೊಂದಿದೆ ಎಂಬ ವಿಷಯವನ್ನು ತಿಳಿದುಕೊಂಡಿದ್ದೆವಾದ್ದರಿಂದ, ನಮ್ಮ ಡ್ರೈವರ್ ಬಳಿ ಅಲ್ಲಿಗೆ ಕರೆದೊಯ್ಯುವಂತೆ ಹೇಳಿದೆವು. ಈಗ, ದಾರಿಯದ್ದಕ್ಕೂ, ಹಳ್ಳಿಯ ಪರಿಸರ ನೋಡಲು ಸಿಗುತ್ತಿತ್ತು. ಅಲ್ಲಲ್ಲಿ ಸಾಸಿವೆ ಗಿಡಗಳು ಹಳದಿ ಹೂಗಳಿಂದ ರಂಜಿಸುತ್ತಿದ್ದರೆ, ನವಿಲುಗಳು ನೀಲಿ ಹಸಿರು ಬಾಲಗಳನ್ನು ಎಳೆಯುತ್ತಾ ಸಾಗುತ್ತಿದ್ದವು.ಪುಟಪುಟನೆ ಹಾರುವ ಚಿಗರೆಗಳೂ, ಕಿವಿ ನೆಟ್ಟಗೆ ಮಾಡಿ ಆಲಿಸುತ್ತಾ, ಹುಲ್ಲು ಮೇಯುತ್ತಾ, ದಣಿವಾರಿಸಿಕೊಳ್ಳುತ್ತಿರುವ ಚಿಗರೆಗಳೂ ಕಾಣಲು ಸಿಗುತ್ತಿದ್ದವು.

ಒಂದು ಕಡೆ, ಚಿಗರೆ (ಹೆಣ್ಣು ಕೃಷ್ಣಮೃಗ) ಯೊಂದು, ರಸ್ತೆಯ ಸಮೀಪದಲ್ಲಿದ್ದುದನ್ನು ಕಂಡು, ಅದರ ಫೋಟೋ ತೆಗೆಯಲು ಕಾರನ್ನು ನಿಲ್ಲಿಸಿದೆವು. ಕಾರಿನಿಂದಲೇ, ಕ್ಯಾಮೆರಾವನ್ನು ತಯಾರುಮಾಡಿಕೊಳ್ಳುತ್ತಿದ್ದಾಗ, ಅಲ್ಲೇ ಹತ್ತಿರದ ಮರದ ಮೇಲಿದ್ದ ಹಕ್ಕಿಯೊಂದು, ವಿಚಿತ್ರವಾಗಿ ಏನೋ ಉಲಿಯಿತು. ತಕ್ಷಣವೇ, ನಮಗೆ ಬೆನ್ನು ಹಾಕಿ ಮೇಯುತ್ತಿದ್ದ ಚಿಗರೆ, ಕಿವಿ ನೆಟ್ಟಗೆ ಮಾಡಿ, ಆ ಹಕ್ಕಿಯನ್ನೇ ದಿಟ್ಟಿಸಿತು. ಕ್ಷಣಾರ್ಧದಲ್ಲಿ ಮಾಯವಾಯಿತು. ಬಹುಶಃ ಆ ಹಕ್ಕಿ, ಈ ಚಿಗರೆಗೆ, ಸಲ್ಮಾನಖಾನನ ಥರದವರು, ನಿನ್ನನ್ನು ಶೂಟ್ ಮಾಡಲು ಹವಣಿಸುತ್ತಿದ್ದಾರೆ ಎಂದಿರಬೇಕು, ನಿಜವೇ, ನಾವು ಅದನ್ನು ಕ್ಯಾಮರಾದಲ್ಲಿ ಶೂಟ್ ಮಾಡಲು ಹೊರಟಿದ್ದೆವು!

ಮುಂದೆ ಸಾಗುತ್ತಿದ್ದಂತೆ, ಹಾಯಾಗಿ ಅವುಗಳಷ್ಟಕ್ಕೇ ಮೇಯುತ್ತಾ ಹೋಗುತ್ತಿದ್ದ ಎತ್ತುಗಳ ಹಿಂಡು, ದನ, ಕರು, ಆಡು, ಕುರಿ, ಒಂಟೆಗಳು ಎಷ್ಟೊಂದು! ಆಗಸದಲ್ಲಿ ಹಾರಾಡುವ ಹದ್ದು, ಗಿಡುಗಗಳೂ, ಮರದ ಮೇಲೆ ಕುಳಿತಿದ್ದ ಗಿಳಿ, ಗುಬ್ಬಿಗಳು ನೂರಾರು.ಅಲ್ಲಲ್ಲಿ ಮರಗಳಲ್ಲಿ ಈ ಹಕ್ಕಿಗಳಿಗೆ ಮಣ್ಣಿನ ಪಾತ್ರೆಗಳಲ್ಲಿ ನೀರನ್ನೂ, ಕಾಳನ್ನೂ ಹಾಕಿ ಸಲಹುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ಸುಕ್ಕುಗಟ್ಟಿದ ಚರ್ಮ, ಮಾಸಿದ ಬಟ್ಟೆಗಳ, ಮುರುಕಲು ಮಣ್ಣಿನ ಗುಡಿಸಲು, ಹುಲ್ಲಿನ ಮಾಡಿನ, ಬಡತನದ ಬೇಗೆಯಲ್ಲಿ ಬೆಂದವರೋ ಎಂದು ನಾವು ಭಾವಿಸುವ ಆ ಹಳ್ಳಿಗರಲ್ಲಿ ಪರಿಸರ ಪ್ರೀತಿ, ಕಾಳಜಿ, ಸಮೃದ್ಧವೂ, ಶ್ರೀಮಂತವೂ ಆಗಿತ್ತು.

ಓಸಿಯಾನ್

ಸಂಜೆಯ ಸುಮಾರು ೪.೩೦ ಕ್ಕೆ ನಾವು ಓಸಿಯಾನ್ ಎಂಬ ಹಳ್ಳಿಯನ್ನು ತಲಪಿದೆವು. ಇಲ್ಲಿನ ಪ್ರಸಿದ್ಧ ದೇವಾಲಯವನ್ನು ನೋಡಲು ಬಂದಿದ್ದೆವು. ಜೈಸಲ್ಮೇರ್ ಹೇಗೆ ಜೀವಂತ (living) ಕೋಟೆಯೋ, ಹಾಗೇ ಈ ದೇವಾಲಯ ಪೂಜೆ, ಪುನಸ್ಕಾರಗಳು ಜೋರಾಗಿಯೇ ಇರುವ ಜೀವಂತ ದೇವಾಲಯ. (ಖಜುರಾಹೋದಂತಹ ಯುನೆಸ್ಕೊ ವಿಶ್ವ ಪರಂಪರೆಗೆ ಸೇರಿದ ದೇವಾಲಯಗಳಲ್ಲಿ ಪೂಜೆ ನಡೆಯುವುದಿಲ್ಲ). ಕಾರು ನಿಲ್ಲಿಸಿ ಕಿರಿದಾದ ಗಲ್ಲಿಯೊಂದರಲ್ಲಿ ಅರ್ಧ ಕಿ.ಮೀ ನಡೆದು ದೇವಾಲಯ ತಲಪಿದೆವು. ಸಾಧಾರಣವಾಗಿ ಕ್ಷೇತ್ರಗಳಲ್ಲಿರುವಂತಹುದೇ ವಾತಾವರಣ.ಗಲ್ಲಿ ರಸ್ತೆಯ ಎರಡೂ ಪಕ್ಕಗಳಲ್ಲಿ ಪೂಜೆ, ಹರಕೆ, ಪುನಸ್ಕಾರಗಳಿಗೆ ಬೇಕಾದ ವಸ್ತುಗಳನ್ನು ಮಾರುವ ಅಂಗಡಿಗಳು, ಬಣ್ಣ ಬಣ್ಣದ ಪ್ರಸಾದದ ತಿಂಡಿಗಳು ಇತ್ಯಾದಿ. ದೇವಸ್ಥಾನದ ಕಲಾತ್ಮಕ ಗೋಪುರಗಳನ್ನು ಕಾರಿನಲ್ಲಿ ಬರುವಾಗ ಒಂದೆರಡು ಕಿ.ಮೀ ದೂರದಿಂದಲೇ ಕಂಡಿದ್ದೆವಾದರೂ, ಈ ಗಲ್ಲಿಯಲ್ಲಿ ನಡೆದು ಬರುವಾಗ ಅದು ಫಕ್ಕನೇ ಗೋಚರಿಸಲೇ ಇಲ್ಲ.

ಕಾರಣಿಕ ಕ್ಷೇತ್ರವಾದ್ದರಿಂದ ಇಲ್ಲಿ ಆಸ್ತಿಕರು ಜಾಸ್ತಿ. ಪ್ರವಾಸಿಗರು ಬಹಳ ಕಡಿಮೆ. ನಮ್ಮ ಹೊರತಾಗಿ ಒಂದು ಪ್ರವಾಸಿಗರ ಟೆಂಪೊ ವಾಹನವಿದ್ದುದನ್ನು ಕಂಡೆವು.

ಹಿಂದೂಗಳೂ, ಜೈನರೂ ಭಕ್ತಿಯಿಂದ ಪೂಜಿಸುವ ದೇವಿ ಒಸಿಯಾನ್ ಮಾತೆಗಾಗಿರುವ ಈ ದೇವಾಲಯವು, ಒಂದು ಗುಡ್ಡದ ಮೇಲೆ ಇರುವ ಕಾರಣ ಸುಮಾರು ಮೆಟ್ಟಲುಗಳನ್ನು ಹತ್ತಬೇಕು.ಈ ಮೆಟ್ಟಲುಗಳ ಎರಡೂ ಬದಿ ಸುಂದರ ಕೆತ್ತನೆಗಳಿರುವ ಕಂಬಗಳಿದ್ದು, ಅವೆರಡನ್ನು ಸೇರಿಸುವ ಕಮಾನಿನ ರಚನೆ ಇಲ್ಲಿಯೂ ಇದ್ದು ಮನಮೋಹಕವಾಗಿದೆ. ಹಳೆಯ ಅದ್ಭುತ ಶಿಲ್ಪಕಲೆಗಳಿರುವ ಭಾಗವು ಒಂದು ಕಡೆಯಿದ್ದರೆ, ದೇವರ ಪೂಜೆ ನಡೆಯುವ ಕಡೆ ನವೀಕರಣಗೊಂಡ ನೆಲ, ಗೋಡೆಗಳಿವೆ. ಶಿಲ್ಪಕಲೆ ಮಾತ್ರ ಬಹಳ ಸುಂದರವಾಗಿದ್ದು, ಖಜುರಾಹೋ ದೇವಾಲಯಗಳ ಕೆತ್ತನೆಯನ್ನು ನೆನಪಿಸುತ್ತದೆ. ಹೊಸತು, ಹಳತರ ಮಿಶ್ರಣವಾಗಿಯೂ ಈ ದೇವಾಲಯ ಕುತೂಹಲಕಾರಿಯಾಗಿದೆ.



ದೇವಸ್ಥಾನದ ಹೊರಗಿನ ರಸ್ತೆ ಅಷ್ಟೇನೂ ಸ್ವಚ್ಛವಿಲ್ಲವಾದರೂ,ಇಲ್ಲಿನ ಮೆಟ್ಟಲುಗಳು, ಶೌಚ, ಸ್ನಾನದ ಗೃಹಗಳು, ಜನರು ಕುಳಿತು ವಿಶ್ರಮಿಸಲು ಬೇಕಾದ ಕೊಠಡಿಗಳು, ಭೋಜನಶಾಲೆ ಎಲ್ಲವೂ ಸ್ವಚ್ಛವಾಗಿವೆ.

ಈ ಜಾಗದ ಬಗ್ಗೆಯೂ ವಿಶೇಷವಾದ ಮಾಹಿತಿ ಸಿಕ್ಕಿರಲಿಲ್ಲವಾದ್ದರಿಂದ, ಇಂಟರ್ನೆಟ್‌ನ್ನೇ ನೆಚ್ಚಿದೆವು. ಸಂಪರ್ಕ ಸಿಕ್ಕಿದಾಗಲೆಲ್ಲಾ, ಕಾರು ಪ್ರಯಾಣದಲ್ಲೇ ಗೂಗಲ್, ವಿಕಿ ಪೀಡಿಯಾಗಳ ಮೊರೆ ಹೋಗಿ, ವಿಷಯ ತಿಳಿಯಲು ಯತ್ನಿಸುತ್ತಿದ್ದೆವು.

ಬೈಷ್ಣೋಯಿಯತ್ತ

ನಮ್ಮ ಪ್ರವಾಸಕ್ಕೆ ಒಂದು ಸಾರ್ಥಕತೆಯ ಭಾವವನ್ನು ನೀಡಿದ್ದು ಬೈಷ್ಣೋಯಿ ಹಳ್ಳಿಗೆ ನಾವು ನೀಡಿದ ಭೇಟಿ ಮತ್ತು ತಿಳಿದುಕೊಂಡ ಅವರ ರೀತಿ ನೀತಿ. ನಮ್ಮ ಜೋಧಪುರ ಪ್ರವಾಸದಲ್ಲಿ ಇದು ಸೇರ್ಪಡೆಯಾದ ರೀತಿಯೂ ಉಲ್ಲೇಖನೀಯ.

ನಾವು ಈ ಸಲದ ಟೂರಿಗೆ ರಾಜಸ್ಥಾನ, ಬಹುಶಃ ಜೋಧಪುರಕ್ಕೂ ಸೇರಿದಂತೆ ಹೋಗುವವರು ಎಂಬ ಅಸ್ಪಷ್ಟ ವಿಷಯ ನಮ್ಮ ಮನದಲ್ಲಿ ಮೂಡಿತ್ತಷ್ಟೇ, ಇನ್ನಿತರ ಯಾವುದೂ ಗಟ್ಟಿಯಾಗಿರಲಿಲ್ಲ. ಆ ದಿನಗಳಲ್ಲಿ ಸ್ವಲ್ಪ ಬಿಡುವು ಸಿಕ್ಕಿತೆಂದು ಮನೆಯಲ್ಲಿದ್ದ ಪುಸ್ತಕಗಳನ್ನು ಹುಡುಕುತಿದ್ದೆ.ನಾನು ಯಾವುದೇ ನಿರ್ದಿಷ್ಟ ವಿಷಯ ಕುರಿತಾಗಿ ಹುಡುಕುತ್ತಿರಲಿಲ್ಲ. ನನ್ನ ಕೆಲವು ಗಂಟೆಗಳ ಓದಿನಲ್ಲಿ ಮುಗಿಸುವಂತಾಗಬೇಕೆಂದು ತೆಳ್ಳಗಿನ ಪುಸ್ತವೊಂದನ್ನು ಕೈಗೆತ್ತಿಕೊಂಡೆ. ಅದು "To kill cow means to end human civilization" ಎಂಬುದು, ಬರೆದವರು ಆಡಿ. Sahadeva Dasaಎಂಬವರು. ಗೋಹತ್ಯೆ ವಿರೋಧಿಸಿ ಬರೆದ ಪುಸ್ತಕ ಎಂದು ಯಾರಿಗಾದರೂ ಅರ್ಥವಾಗುವಂತಹದು.ಮೊದಲ ಕೆಲವು ಪುಟಗಳಲ್ಲೇ ಅವರು ಅಹಿಂಸೆಯೇ ಬದುಕಾಗಿರುವ ಬೈಷ್ಣೋಯಿ ಪಂಥದವರು ರಾಜಸ್ಥಾನದ ಜೋಧಪುರದ ಬಳಿ ಇದ್ದಾರೆಂದೂ, ಅಲ್ಲಿಗೆ ಭೇಟಿ ನೀಡಿದವರಿಗೆ ಅವರ ಸರಳ ಬದುಕಿನ ಸೂತ್ರಗಳನ್ನು ನೋಡಿದಾಗಲೇ, "ಪರಿಸರಕ್ಕೆ ಪೂರಕವಾಗಿ ಬದುಕುವುದು" ಎಂಬ ಅರಿವು ಮೂಡಲು ಸಾಧ್ಯವೆಂದೂ ತಿಳಿಯಿತು. ಕೂಡಲೇ ಮನೋಹರ್ ಬಳಿ ಈ ಮಾಹಿತಿ ಕೊಟ್ಟೆ, ಮರೆತೂ ಬಿಟ್ಟೆ.

ಮುಂದೆ ಕೆಲವು ರಾತ್ರಿಗಳನ್ನು, ನಮ್ಮ ಪ್ರವಾಸ ಅರ್ಥಪೂರ್ಣವಾಗಬೇಕೆಂದು ಮನೋಹರ್ ಇಂಟರ್ನೆಟ್ ಹುಡುಕಾಟದಲ್ಲಿ ಕಳೆದರೆಂದು ತಿಳಿಸಿದೆನಷ್ಟೇ, ಅದರ ಫಲವಾಗಿ ಬೈಷ್ಣೋಯಿ ಹಳ್ಳಿಗೆ ಸಮೀಪದಲ್ಲಿ ಒಂದು ರಾತ್ರಿ ಕಳೆಯುವ ಅವಕಾಶವೂ ಸಿಕ್ಕಿತೆಂದು ತಿಳಿದಾಗ ತುಂಬಾ ಖುಶಿಯಾಯಿತು. ಅಲ್ಲಿಗೆ ಹೋಗಿ ನೋಡಿ, ತಿಳಿದು, ಅನುಭವಿಸಿದಾಗ ಅ ಖುಶಿ ಇನ್ನೂ ಹಿಗ್ಗಿತು.

ಅಂದು, ಜನವರಿ ೨೯ ರ ಸಂಜೆ ಸುಮಾರು ೬.೩೦ ರ ಹೊತ್ತಿಗೆ ಜೋಧಪುರ ಪುನರ್ ಪ್ರವೇಶ ಮಾಡಿದೆವು. "ಇಲ್ಲಿ ಎಲ್ಲಿ?" ಎಂದು ಕೇಳಿದ ಹೇಮ್‌ಜೀಗೆ ಬೈಷ್ಣೋಯಿ ವಿಲೇಜ್ ರೆಸಾರ್ಟ್ ಎಂದು ತಿಳಿಸಿದೆವು. ಯಥಾಪ್ರಕಾರ ಮೊಬೈಲ್ ಹಚ್ಚಿ ಅವರ ಕಿವಿಗೆ ಕಚ್ಚಿಸಿದೆವು. ನಾವು ತಂಗಬೇಕಿದ್ದ ಜಾಗ ಒಂದು ರೆಸಾರ್ಟ್ ಎಂಬುದಾಗಿ ಕೇಳಿಸಿಕೊಂಡಿದ್ದ ಡ್ರೈವರ್ 'ಮಾರ್ಗಸೂಚಿ'ಗಳನ್ನು ಪಡೆದು ಕಾರನ್ನು ಅತ್ತ ಓಡಿಸಿದರು. ಅವರು ನಿರೀಕ್ಷಿಸಿದ್ದ ಜಾಗದಲ್ಲಿ ರೆಸಾರ್ಟ್ ಸಿಗದೇ ಇರಲು ಸ್ವಲ್ಪ ನಿಧಾನಿಸಿ, ದಾರಿಯಲ್ಲಿ ಸಿಗುತ್ತಿದ್ದ ಅಡ್ಡ ರಸ್ತೆಗಳನ್ನೆಲ್ಲಾ ಇದು ಇರಬೇಕು, ಇದು ಇರಬೇಕು ಎನ್ನುತ್ತಾ ಸುಮಾರು ದೂರ ಬಂದ ಮೇಲೆ," ಬೈಷ್ಣೋಯಿ ವಿಲೇಜ್ ರೆಸಾರ್ಟ್ಸ್' ಎಂಬ ಫಲಕ ಕಾಣಲು ಅವರಿಗೆ ತಿಳಿಸಿದೆವು.

ಆ ಅಡ್ಡ ರಸ್ತೆಯಂತೂ ಸಂಪೂರ್ಣ ನಿರ್ಜನವಾಗಿತ್ತು. ಹೆದ್ದಾರಿಯ ಪಕ್ಕದಲ್ಲೇ ಇದ್ದರೂ, ರಸ್ತೆ ವಾಹನ ಸಂಚಾರಗಳಿಲ್ಲದೇ, ಸುತ್ತಲೂ ಮರಗಳಿಂದ ತುಂಬಿ, ಕತ್ತಲನ್ನು ಗಾಢವಾಗಿಸಿತ್ತು. ಇಲ್ಲಿ ದಾರಿ ತಪ್ಪಿದರೆ ಕೇಳಲು ಯಾರೂ ಸಿಗಲಾರರು, ಮೊಬೈಲ್ ನೆಟ್ವರ್ಕ್ ಕೂಡಾ, ಎಂಬುದು ಅರಿವಾಗಿ ರಾತ್ರಿಯ ೭.೩೦ಕ್ಕೇ, ಗಂಟೆ ಹನ್ನೆರಡೋ, ಒಂದೋ ಆಗಿರಬಹುದೇನೋ ಎಂದು ಅನಿಸಿ, ಕತ್ತಲಿನ ಗೂಢತೆಯ ಅನುಭವವಾಗತೊಡಗಿತು. ಒಂದೆರಡು ಕವಲು ರಸ್ತೆಗಳು ಎದುರಾದರೂ, ರೆಸಾರ್ಟ್ ಆದ್ದರಿಂದ, ಅಗಲ ಹೆಚ್ಚಿನದನ್ನು ಆರಿಸಿಕೊಳ್ಳುವ ಸೂತ್ರ ಪಾಲಿಸಿ, ೪–೫ ಕಿ.ಮೀ ಬಳಿಕ, ಕೆಲವು ನಿಮಿಷಗಳಲ್ಲಿ, ನಮ್ಮ ಜಾಗ ತಲಪಿದೆವು. ನಾವೇನೋ ವಾಹ್! ಎಂಥ ಸುಂದರ ಜಾಗ ಎಂದು ಸುತ್ತಲಿನ ಕತ್ತಲನ್ನು ನೋಡಿ ಖುಶಿ ಪಡುತ್ತಿದ್ದರೆ, ಹೇಮಜೀ ಮಾತ್ರ, 'ಸಾಬ್, ಆಪ್ ರೆಸಾರ್ಟ್ ಬೋಲಾಥಾನಾ?' ಎಂದು "ಇಲ್ಲಿ ರೆಸಾರ್ಟ್ ಎಲ್ಲಿ? ಬರೀ ಹಳ್ಳಿಯ ಗುಡಾರಗಳಿವೆಯಲ್ಲಾ?" ಎಂಬ ಅವರ ಮನಸ್ಸಿನ ಪ್ರಶ್ನೆಯನ್ನು, ಆ ಶಬ್ದಗಳಲ್ಲಿ ಹೊರಹಾಕಿದರು.









ಸುತ್ತಮುತ್ತ ಬಣ್ಣ, ಬಣ್ಣದ ಲೈಟುಗಳಿಂದ ಝಗಮಗಿಸುವ ಕಾಂಕ್ರೀಟ್ ಕಟ್ಟಡಗಳನ್ನೂ, ಹಸಿರು ಹುಲ್ಲು ಹಾಸಿ, ರಾಸಾಯನಿಕ ಗೊಬ್ಬರಗಳಿಂದ ಹುಲುಸಾಗಿ ಬೆಳೆಸಿ, ನೀಟಾಗಿ ಕತ್ತರಿಸಿದ ಗಿಡಗಳ ನಿರೀಕ್ಷೆಯಲ್ಲಿದ್ದವರಿಗೆ ಎಂತಹ ನಿರಾಸೆ! 'ಹಾ, ಯಹೀ ಜಗಹ್ ಹೈ' ಎಂದಷ್ಟೇ ಉತ್ತರಿಸಿ ಮನೋಹರ್ ಇಲ್ಲಿ ರಿಸೆಪ್ಶನ್ ಕೌಂಟರ್ ಗೆ ಪರ್ಯಾಯವಾದ ಜಾಗ ಯಾವುದಿರಬಹುದು ಎಂದು ಹುಡುಕುತ್ತಿದ್ದಾಗ, ಒಬ್ಬ ವ್ಯಕ್ತಿ ಕೈ ಮುಗಿಯುತ್ತ ಎದುರಾದರು. "ನಿಮ್ಮ ಕಾರು ಅಲ್ಲೇ ಇರಲಿ, ಅದರ ಪಕ್ಕದ ಕಾಟೇಜ್ ನಿಮ್ಮದೇ" ಎಂದರು. ಕಾರಿಳಿದು ನೋಡಿದರೆ, ನಮ್ಮೂರಿನ ಅಡಿಕೆ ತೋಟದವರಿಗೆ ಇರುವಂತಹ ದೊಡ್ಡ ಜಾಲು. ಅದರ ಪಕ್ಕಗಳಲ್ಲಿ ಎರಡೂ ಕಡೆಗಳಲ್ಲಿ ಸಣ್ಣ, ಸಣ್ಣ ಮಣ್ಣಿನ ಗುಡಿಸಲುಗಳು. ಮುಳಿ ಹುಲ್ಲಿನ ಮಾಡು. ಮಂದ ಬೆಳಕಿನ ವ್ಯವಸ್ಥೆ. ಗುಡಿಸಲುಗಳಿಗೆಲ್ಲಾ ಎಷ್ಟು ಸಾಧ್ಯವೋ ಅಷ್ಟು ಚಿತ್ರಗಳ ಅಲಂಕಾರ. ಅಂಗಳದ ತುಂಬಾ ಮರಳಿನ ಮಣ್ಣು.ಅಲ್ಲೇ ಒಂದು ಅರ್ಧ ಚಂದ್ರಾಕಾರದ ವೇದಿಕೆಯೂ ಇದ್ದು, ಅಲ್ಲಿ ನಡೆದಿರಬಹುದಾದ ಲೋಕ ಸಂಗೀತ, ನೃತ್ಯ ಕಾರ್ಯಕ್ರಮಗಳಿಗೆ ಸಾಕ್ಷಿ ಹೇಳುತ್ತಿತ್ತು.

ಈ ರೆಸಾರ್ಟ್ ನ್ನು ನಡೆಸುತ್ತಿರುವ ೨೫ ರ ಯುವಕ ಅಲ್ಲಿಯೇ ಇದ್ದು ನಮ್ಮ ಬರವಿಗಾಗಿ ಕಾಯುತ್ತಿದ್ದರು. ನಾವು ಮಾತ್ರವೇ ಅಂದಿನ ರಾತ್ರಿಯ ಅತಿಥಿಗಳು! ನಮ್ಮ ರಾತ್ರಿಯೂಟವಾಗಿಲ್ಲವೆಂದೂ, ನಾವು ಏನನ್ನೂ ಕಟ್ಟಿಸಿಕೊಂಡು ಬಂದಿಲ್ಲವೆಂದು ತಿಳಿದುಕೊಂಡು, ಬೇಗನೆ ಭೋಜನದ ವ್ಯವಸ್ಥೆ ಮಾಡುತ್ತೇನೆಂದು ತಿಳಿಸಿದರು.ನಾವು ಸ್ನಾನ ಮಾಡಿ ಫ್ರೆಶ್ ಆಗಿ ಊಟ ಮಾಡಬಹುದೆಂದು ನಮ್ಮ ಗುಡಾರದೆಡೆಗೆ ತೆರಳಿದೆವು. ಹೇಮಜೀಯವರಿಗೂ ಯಥೋಚಿತ ವ್ಯವಸ್ಥೆ ಉಪಚಾರಗಳು ನಡೆದವು.
ನಮ್ಮ ಗುಡಿಸಲು ಮಣ್ಣಿನ ಗೋಡೆಯದ್ದೂ, ಮುಳಿಹುಲ್ಲಿನ ಮಾಡಿನದ್ದೂ ಆಗಿತ್ತು. ಅದರ ಇಂಟೀರಿಯರ್ ತುಂಬಾ ದೇಸೀಯೂ, ಸೊಗಡಿನಿಂದಲೂ ಕೂಡಿತ್ತು.ಗೋಡೆಯಲ್ಲಿ ಅಲ್ಲಲ್ಲಿ ಶೆಲ್ಫ್ ಗಳಿದ್ದವು. ಸ್ವಿಚ್ ಬೋರ್ಡ್ ಗಳೂ ಅಲ್ಲಿಯೇ ಇದ್ದು, ಮೊಬೈಲ್ ಛಾರ್ಜ್ ಮಾಡಲು ಅನುಕೂಲವಾಗಿತ್ತು. ಕಿಟಿಕಿಯ ಪರದೆಗಳೂ, ಬೆಡ್ ಶೀಟ್ಸ್, ದಿಂಬಿನ ಕವರ್‌ಗಳೂ ಅಲ್ಲಿನ ಸಂಸ್ಕೃತಿಯ ದ್ಯೋತಕವೆನ್ನುವ ಭಾವವನ್ನು ಮೂಡಿಸುತ್ತಿದ್ದವು.

ಸುಮಾರು ಒಂದೂವರೆ ಗಂಟೆ ಲಿಂಬೆ ಚಹಾ ಕುಡಿಯುತ್ತಾ, ಮಾತಿನಲ್ಲಿ ಕಳೆದಿದ್ದೆವೋ ಏನೋ, ಅಷ್ಟರಲ್ಲಿ ಊಟ ತಯಾರಿದೆ ಎಂಬ ಸುದ್ದಿ ಬಂತು. ದೊಡ್ಡ ಅಂಗಳ ದಾಟಿ ಹೋದರೆ, ಮೇಜು ಖುರ್ಚಿಗಳನ್ನಿಟ್ಟ ಹಾಲ್ ಕಾಣಿಸಿತು. ಅಲ್ಲೇ ರಿಸೆಪ್ಶನ್ ಕೌಂಟರ್, ಟೀ.ವಿ ಕೂಡಾ ಇತ್ತು. ಈ ಜಾಗವನ್ನೂ, ಹೂ ಕುಂಡಗಳೂ, ಬಳ್ಳಿಗಳೂ, ಮಣ್ಣಿನ ಆಕರ್ಷಕ ವಸ್ತುಗಳೂ, ಚಿತ್ರಗಳಿಂದಲೂ ಅಲಂಕರಿಸಿದ್ದರು.

ಊಟಕ್ಕೆ, ಮೊದಲಿಗೆ ದಾಲ್, ಭಾಟಿ ಎಂಬುದನ್ನು ಬಡಿಸಿದರು.ಇದು ದೊಡ್ಡ ಉಂಡೆಯಂತಿದ್ದು, ರೆಸಾರ್ಟ್ ನ ಮಾಲಕ ಸ್ವತಃ ನಮ್ಮ ತಟ್ಟೆಗಳಿಗೆ ಬಡಿಸುತ್ತಾ, ಇದನ್ನು ಹೀಗೆ ಪುಡಿ ಮಾಡಿ ಬಳಿಕ ಈ ಸಬ್ಜಿಯೊದಿಗೆ ನೆಂಜಿಕೊಂಡು ತಿನ್ನಿ ಎಂದು ತೋರಿಸಿಕೊಟ್ಟರು.ಆ ಬಳಿಕ ಭಾಟಿ ಚುರ್ಮಾ ಎಂಬ ಸಿಹಿಯನ್ನೂ ತಿಂದೆವು.ನಮ್ಮನ್ನ, ಉಪಚರಿಸುತ್ತಲೇ ಇದ್ದ ಅವರನ್ನೂ ಊಟ ಮಾಡಲು ಹೇಳಿದೆವು.ನಮ್ಮ ಒತ್ತಾಯಕ್ಕೆ ಮಣಿದು, ನಮ್ಮೊಂದಿಗೇ ಊಟಕ್ಕೆ ಕುಳಿತರು.ತಾನು ಅಂದು ರಾತ್ರಿ ಅಲ್ಲಿಯೇ ಉಳಿಯುವುದಾಗಿ, ಸಾಮಾನ್ಯವಾಗಿ ಯಾರೂ ಅತಿಥಿಗಳಿಲ್ಲದಿದ್ದಲ್ಲಿ, ಜೋಧಪುರದ ತನ್ನ ಮನೆಗೆ ಹೋಗುವ ಕ್ರಮವೆಂದೂ ತಿಳಿಸಿದರು. ಇಂಜಿನಿಯರಿಂಗ್ ಮುಗಿಸಿ , ಈ ಉದ್ಯಮದಲ್ಲಿ ತನ್ನ ತಂದೆಯ ಜತೆ ಕೈ ಜೋಡಿಸಿದ್ದೇನೆಂದರು.ತನ್ನ ತಮ್ಮ, ತಂಗಿ ಇನ್ನೂ ವಿದ್ಯಾಭ್ಯಾಸ ಮುಂದುವರಿಸುತ್ತಿದ್ದಾರೆ ಎಂದರು. ಹೀಗೆ ಮಾತಾಡುತ್ತಾ, ಸುಮಾರು ಹೊತ್ತು ಕಳೆದವು.ಮಾರನೆ ದಿನ ಬೆಳಗ್ಗೆ, ಬೈಷ್ಣೋಯಿ ಹಳ್ಳಿಗೆ ತಮ್ಮ ಜೀಪಿನಲ್ಲಿ ಕರಕೊಂಡು ಹೋಗುವುದಾಗಿ ತಿಳಿಸಿದರು.

ಬೈಷ್ಣೋಯಿಗೊಂದು ಸುತ್ತು
(ದಿನ ಐದು)



ಬೆಳಗ್ಗಿನ ಉಪಾಹಾರಮುಗಿಸಿ ೯ ಗಂಟೆಗೆ ಜೀಪ್ ಹತ್ತಿ ಕುಳಿತೆವು. ನಮ್ಮ ಆತಿಥೇಯರು ಚಾಲನೆ ಮಡುತ್ತಾ ಆ ಹಳ್ಳಿಯ ಜನ, ಪ್ರಕೃತಿ, ಪ್ರಾಣಿ, ಪರಿಸರ ಇವುಗಳೆಲ್ಲಾ ಹೇಗೆ ಒಂದನ್ನೊಂದು ಅನುಸರಿಸಿ ಬದುಕುತ್ತಿವೆ ಎಂಬ ಬಗ್ಗೆ ವಿವರಣೆ ನೀಡುತ್ತಾ ಹೋದರು. ಬೈಷ್ಣೋಯಿ ಅಂದರೆ ವೈಷ್ಣವ ಎಂಬರ್ಥವಲ್ಲ, ಅದು ಬೀಸ್ ಅಂದರೆ ೨೦, ನವಿ ಅಂದರೆ ೯ ಹೀಗೆ ೨೯ ಸೂತ್ರಗಳನ್ನು ಪಾಲಿಸುವವರ ಒಂದು ಪಂಥ.



ಅವರ ಗುರು ಜಂಭೇಶ್ವರರು, ಈ ಪಂಥವನ್ನು ೧೪೮೫ ರಲ್ಲಿ ಆರಂಭಿದರು. ೫೦೦ ವರ್ಷಗಳ ಹಿಂದೆಯೇ ಅವರು ಪರಿಸರ ರಕ್ಷಣೆಯ ಅಗತ್ಯವನ್ನು ಮನಗಂಡಿದ್ದರು ಹಾಗೂ ಅದನ್ನು ತಮ್ಮ ಸೂತ್ರಗಳಲ್ಲಿ ಅಳವಡಿಸಿ ಜನರು ಪಾಲಿಸುವಂತೆ ಮಾಡಿದರು. ೧೭೩೦ ರಲ್ಲಿ ಜೋಧಪುರದ ರಾಜ ಮರ ಕಡಿಯಲು ಬಂದಾಗ, ಅದನ್ನು ವಿರೋಧಿಸಿ ೩೬೩ ಬೈಷ್ಣೋಯಿಗಳು ಮರವನ್ನು ಅಪ್ಪಿ ಹಿಡಿದು ತಮ್ಮ ಪ್ರಾಣವನ್ನು ತೆತ್ತರಂತೆ.

(ವಿವರಗಳಿಗೆ: http://www.bishnoivillage.com/bishnoism.html ಭೇಟಿ ಕೊಡಿ.)

ಕೆಲವು ಹೆಕ್ಟೇರುಗಳ ವಿಸ್ತೀರ್ಣವುಳ್ಳ ಬೈಷ್ಣೋಯಿ ಹಳ್ಳಿಗಳಲ್ಲಿ ವಾಸಿಸುವ ವಿವಿಧ ವೃತ್ತಿಯ ಜನರಿದ್ದಾರೆ.ಕಂಬಾರರು, ಚಮ್ಮಾರರು, ಬಡಗಿ, ನೇಕಾರರು, ಹೀಗೆ ವಿವಿಧ ಕಸುಬುಗಳನ್ನು ನಡೆಸುತ್ತಲೂ, ಕೃಷಿಕರೂ, ಹೈನುಗಾರಿಕೆಯನ್ನೇ ಹೆಚ್ಚಾಗಿ ನೆಚ್ಚಿಕೊಂಡವರೂ ಆಗಿದ್ದಾರೆ.ಒಂದೇ ಕಸುಬಿನವರೆಲ್ಲಾ ಒಂದು ಗುಂಪಾಗಿ ತಮ್ಮ ಕಾಯಕದಲ್ಲಿ ನಿರತರಾಗಿದ್ದನ್ನು ಕಂಡೆವು.ನಮಗೆ ತೋರಿಸಲೆಂದೇ, ಒಂದು ಮನೆಗೆ ಕರಕೊಂಡು ಹೋದರು. ಆ ಮನೆಗೆ, ಒಂದು– ತೆರೆದ ಮಾಡಿನ, ಇನ್ನೊಂದು– ನಾವು ಚಾವಡಿ ಎಂದು ಕರೆಯುವ ಗೋಡೆ, ಸೂರು ಉಳ್ಳ ಬಾಗಿಲು ಇಲ್ಲದ, ಹೀಗೆ ೨ ಜಾಗಗಳಿದ್ದವು. ತೆರೆದ ಮಾಡಿನ ಹಜಾರದ ಒಂದು ಮೂಲೆಯಲ್ಲಿ ಒಲೆ ಹಾಕಿ, ಬೆರಣಿಯನ್ನು ಉಪಯೋಗಿಸಿ ರೊಟ್ಟಿ ತಯಾರಿ ನಡೆಯುತ್ತಿತ್ತು. ಇನ್ನೊಂದೆಡೆ, ಹಗ್ಗದ ಮಂಚದ ಮೇಲೆ ಬಾಜ್ರಾದ ಸಂಡಿಗೆ ಹಪ್ಪಳಗಳನ್ನು ಒಣಗಲು ಹಾಕಿದ್ದರು.





ಹಸಿರನ್ನು ಆದಷ್ಟೂ ಭೂಮಿಯಲ್ಲೇ ಉಳಿಸಬೇಕೆನ್ನುವ ಕಾರಣ, ಬೈಷ್ಣೋಯಿಗಳು ಹಸಿ ಸೊಪ್ಪು, ತರಕಾರಿಗಳನ್ನು ಬಳಸದೇ, ಹೆಚ್ಚಾಗಿ ಒಣ ವಸ್ತುಗಳಿಂದಲೇ ಪದಾರ್ಥಗಳನ್ನು ತಯಾರಿಸುತ್ತಾರೆ. ರೊಟ್ಟಿ ಮತ್ತು ಗಸಿ ಎರಡೂ ಧಾನ್ಯಗಳಿಂದಲೇ ತಯಾರಾಗುತ್ತದೆ. ಮನೆ ತುಂಬಾ ಶುಭ್ರವೂ, ಅಚ್ಚುಕಟ್ಟಾಗಿಯೂ ಇತ್ತು. ಬೈಷ್ಣೋಯಿ ಸ್ತ್ರೀಯೊಬ್ಬರು, ಅಡುಗೆ ತಯಾರಿಯಲ್ಲಿದ್ದರೆ, ಅವರ ಪುತ್ರಿಯರು ಕಾಲೇಜಿಗೆ ಹೋಗಲು ತಯಾರಾಗುತ್ತಿದ್ದರು. ಕಾಲೇಜಿಗೆ ಹೋಗುವುದು ಹೇಗೆ? ಎಂದದ್ದಕ್ಕೆ ಬಸ್ಸಲ್ಲಿ ಎಂದರು.ಅಲ್ಲೇ ಮೂಲೆಯಲ್ಲಿ ಒಂದು ದೊಡ್ಡ, ಮರದ ಕಡೆಗೋಲು ಕಂಡು ಬಂತು. ನಾವು ಕುತೂಹಲದಿಂದ ನೋಡಲು, ಬೈಷ್ಣೋಯಿ ಸ್ತ್ರೀ ಅದನ್ನು ಹೇಗೆ ಬಳಸುವುದೆಂಬುದನ್ನು ತೋರಿಸಿಕೊಟ್ಟರು. ನಿಂತೇ ಕಡೆಯಲು ಅನುಕೂಲವಾಗುವಷ್ಟು ದೊಡ್ಡದಿತ್ತು. ನಾವು ಫೋಟೋ ತೆಗೆಯಲು ಮುಂದಾದಾಗ, ನನ್ನ ಫೋಟೋ ಕಂಪ್ಯೂಟರ್ ನಲ್ಲಿ ಹಾಕಬೇಡಿ ಎಂದು ಹೇಳಿದರು. ಆಧುನಿಕ ವಿಷಯಗಳನ್ನೆಲ್ಲಾ ತಿಳಿದುಕೊಂಡಿದ್ದಾರೆಂದು ಅನಿಸಿತು. ಅವರ ಉಡುಗೆ ತೊಡುಗೆಗಳು ಥಕ್ಕನೆ ನೋಡಿದರೆ, ಲಂಬಾಣಿಯವರಂತೆ, ಲಂಗ, ರವಿಕೆ, ಸೆರಗು ಕಂಡರೂ ಸೂಕ್ಷ್ಮ ವ್ಯತ್ಯಾಸಗಳಿದ್ದವು.ಉಟ್ಟ ಬಟ್ಟೆಯ ಬಣ್ಣ ಬಿಳಿ ಮತ್ತು ಕೆಂಪು.ಬೆನ್ನ ಮೇಲಿಂದ ತಲೆವರೆಗೆ ಹೊದೆದ ಸೆರಗು.ಅರ್ಧ ಚಂದ್ರಾಕಾರದ ಮೂಗುತಿ, ಕಿವಿವರೆಗೂ ಎಳೆದ ಅದರ ಚೈನ್, ಕಿವಿ, ಕೈ ಬೆರಳು ತುಂಬಾ ಓಲೆ, ಬಳೆ, ಉಂಗುರಗಳು. ಕಾಲ್ಬೆರಳುಗಳ ತುಂಬಾ ಕಾಲುಂಗುರಗಳೂ, ಗೆಜ್ಜೆಗಳೂ ಇದ್ದವು. ಅಂತೂ ಸರ್ವಾಲಂಕಾರ ಭೂಷಿತೆಯರು! ಬೈಷ್ಣೋಯಿ ಹೆಂಗಸರು ಮದುವೆ ದಿನ ಧರಿಸಿದ ಆಭರಣಗಳನ್ನು ಮುಂದೆ ಯಾವ ಕಾರಣಕ್ಕೂ ತೆಗೆಯುವುದಿಲ್ಲವಂತೆ!



ಈ ಮನೆಯ ಅಂಗಳದಲ್ಲೇ ಒಂದು ದೊಡ್ಡ ನೀರಿನ ಟಾಂಕಾ ಕೂಡಾ ಇತ್ತು. ತಾರಸಿಯ ನೀರೆಲ್ಲಾ ಅದಕ್ಕೆ ಸಂಗ್ರಹವಾಗುವ, ಬೇಕೆಂದಾಗ ನೀರನ್ನು ಸೇದುವ, ಉಳಿದಂತೆ ಮುಚ್ಚಿ ಇಡುವ ವ್ಯವಸ್ಥೆಗಳೂ ಇದ್ದವು.

ತೆರೆದ ಸೂರಿನ ಹಜಾರ ಚಳಿಗಾಲದಲ್ಲಿ (ಹಗಲು) ಹಿತವಾಗಿದ್ದರೆ, ಒಳ ಹಜಾರ ಬೇಸಿಗೆಯಲ್ಲಿ ಹಿತವಾಗಿರುತ್ತದೆ ಎಂದರು.ಒಳಗೆ ಇನ್ನೊಂದು ಅಡಿಗೆ ಕೋಣೆಯೂ ಇದ್ದು, ತುಂಬಾ ಒಪ್ಪ ಓರಣವಾಗಿ ಇಟ್ಟಿದ್ದರು.ಆ ಮನೆಯಲ್ಲಿ ಮತ್ತೆರಡು ಕೋಣೆಗಳೂ ಇದ್ದವು. ಕಲ್ಲು ಚಪ್ಪಡಿಯ ಮಾಡು, ಅದರ ಮೇಲೆ ತಾರಸಿಗೆ ಹೋಗಲು ವ್ಯವಸ್ಥೆಯೂ ಇತ್ತು.

ಹಳ್ಳಿಯಲ್ಲಿ ಸಾಗುತ್ತಿದ್ದಂತೆ, ಕೆಲವು ಸೈಕಲ್ ಸವಾರರು ಎದುರಾದರು. ನಮ್ಮ ಆತಿಥೇಯರು ರಾಂ ರಾಂ ಎಂದು ಎಲ್ಲರಿಗೂ ನಮಸ್ಕಾರ ವಿನಿಮಯ ಮಾಡಿಕೊಂಡರು.ಒಂದು ಮನೆಯ ಅಂಗಳದಲ್ಲಿ ಮಾರುತಿ ಕಾರೊಂದು ಕಂಡು ಬಂತು. ಹಳ್ಳಿಯ ರಸ್ತೆಗಳೆಲ್ಲಾ ಸ್ವಚ್ಛವಾಗಿದ್ದವು. ಅಲ್ಲಲ್ಲಿ ದನ, ಎತ್ತು, ಮೇಕೆಗಳು ಹಾಯಾಗಿ ತಿರುಗಾಡುತ್ತಿದ್ದವು.





ಬೈಷ್ಣೋಯಿ ಹಳ್ಳಿ ತುಂಬಾ ಗಿಡ, ಪೊದೆಗಳೂ, ಕೆಲವು ದೊಡ್ಡ ಮರಗಳೂ ಇವೆ. ಅಲ್ಲಲ್ಲಿ ನೀರಿನ ಸರೋವರಗಳಿವೆ. ಇಲ್ಲಿಗೆ ತುಂಬಾ ಹಕ್ಕಿಗಳು ವಲಸೆ ಬರುತ್ತವೆಯಂತೆ. ಹಕ್ಕಿ ವೀಕ್ಷಣೆಗಾಗಿಯೇ, ಕೆಲವು ಪ್ರವಾಸಿಗರು, ಹೆಚ್ಚಾಗಿ ವಿದೇಶೀಯರು ಬರುತ್ತಾರಂತೆ! ತಿಂಗಳುಗಟ್ಟಲೆ ಇದ್ದು, ಚಿತ್ರೀಕರಿಸಿ ಹೋಗುತ್ತಾರಂತೆ. ನಾವೂ ಕೆಲವು ಸರೋವರದ ತಟಗಳಲ್ಲಿ ಹಲವು ಜಾತಿಯ ಹಕ್ಕಿಗಳನ್ನು ಕಂಡೆವು. ನಮ್ಮ ಕರ್ನಾಟಕದ ರಾಜ್ಯ ಹಕ್ಕಿ ನೀಲಕಂಠ (Indian roller)ನ್ನೂ ಕಂಡೆವು. ನಮ್ಮ ಜೀಪಿನ ಪಕ್ಕದ ತಂತಿಯ ಮೇಲೆ ಕುಳಿತು, ತುಂಬಾ ಹೊತ್ತಿನವರೆಗೆ ಸ್ವಾಗತ ಗೀತೆ ಹಾಡುತ್ತಿತ್ತು. ಅಲ್ಲಿನ ಗಿಳಿಗಳಂತೂ ತುಂಬಾ ಸುಂದರವಾಗಿದ್ದವು. ಹಸಿರು, ಕೆಂಪು ಹೀಗೆ ಮಿಶ್ರ ಬಣ್ಣದವೂ, ದಷ್ಟ ಪುಷ್ಟವೂ, ನಿರ್ಭೀತಿಯಿಂದ ಹಾರಾಡುತ್ತಲೂ ಇದ್ದವು. ಹೀಗೆ ಹಕ್ಕಿ ವೀಕ್ಷಣೆಗೆಂದು ನಿಲ್ಲಿಸಿದ ಒಂದು ಕಡೆ, ಸಣ್ಣ, ಸಣ್ಣ

ರೂಂಗಳ ಕಟ್ಟಡಗಳಿದ್ದವು. ಗೆಸ್ಟ್ ಹೌಸ್ ಇರಬಹುದೇನೊ. ಅಲ್ಲಿದ್ದ ಫಲಕವೊಂದನ್ನು ಓದುತ್ತಿದ್ದ ನನ್ನ ಮುಖದಲ್ಲಿ ಆಶ್ಚರ್ಯ ಭಾವ ಮೂಡಿತು. ಇದನ್ನು ಗಮನಿಸಿದ ಆತಿಥೇಯರು, **"ಹೌದು,** ಬೈಷ್ಣೋಯಿಗಳು ಸತ್ತ ದೇಹವನ್ನು ಸುಡುವುದಿಲ್ಲ, ಹೂಳುತ್ತಾರೆ**"** ಎಂದರು. ಇದು ಸಸ್ಯ ಸಂರಕ್ಷಣೆಗಾಗಿ. ಬರಿಯ ಒಣ, ಉದುರಿದ ಗೆಲ್ಲು. ಕಡ್ಡಿಗಳನ್ನು ಮಾತ್ರವೇ ಬಳಸುತ್ತಾರಲ್ಲದೆ, ಯಾವುದೇ ಹಸಿ ಗೆಲ್ಲನ್ನು ಅವರು ಕಡಿಯುವುದಿಲ್ಲ. ರಸ್ತೆಗೆ ಅಡ್ಡಲಾಗಿ ಬಂದ ಗೆಲ್ಲುಗಳಿಗೆ ಹಾನಿ ಮಾಡದೇ, ಜನರೇ ಬಳಸಿಕೊಂಡು, ಬಗ್ಗಿಕೊಂಡು ಹೋಗಲು ಕಲಿಯುತ್ತಾರೆ. ತಮ್ಮ ಮಕ್ಕಳೂ ಹೀಗೇ ಪ್ರಕೃತಿಗೆ ತಗ್ಗಿ, ಬಗ್ಗಿ ಹೋಗುವುದನ್ನು ಕಲಿಸುತ್ತಾರೆ.





ಇಲ್ಲಿಂದ ಮುಂದಿನದು, ನಾವು ಕಾತರದಿಂದ ಕಾದಿದ್ದ, ಕೃಷ್ಣಮೃಗಗಳ ಭೇಟಿ. ಜೀಪನ್ನು ಸಲೀಸಾಗಿ ಗದ್ದೆಗಳ ನಡುವೆ ನಡೆಸಿಕೊಂಡು ಬಂದು, ಕೃಷ್ಣಮೃಗಗಳು ಸರಿಯಾಗಿ ಕಾಣುವ ಜಾಗದಲ್ಲಿ ನಿಲ್ಲಿಸಿದರು ಹಾಗೂ ಅವುಗಳ ಬಗ್ಗೆ ವಿವರಣೆ ಇತ್ತರು.

ದೂರದಲ್ಲಿ ಒಂದು ಗುಂಪಿನಲ್ಲಿ ಒಂದೇ ಒಂದು ಕಪ್ಪು ಮೈ ಬಣ್ಣದ ಕೃಷ್ಣಮೃಗವಿದ್ದು ಅದು ಗಂಡೆಂದೂ, ಉಳಿದ ಕಂದು ಮೈ ಬಣ್ಣದ, ಚುಕ್ಕೆ ಇಲ್ಲದ ಜಿಂಕೆಗಳಂತೆ ಕಾಣುತ್ತಿರುವವು ಹೆಣ್ಣು ಕೃಷ್ಣಮೃಗಗಳೆಂದೂ, ಹೆಣ್ಣುಗಳ ಹಿಂಡಿಗೆ ನಾಯಕನಾಗಿ ಆರಿಸಲ್ಪಟ್ಟ ಒಂದು ಗಂಡಿಗೆ ಮಾತ್ರವೇ ಪ್ರವೇಶ ಎಂದು ತಿಳಿಸಿದರು. ಇನ್ನೊಂದು ಹಿಂಡು ಪೂರ್ತಿ ಗಂಡುಗಳದ್ದೇ ಆಗಿತ್ತು. ಬೇರೆ ಬೇರೆ ಪ್ರಾಯದವು, ಆಟವಾಡುತ್ತಲೂ, ಆಟದ ಜಗಳವಾಡುತ್ತಲೂ, ಮೇಯುತ್ತಲೂ, ಮಲಗಿಯೂ ಇದ್ದವು. ನಮ್ಮನ್ನು ಕಂಡು ಯಾವುದೇ ಹೆದರಿಕೆ, ಗಾಬರಿಯ ಪ್ರತಿಕ್ರಿಯೆ ನೀಡಲಿಲ್ಲ. ಕೆಲವು ಕೃಷ್ಣಮೃಗಗಳು ಹಣಾಹಣಿಯ ಅಭ್ಯಾಸದಲ್ಲಿದ್ದರೆ, ಇನ್ನೂ ಕೆಲವು ಕೊಂಬು ಬೆಳೆಸಿಕೊಂಡು ಕೊಂಬಾಕೊಂಬಿ ಆಡುತ್ತಿದ್ದವು. ಹೀಗೆ ಬಲ ಪ್ರದರ್ಶನದ ಆಟ ನಡೆಯುತ್ತಾ, ನಡೆಯುತ್ತಾ, ಒಂದು ದಿನ ನಿಜವಾದ ಹೋರಾಟವೇ ನಡೆದು, ವಿಜಯಿಯಾದ ಗಂಡು ಸ್ತ್ರೀ ಸಮುದಾಯದೆಡೆಗೆ ಸಾಗುತ್ತದಂತೆ.

ನಮ್ಮ ವಾಹನ ಬಂದು ನಿಂತಾಗ ಹೆಣ್ಣುಗಳ ಜತೆಗಿದ್ದ ಗಂಡು ಸ್ವಲ್ಪ ಜಾಗೃತವಾಯಿತು.ಅವುಗಳ ರಕ್ಷಣೆ ತನ್ನ ಹೊಣೆ ಎಂಬಂತೆ ಕಿವಿ ನಿಮಿರಿಸಿ ಅತ್ತಲಿನ ಗಂಡು ಸಮುದಾಯದವರೊಂದಿಗೆ ಕೊಂಬುಗಳ ಆಂಟೆನಾ ಹರಿಸಿ ಮೌನ ಸಂಭಾಷಣೆ ನಡೆಸಿದಂತೆ ತೋರಿತು. ಹೆಣ್ಣು ಜಿಂಕೆಗಳು ಎಲ್ಲಾ ಒಟ್ಟಿಗೆ ಸೇರಿ ಗುಂಪು ಕಟ್ಟಿಕೊಂಡು, ಜಾಗ್ರತವಾಗಿ ತಮ್ಮ ನಾಯಕನನ್ನೇ ಕಾತರದಿಂದ ನೋಡುತಿದ್ದವು. ಗಂಡು ಸಮುದಾಯದಿಂದ ನಮ್ಮ ಬಗ್ಗೆ 'ನಿರುಪದ್ರವಿಗಳು' ಎಂಬ ಸಿಗ್ನಲ್ ದೊರೆತದ್ದೇ ಎಲ್ಲರೂ ಸಮಾಧಾನದಿಂದ ಅವರವರ ಪಾಡಿಗೆ ಹೊರಟವು.



ಕೃಷ್ಣಮೃಗಗಳನ್ನು ದೇವರಿಗೆ ಸಮಾನವೆಂದು ಕಾಣುವ ಇಲ್ಲಿನ ಜನರು ಅವಕ್ಕೆ ಯಾವುದೇ ತೊಂದರೆ ಕೊಡುವುದಿಲ್ಲ ಮಾತ್ರವಲ್ಲ, ಬೇರೆಯವರು ಕೊಡುವುದನ್ನೂ ಸಹಿಸರು.ತಮ್ಮ ನಾಡಿಗೆ ಬಂದು, ತಮ್ಮ ದೇವರನ್ನೇ ಹೊಡೆದುರುಳಿಸಿದ ಎಂದು ಸಲ್ಮಾನ್ ಖಾನ್ ಬಗ್ಗೆ ಇಲ್ಲಿನವರಿಗೆ ಆಕ್ರೋಶವಿದೆ, ಅವರ ಮೇಲಿನ ಕೇಸ್ ಬಗ್ಗೆ ತುಂಬಾ ಎಚ್ಚರಿಕೆಯಿಂದ ಎಲ್ಲ ವಿವರ ಪಡಕೊಳ್ಳುತ್ತಾರೆ.

ತಮ್ಮ ಹೊಲಗಳಿಗೆ ಕೃಷ್ಣಮೃಗಗಳು ನುಗ್ಗಿದರೂ ಇಲ್ಲಿನವರು ಏನೂ ಮಾಡುವುದಿಲ್ಲ. ಸರದಿಯಲ್ಲಿ ಕಾವಲು ಕಾದು ತಮ್ಮ ಬೆಳೆಗಳನ್ನು ರಕ್ಷಿಸಲು ಮುಂದಾದರೂ, ತೊಂದರೆ ಕೊಟ್ಟು ಓಡಿಸುವುದಿಲ್ಲ. ಅವು ತಿಂದು ಉಳಿದದ್ದು ತಮ್ಮ ಪಾಲಿಗೆ ಎಂದು ತೃಪ್ತಿಪಟ್ಟುಕೊಳ್ಳುತ್ತಾರೆ. ಕಣ್ತುಂಬಾ ಕೃಷ್ಣಮೃಗಗಳನ್ನು ನೋಡಿ ಖುಶಿಪಟ್ಟು ಅಲ್ಲಿಂದ ಹೊರಟೆವು.

ಮುಂದೆ ನಮ್ಮನ್ನು ಆವೆ ಮಣ್ಣಿನ ಕೆಲಸ ಮಾಡುವ ಕಡೆಗೆ ಕರೆದೊಯ್ದರು. ಬಗೆಬಗೆಯ ಮಡಕೆ,ಕುಡಿಕೆಗಳು, ಅಲಂಕಾರಿಕ ದೀಪಗಳು, ಹಕ್ಕಿಗಳಿಗೆ ಆಹಾರ, ನೀರು ಹಾಕಲು ತಟ್ಟೆಗಳೂ ತಯಾರಾಗುತ್ತಿದ್ದವು. ಅಂಗಳದಲ್ಲಿ ಕುಲುಮೆ ಇತ್ತು. ಹದ ಮಣ್ಣು ಕಲಸಿ, ಚಕ್ರ ತಿರುಗಿಸಿ ನಮ್ಮೆದಿರೇ ಕುಡಿಕೆಗಳನ್ನು ತಯಾರಿಸಿ ತೋರಿಸಿದರು. ಅಲ್ಲಿ ನಾವು ಮಾಡುವ ವ್ಯಾಪಾರ ಅವರಿಗೆ ಬೋನಸ್.



ಇದೇ ರೀತಿ ಬಟ್ಟೆಗಳಿಗೆ ಬ್ಲಾಕ್ ಪ್ರಿಂಟ್ ಹಾಕುವುದನ್ನೂ ನೋಡಿದೆವು. ನೈಸರ್ಗಿಕ ಬಣ್ಣಗಳ ಬಳಕೆ. ಬೆಡ್ ಶೀಟ್ಗಳು, ದಿಂಬಿನ ಕವರುಗಳು ಚೆನ್ನಾಗಿದ್ದವು. ಅಲ್ಲೂ ಸ್ವಲ್ಪ ವ್ಯಾಪಾರ ನಡೆಸಿ, ವಾಪಾಸಾದೆವು. ನಾವು ಹೋದ ಕಡೆಗಳಲೆಲ್ಲಾ, ಗೋಡೆಗಳ ಮೇಲೆ ಚಿತ್ರಗಳೂ, ಪೈಂಟಿಂಗ್ ಗಳೂ ಇದ್ದವು. ಹೆಚ್ಚಿನ ಚಿತ್ರಗಳಲ್ಲಿ ನವಿಲುಗಳೂ, ಕೃಷ್ಣಮೃಗಗಳೂ ತಪ್ಪದೇ ಇರುತ್ತಿದ್ದವು. ತಲೆ ತಲಾಂತರಗಳಿಂದ ಹೀಗೆ ಪ್ರಾಣಿ ಪ್ರೀತಿ ಬೆಳೆಸಿಕೊಂಡು, ಪರಿಸರ ಉಳಿಸುವ ನೀತಿಯನ್ನು ಪಾರಂಪರಿಕವಾಗಿ ಪೋಷಿಸಿಕೊಂಡು ಬರುತ್ತಿದ್ದಾರೆ.

ಪಶು ಸಂಗೋಪನೆ ಲಾಭಕ್ಕಾಗಿ ಅಲ್ಲದೇ, ನೆಲ, ಪರಿಸರ, ಪ್ರಾಣಿಗಳೊಡನೆ ಸಮತೋಲನದ ಬದುಕು, ಇಂದಿನ ಯುಗದಲ್ಲಿ ಹೇಗೆ, ಎಷ್ಟು ಸಾಧ್ಯ? ಎಂಬ ಕುತೂಹಲ ಮೂಡಿದಲ್ಲಿ, ಅವಶ್ಯ ಭೇಟಿಕೊಡಬೇಕಾದ ಸ್ಥಳ, ಬೈಷ್ಣೋಯಿ.

ಜೋಧಪುರ





ಸನ್ ಸಿಟಿ ಎಂದು ಬೆಳ್ಳಗೆ ಬೆಳಗುವ ಜೋಧಪುರ ವಿಶಾಲ ಪಟ್ಟಣ. ದೇಶದೆಲ್ಲೆಡೆಗಳಿಂದ ವ್ಯಾಪಾರಿಗಳು ಬರುವುದರಿಂದ ರಸ್ತೆ, ರೈಲು, ವಿಮಾನಗಳ ಸಂಪರ್ಕ ಚೆನ್ನಾಗಿದೆ. ಅಂಗಡಿಗಳು, ಮಾರುಕಟ್ಟೆಗಳು, ಜನ ಜಂಗುಳಿಯಿಂದ ಗಿಜಿಗುಟ್ಟುತ್ತಿರುವ ಊರು. ಹೊರವಲಯದಲ್ಲಿ ಭಾರತೀಯ ಸೇನೆಯು ವಿಶಾಲ ಭೂಪ್ರದೇಶವನ್ನು ಹೊಂದಿದ್ದು, ದೊಡ್ಡ ದೊಡ್ಡ ಮರಗಳು, ಹಸಿರು ಗಿಡಗಳಿಂದಲೂ, ಅಗಲವಾದ ರಸ್ತೆಗಳಿಂದಲೂ ಕೂಡಿದೆ. ಬೈಷ್ಣೋಯಿಂದಹೊರಟ ನಾವು ಜೋಧಪುರ ಪ್ರವೇಶಿಸಿ, ಇಲ್ಲಿಯ ಪ್ರೇಕ್ಷಣೀಯ ಸ್ಥಳಗಳನ್ನು ನೋಡಲು ಹೊರಟೆವು.



ಮೆಹ್ರಾನ್ ಗಢ ಕೋಟೆ

ರಾಜಸ್ಥಾನದ ಐತಿಹಾಸಿಕ ನಗರಗಳಲೆಲ್ಲಾ, ಸಾಮಾನ್ಯವಾಗಿ ಒಂದೋ, ಎರಡೋ ಗುಡ್ಡಪ್ರದೇಶಗಳಿದ್ದು, ಅಲ್ಲಿ ಕೋಟೆಯ ನಿರ್ಮಾಣವಾಗಿರುತ್ತದೆ. ಕೋಟೆಯ ಒಳಗೆ ಶಸ್ತ್ರಾಸ್ತ್ರ ಸಂಗ್ರಹವೇ ಅಲ್ಲದೆ, ರಾಜ ರಾಣಿಯರ ವಾಸ ಗೃಹಗಳು, ಸಿಂಹಾಸನ, ದರ್ಬಾರ್ ಹಾಲ್ ಗಳೂ, ಸಭೆ ಸಮಾರಂಭಗಳು ನಡೆಯುವ ಜಾಗ, ಭೋಜನ ಶಾಲೆ, ಅಡಿಗೆ ಕೋಣೆಗಳು, ಶಯ್ಯಾಗೃಹಗಳು, ಸ್ನಾನಗೃಹಗಳೇ ಮುಂತಾದವುಗಳಿರುತ್ತವೆ. ಕೋಟೆಯ ಒಳಗೆ ಸಾಕಷ್ಟು ಜಾಗಗಳು, ಕಿರುದಾರಿಗಳೂ ಇದ್ದು, ಅಲ್ಲಿಯೇ ಮಂದಿರಗಳೂ, ಇಷ್ಟ ದೇವರ ಗುಡಿಗಳೂ ಇರುತ್ತವೆ. ಕೋಟೆಯಲ್ಲಿ ಅಲ್ಲಲ್ಲಿ ಎತ್ತರವಾದ ಬುರುಜುಗಳಂತಹ ಜಾಗಗಳಿದ್ದು, ಇಡೀ ಊರು ಕಾಣುತ್ತದೆ. ಫಿರಂಗಿಗಳನ್ನು ಇಟ್ಟಿರುವುದೂ ಇಲ್ಲೇ.ಕುದುರೆ ಲಾಯ, ಆನೆ ಲಾಯ ಗಳಿಗೂ ಪ್ರತ್ಯೇಕ ವ್ಯವಸ್ಥೆಗಳು ಕಾಣ ಸಿಗುತ್ತವೆ. ಈ ಊರುಗಳಲ್ಲಿ ಒಂದೋ, ಎರಡೋ ದೊಡ್ಡ ನೀರಿನ ಸರೋವರಗಳಿದ್ದು, ಆ ಜಲಾಶಯದ ಮಧ್ಯದಲ್ಲಿ ಒಂದು ಅರಮನೆಯೋ, ಮಹಲೋ ನಿರ್ಮಾಣಗೊಂಡಿರುತ್ತದೆ.ಈ ಕಟ್ಟಡವನ್ನು ಕಲಾತ್ಮಕವಾಗಿ ನಿರ್ಮಿಸಿರುತ್ತಾರೆ.ಬಿಸಿಲ ಬೇಗೆಗೆ, ರಾಜಕಾರ್ಯದಲ್ಲಿ ತಲೆಬಿಸಿಯಾದರೆ, ತಂಪಾಗಿಸುವಂತಹ ವಾತಾವರಣ ಅಲ್ಲಿರುತ್ತದೆ.ಜಲಾಶಯವನ್ನು ಹಾದು ಬರುವ ತಣ್ಣನೆ ಗಾಳಿಗೆ ಮೈಯೊಡ್ಡಿ ಕೂರಬಹುದು.ಸಾಕಷ್ಟು ಮರಗಳೂ, ಉದ್ಯಾನವನಗಳೂ ಇದ್ದು, ವಿವಿಧ ಹಕ್ಕಿಗಳಿಂದ ತುಂಬಿ, ತುಂಬಾ ಮನೋಹರವಾದ ವಾತಾವರಣ ಅಲ್ಲಿರುತ್ತದೆ. ಹೆಚ್ಚಿನ ಮಹಲ್ ಗಳು ಈಗ, ಪೂರ್ತಿ ಅಥವಾ ಭಾಗಶಃಹೋಟೆಲ್ ಗಳಾಗಿ ಪರಿವರ್ತನೆಗೊಂಡಿವೆ, ಅವುಗಳ ಮಿಕ್ಕಿದ ಭಾಗಗಳಲ್ಲಿ ವಸ್ತು ಸಂಗ್ರಹಾಲವಿರುತ್ತದೆ. ಇದು, ಜೈಪುರ, ಉದಯಪುರ, ಜೋಧಪುರ, ಜೈಸಲ್ಮೇರ್ ಗಳನ್ನೆಲ್ಲಾ ನೋಡಿದಾಗ ಕಂಡು ಬಂದ ಅಂಶ. ಇನ್ನು, ಕೋಟೆಗೆ, ಆಯಾ ಊರಿನ ಕಲ್ಲುಗಳನ್ನು ಬಳಸುವುದರಿಂದ, ಜೈಪುರದಲ್ಲಿ ಗುಲಾಬಿ ಬಣ್ಣವಾದರೆ, ಜೋಧಪುರದಲ್ಲಿ ಬಿಳಿ, ಜೈಸಲ್ಮೇರ್ ನಲ್ಲಿ ಹಳದಿ. ಅಲ್ಲಿನ ಊರಿನ ತುಂಬಾ ಅದೇ ಬಣ್ಣದ ಕಟ್ಟಡಗಳೂ, ಮನೆಗಳೂ ಜಾಸ್ತಿ ಇರುತ್ತವೆ.






ಜೋಧಪುರವನ್ನು ಪ್ರವೇಶಿಸಿದಾಗಲೇ ಮೂರು ಎತ್ತರದ ಪ್ರದೇಶಗಳಲ್ಲಿ ಸುಂದರ ಕಟ್ಟಡಗಳು ಕಾಣಿಸಿದವು. ಅವುಗಳಲ್ಲಿ ಒಂದು, ಪ್ರಸಿದ್ಧ ಮೆಹ್ರಾನ್ ಗಢ ಕೋಟೆ ಎಂಬುದು ದೂರದಿಂದಲೇ ತಿಳಿಯುತ್ತಿತ್ತು.




















ವಿದೇಶೀ ಪ್ರವಾಸಿಗರು ಹೆಚ್ಚಾಗಿ ಬರುವ ಕಾರಣ ಇಲ್ಲಿಯೂ ವ್ಯವಸ್ಥೆ ಚೆನ್ನಾಗಿದೆ. ಈ ಕೋಟೆಯೂ ಸಾಕಷ್ಟು ದೊಡ್ಡದೇ. ಒಂದು ಸುತ್ತು ಹಾಕಲು ೨ ಗಂಟೆಗಳಾದರೂ ಬೇಕು. ಕೋಟೆಯ ಒಳಗೇ ತಿಂಡಿ, ತೀರ್ಥ ಪೂರೈಸಲು ಹೋಟೆಲ್ಲುಗಳಿವೆ. ನೆನಪಿನ ಕಾಣಿಕೆ ಕೊಳ್ಳುವವರಿಗೆ ಅಂಗಡಿಗಳಿವೆ.ಇಲ್ಲಿರುವ ವಸ್ತುಗಳೆಲ್ಲಾ ದುಬಾರಿಯಾದವು. ವಿದೇಶಿ ಪ್ರವಾಸಿಗರಿಗೆಂದೇ ಇರುವಂತೆ ಕಾಣುತ್ತದೆ.



ಕೋಟೆಯ ಕೆತ್ತನೆ ತುಂಬಾ ಚೆನ್ನಾಗಿದೆ. ಮೆಹ್ರಾನ್ ಗಢ ಎಂಬುದು ಇಲ್ಲಿನ ಅರಸರ ಆರಾಧ್ಯ ದೈವ ಮಿಹಿರ ಅಂದರೆ ಸೂರ್ಯ ನನ್ನು ಸೂಚಿಸುತ್ತದಂತೆ. ೪೦೦ ಅಡಿ ಎತ್ತರದ ಗುಡ್ಡದ ಮೆಲೆ ಈ ಭದ್ರವಾದ ಕೋಟೆಯನ್ನು ಕಟ್ಟಲಾಗಿದೆ. ರಾಥೋಡ ರಾಜ ಜೋಧಾ ಎಂಬವರು ಕ್ರಿ.ಶ. ೧೪೫೯ರಲ್ಲಿ ಈ ಕೆಲಸವನ್ನು ಆರಂಭಿಸಿದರಂತೆ. ಇಲ್ಲಿನ ವಸ್ತು ಸಂಗ್ರಹಾಲಯವು ಅಪರೂಪದ ಅಂಬಾರಿಗಳು, ಪಲ್ಲಕ್ಕಿಗಳು, ಪೇಟಾಗಳು, ಶಸ್ತ್ರಾಸ್ತ್ರಗಳು, ಪೈಂಟಿಂಗ್‌ಗಳು, ವಾದ್ಯಗಳೇ. ಮುಂತಾದವುಗಳಿಂದ ಆಕರ್ಷಕವಾಗಿದೆ.

ಇಲ್ಲಿ ರಾಜಸ್ಥಾನದ ಸಾಂಪ್ರದಾಯಿಕ ಚಿತ್ರಕಲೆಗೆ ಡಿಜಿಟಲ್ ಸ್ಪರ್ಶ ಕೊಟ್ಟು, ಒಂದು ನೂತನ ಕಲಾ ಪ್ರಕಾರದ ಹೈಬ್ರಿಡ್ ಆರ್ಟ್ ಎಂಬ ಕಲಾಕೃತಿಗಳನ್ನು ಪ್ರದರ್ಶಿಸಿದ್ದಾರೆ. ನಾವು ಜೈಸಲ್ಮೇರ್ ನಲ್ಲಿ ಕೊಂಡುಕೊಂಡ ಪೈಂಟಿಂಗ್ ಗಳು ಈ ಪ್ರಕಾರದವು ಎಂದು ಅಲ್ಲಿ ಗೊತ್ತಾಯಿತು.



ರಾಜರ ದರ್ಬಾರ್ ಹಾಲ್ ತುಂಬಾ ವೈಭವೋಪೇತವಾಗಿದೆ. ಜೈಸಲ್ಮೇರ್ ಗಿಂ ಹೆಚ್ಚು ಶ್ರೀಮಂತಿಕೆಯೂ, ವೈಭವವೂ ಇರುವಂತಿದೆ.ಸಂಗೀತ ಕಲಾವಿದರಿಗೆ ತುಂಬಾ ಪ್ರೋತ್ಸಾಹವಿತ್ತಂತೆ ಕಾಣುತ್ತದೆ.ಅಲ್ಲಿನ ಪೈಂಟಿಂಗ್ ಗಳು ಈ ವಸ್ತುವನ್ನು ಹೊಂದಿವೆ. ಗೋಡೆಗೂ, ಸೂರಿಗೂ ಕನ್ನಡಿಹಚ್ಚಿ ಮಹಲನ್ನು ಅಲಂಕರಿಸಿದ್ದಾರೆ.ಸೂರಿನ ಅಲಂಕಾರಕ್ಕೆ ಚಿನ್ನ, ಮುತ್ತು, ರತ್ನಗಳನ್ನೇ ಹಚ್ಚಿ ಮನಮೋಹಕವಾಗಿ ಅಲಂಕರಿಸಿದ್ದಾರೆ.ಈ ಬೆಲೆ ಬಾಳುವ ಜಾಗವನ್ನು ಕಾಯಲು ರಕ್ಷಕ ಭಟರುಈಗಲೂ ಇದ್ದಾರೆ.ಇಲ್ಲಿರುವ ಮೊಘಲರ ಕಾಲದ ಹಲವು ವಸ್ತುಗಳು ಅವರೊಂದಿಗಿದ್ದ ಹೆಚ್ಚಿನ ಸಂಪರ್ಕಕ್ಕೆ ಸಾಕ್ಷಿಯಾಗಿವೆ.

ಜಸ್ವಂತ್ ತಾಡಾ

ಕೋಟೆಗೆ ಅನತಿ ದೂರದಲ್ಲಿ ನೀರಿನ ಸರೋವರದಹಿನ್ನಲೆಯಲ್ಲಿ ಸುಂದರವಾದ ಬಿಳಿ ಬಣ್ಣದ ಸ್ಮಾರಕ ನಿರ್ಮಾಣವಾಗಿದೆ. ಕೆತ್ತನೆಯಲ್ಲಿ ತುಂಬಾ ಸುಂದರವಾಗಿದ್ದು, ತಾಜಮಹಲನ್ನು ನೆನಪಿಸುತ್ತದೆ.ಇದು ರಾಜ ಜಸ್ವಂತ್ ಸಿಂಗ್ ರ ನೆನಪಿಗಾಗಿ ಮಾರ್ಬಲ್ ಕಲ್ಲಿನಿಂದ ಕಟ್ಟಿಸಿದ್ದು, ಸುತ್ತಲೂ ಸುಂದರ ಉದ್ಯಾನವನವಿದೆ.ನೀರಿನ ಕಾರಂಜಿಯೂ ಇದ್ದು, ಹಕ್ಕಿಗಳು ಸ್ನಾನ ಮಾಡಿ ಖುಶಿ ಪಡುವ ದೃಶ್ಯ ನಯನ ಮನೋಹರವಾಗಿತ್ತು. ಇಲ್ಲಿಯೂ ರಾವಣಹತ್ತಾ ನುಡಿಸುತ್ತಾ ವಾತಾವರಣಕ್ಕೆ ವಿಶೇಷ ಮೆರುಗು ಕೊಡುವ ಕಲಾವಿದರಿದ್ದರು.



ಜೋಧಪುರದ ಪ್ರೇಕ್ಷಣೀಯ ಸ್ಥಳಗಳಲ್ಲೆಲ್ಲಾ ಒಳ್ಳೆಯ ವ್ಯವಸ್ಥೆಯಿದೆ. ಸರಿಯಾದ ಮಾಹಿತಿ ಕೇಂದ್ರಗಳು, ಸಿಸಿಟಿವಿ ಕ್ಯಾಮರಾಗಳು, ಕಾವಲುಗಾರರೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಶುಚಿಯಾದ ಶೌಚಾಲಯದ ವ್ಯವಸ್ಥೆಯೂ ಇದೆ.





ಕೋಟೆ, ತಾಡಾ ಸುತ್ತಿ ಸುಸ್ತಾದ ನಾವು, ಪ್ರಿಯಾ ಹೋಟೆಲಿನಲ್ಲಿ ಊಟಕ್ಕೆ ಕುಳಿತೆವು. ಸುಮಾರು ಮಧ್ಯಾಹ್ನದ ೩–೩.೩೦ ಗಂಟೆಯಾಗಿತ್ತು. ಈ ಹೋಟೆಲ್ ಪ್ರಮುಖ ಮಾರುಕಟ್ಟೆಯ ಸಮೀಪವಿದ್ದುದರಿಂದಲೋ ಏನೋ ತುಂಬಾ ರಶ್ ಇತ್ತು. ಜನರೂ, ಅವರ ಮಾತುಗಳೂ, ರಸ್ತೆಯ ವಾಹನಗಳ ಸದ್ದಿನೊಂದಿಗೇ ಸ್ಪರ್ಧಿಸಿದಂತಿತ್ತು. ಇಲ್ಲಿನ ನಿವಾಸಿಗಳು ಅದೆಷ್ಟು ತಿಂಡಿಪೋತರು ಎಂದು ಅನಿಸಿತು.

ಪೇಟೆ







ಅಪ್ಪ, ಅಮ್ಮ ಬಿಟ್ಟು ಬೇರೆಲ್ಲಾ ಸಿಗುವ ಜಾಗವೆಂದರೆ ಜೋಧಪುರದ ಕ್ಲಾಕ್ ಟವರ್ ನ ಸುತ್ತ ಇರುವ ಸೆಂಟ್ರಲ್ ಮಾರ್ಕೆಟ್. ಯಾವ ಹೊತ್ತಿನಲ್ಲಿ ಹೋದರೂ ಜನ ಜಂಗುಳಿಯೇ. ಕ್ಲಾಕ್ ಟವರ್ ಹತ್ತಲು ಟಿಕೇಟ್ ಪಡೆಯಬೇಕು. ಮೇಲೆ ಹೋಗಿ ನೋಡಿದರೆ, ಇಡೀ ಮಾರ್ಕೇಟ್‌ನ ದೃಶ್ಯ ಕಾಣುತ್ತದೆ. ನೂರಾರು ಅಂಗಡಿಗಳು, ಅಷ್ಟೇ ಸಂಖ್ಯೆಯ ಬೀದಿ ಬದಿ ವ್ಯಾಪಾರಿಗಳೂ ಕಾಣಸಿಗುತ್ತಾರೆ. ಬಣ್ಣ ಬಣ್ಣದ ವಸ್ತ್ರಗಳು, ಸಿದ್ಧ ಉಡುಪುಗಳು, ಎಲೆಕ್ಟ್ರಾನಿಕ್ ವಸ್ತುಗಳು, ಮಕ್ಕಳ ಆಟಿಕೆಗಳು, ಗೃಹೋಪಯೋಗಿ ವಸ್ತುಗಳು, ಏನುಂಟು? ಏನಿಲ್ಲ?
ಹೆಣ್ಣು ಮಕ್ಕಳಿಗೆ ಬೇಕಾದ ಬಳೆ, ಬಟ್ಟೆ ಅಂಗಡಿಗಳಿಗೇ ಒಂದು ಸಾಲು, ಕ್ರಯವೂ ಕಡಿಮೆಯೇ. ಕಸೂತಿ ಹಾಕಿದ, ಕನ್ನಡಿ ಹಚ್ಚಿದ ವಸ್ತ್ರಗಳೂ, ತರತರದ ಬಳೆಗಳೂ, ಕಿವಿಯೋಲೆ, ಮೂಗುತಿ, ಗೆಜ್ಜೆ ಇನ್ನಿತರ ಆಭರಣಗಳೂ ರಾಶಿ ರಾಶಿ ಇವೆ. ಹೆಚ್ಚಿನ ಸಂಖ್ಯೆಯಲ್ಲಿ ವರ್ತಕರು ಇಲ್ಲಿಂದ ವಸ್ತುಗಳನ್ನು ಒಯ್ದು ಮುಂಬಯಿ, ಬೆಂಗಳೂರು ಮುಂತಾದ ನಗರಗಳಲ್ಲಿ ಮಾರುತ್ತಾರೆ.ಜೋಧಪುರಕ್ಕೆ ರಸ್ತೆ, ರೈಲು, ವಾಯು ಮಾರ್ಗಗಳ ಸಂಪರ್ಕ ಕಲ್ಪಿಸಿರುವುದೂ ಇದಕ್ಕೇ. ಈಗ ಬೆಂಗಳೂರಿನಿಂದ ೨೪ ತಾಸುಗಳಲ್ಲಿಜೋಧಪುರ ತಲಪುವ ಬಸ್ ವ್ಯವಸ್ಥೆಯೂ ಅರಂಭವಾಗಿದೆಯಂತೆ. ಸಹಜವಾಗಿಯೇ, ಪೇಟೆ ಸುತ್ತುವ ಭರದಲ್ಲಿ ಪರ್ಸ್ ಹಗುರವಾಯಿತು.

ಮಾಂಡೋರ್

ಪೇಟೆ ಸುತ್ತಿ ಬಂದ ನಾವು, ಅಂದು ತಂಗಬೇಕಿದ್ದಮಾಂಡೋರ್ ಗಾರ್ಡನ್ ಜಾಗಕ್ಕೆ ಬಂದೆವು. ಕೊಠಡಿ ಪಡೆದು ವಿಶ್ರಮಿಸಿ, ಸಂಜೆ ಹೋಟೆಲ್ ನಿಂದ ೫ ನಿಮಿಷಗಳ ನಡಿಗೆಯಲ್ಲಿ ಮಾಂಡೋರ್ ಉದ್ಯಾನವನಕ್ಕೆ ಬಂದೆವು. ಇದೊಂದು ದೊಡ್ಡ ಉದ್ಯಾನವನ. ಇದರ ಹೃದಯ ಭಾಗದಲ್ಲಿ ಪುರಾತನ ದೇವಾಲಯಗಳ ಸಮೂಹವಿದೆ. ಉದ್ಯಾನವನದ ತುಂಬಾ ದೊಡ್ಡ, ದೊಡ್ಡ ಮರಗಳಿದ್ದವು. ಉದ್ಯಾನ ಪ್ರವೇಶಿಸುತ್ತಲೇ, ಕೀಂಕೀಂ ಎಂಬ ಸದ್ದಿಗೆ ತಲೆ ಎತ್ತಿ ನೋಡಿದೆವು. ಮರಗಳ ತುಂಬಾ ಚಿನ್ನದ ಬಣ್ಣದ ರೋಮದ, ಉದ್ದ ಬಾಲದ ಮಂಗಗಳು. ಕೆಲವು ಅಮ್ಮಂದಿರು ಮಕ್ಕಳನ್ನು ಹೊತ್ತು ಗೆಲ್ಲಿಂದ ಗೆಲ್ಲಿಗೆ ಹಾರುತ್ತಿದ್ದವು.ಉದ್ಯಾನವನದ ತುಂಬಾ ಅವುಗಳದ್ದೇ ಕಾರುಭಾರು. ಉದ್ಯಾನವನದೊಳಗಿನ ರಸ್ತೆ ವಿಶಾಲವಾಗಿದ್ದು, ಸ್ವಚ್ಚವಾಗಿತ್ತು.ಇಲ್ಲೂ ಹಲವಾರು ದನ, ಎತ್ತುಗಳು ತಮ್ಮ ಪಾಡಿಗೆ ತಾವು ನಡೆಯುತ್ತಾ ಹೋಗುತ್ತಿದ್ದವು.ಸಂಜೆಯಾದ್ದರಿಂದ, ಮನೆಗೆ ವಾಪಾಸು ಹೋಗುತ್ತಿದ್ದವೋ ಏನೋ. ಸ್ವಲ್ಪ ದೂರ ಹೋಗುವಷ್ಟರಲ್ಲಿ, ಉದ್ಯಾನವನದ ಒಳ ರಸ್ತೆ ಬದಿಯಲ್ಲೇ, ಒಬ್ಬರು ಕ್ಯಾರೆಟ್ ತುಂಬಿರುವ ಕೈಚೀಲವನ್ನು ಕೊಡವಿ, ತಾವು ತಂದಿದ್ದ ಸುಮಾರು ೫–೬ ಕೆ.ಜಿ ಗಳಷ್ಟು, ಕೆಂಪು ಕೆಂಪು

ಬಣ್ಣದ ತಾಜಾ ಥೈಲ್ಲಿ ಕ್ಯಾರೆಟ್ ನ್ನು ನೆಲದ ಮೇಲೆ ಸುರಿದರು. ಕೀವ್ ಕೀವ್ ಎಂದು ಕೂಗುತ್ತಾ, ಒಂದೊಂದಾಗಿ ಬಂದ ಮಂಗಗಳು, ಆಗಲೇ ಯಾರೋ ಕೊಟ್ಟಿದ್ದ ಆಲೂಗಡ್ಡೆಯನ್ನು ಒಂದು ಕೈಯಲ್ಲಿ, ಈ ಕ್ಯಾರೆಟ್ ನ್ನು ಇನ್ನೊಂದು ಕೈಯಲ್ಲಿ ಹಿಡಿದು ತಿನ್ನತೊಡಗಿದವು. ಬೆಲೆಯೇರಿಕೆಯ ಈ ಕಾಲದಲ್ಲಿ ಈ ಮಂಗಗಳಿಗೂ ಹೀಗೆ ಸೇವೆ ಮಾಡುವವರಿದ್ದಾರಲ್ಲಾ! ಎಂದು ಆಶ್ಚರ್ಯವಾಯಿತು. ಊರಿನಲ್ಲಿ ಕ್ಯಾರೆಟ್ ಹಲ್ವಕ್ಕಾಗಿ ಮಾತ್ರವೇ ಈ ಕ್ಯಾರೆಟ್ ನ್ನು ಹುಡುಕಿ ಹೋಗುತ್ತಿದ್ದ ನನಗೆ, ಈ ಮನುಷ್ಯ ಹೀಗೆ ಸುರಿದು ಮಂಗಗಳಿಗೆ ಹಾಕಿದನಲ್ಲಾ! ಎಂದೆನಿಸಿತು.





ಇವ ಆಚೆ ಹೋದ ಮೇಲೆ, ಯಾರಾದರೂ ಈ ಕ್ಯಾರೆಟನೆಲ್ಲಾ ಒಟ್ಟು ಸೇರಿಸಿ ತಮ್ಮ ಮನೆಗೆ ಕೊಂಡೊಯ್ಯುವರೋ? ಎಂಬ ಸಂಶಯವೂ ಬಂತು.ಕೆಲವು ನಿಮಿಷಗಳ ಕಾಲ ಅಲ್ಲಿಯೇ ನಿಂತೆವು.ಮಂಗಗಳು ಎಷ್ಟು ತಿಂದರೂ, ಕ್ಯಾರೆಟ್ ರಾಶಿ ಕರಗಲೇ ಇಲ್ಲ. ಅಷ್ಟರಲ್ಲೇ, ಎಲ್ಲಿಂದಲೋ ಬಂದ ವ್ಯಕ್ತಿಯೊಬ್ಬರು, ತಮ್ಮ ಬ್ಯಾಗಿನಿಂದ ರೊಟ್ಟಿಗಳನ್ನು ಒಂದೊಂದಾಗಿ ತೆಗೆದು, ಅಲ್ಲಲ್ಲಿ ಬಿಸಾಡತೊಡಗಿದರು. ಎಲ್ಲೋ ಸಮಾರಂಭದಲ್ಲಿ ಉಳಿದು, ಹಾಳಾದ ರೊಟ್ಟಿಗಳೋ ಏನೋ ಎಂದು ಅಂದುಕೊಂಡೆ. ಹತ್ತಿರ ಹೋಗಿ ನೋಡಿದರೆ, ಎಲ್ಲಾ ತಾಜಾ ರೊಟ್ಟಿಗಳೇ! ಈಗ ತಾನೇ ಮಾಡಿ ಕಟ್ಟಿಕೊಂಡು ಬಂದಂತಿತ್ತು.ಸ್ವಲ್ಪ ಹೊತ್ತಿನ ಬಳಿಕ ಅವರೂ ಕೂಡಾ ತಮ್ಮ ಚೀಲದ ರೊಟ್ಟಿಗಳನ್ನೆಲ್ಲಾ ಅಲ್ಲೇ ರಾಶಿ ಹಾಕಿದರು.ಕುತೂಹಲ ತಡೆಯಲಾಗದೆ, ಅವರನ್ನು ಇದೇಕೆ? ಎಂದು ಕೇಳಿದೆವು. ಸೇವೆ! ಎಂದರು. ಎಷ್ಟು ದಿನಕ್ಕೊಮ್ಮೆ? ಎಂದು ಕೇಳಿದಾಗ, "ನಾನು ವಾರಕ್ಕೊಮ್ಮೆ, ದಿನಾ ಹಾಕುವವರೂ ಇದ್ದಾರೆ" ಎಂದರು. ಅಂತೂ ಅಲ್ಲಿನ ಜನರ ಪ್ರಾಣಿ ಪ್ರೀತಿಯನ್ನು ತುಂಬಾ ಹತ್ತಿರದಿಂದ, ಸಾಕ್ಷ್ಯಾಧಾರ ಸಹಿತವಾಗಿ ನೋಡಿದಂತಾಯಿತು. ಈ ದೃಶ್ಯಗಳನ್ನೆಲ್ಲಾ ನೋಡುತ್ತಿದ್ದ ನಮಗೆ ಕತ್ತಲಾದದ್ದೇ ಅರಿವಿಗೆ ಬರಲಿಲ್ಲ. ಲಗುಬಗೆಯಿಂದ ಮಂದಿರದ ಕಡೆಗೆ ಓಡಿದೆವು.

ಬಹಳ ಪುರಾತನದ್ದೆಂದು ಅರಿವಿಗೆ ಬರುವ ಇಲ್ಲಿನ ದೇವಾಲಯಗಳು, ಕೆತ್ತನೆಯಲ್ಲಿ ಆಕರ್ಷಕವಾಗಿವೆ. ಮೊದಲು ನೋಡಿದ್ದಂತೆ, ಕಮಾನಿನ ಆಕೃತಿಯ, ಚೂಪು ತುದಿಯ ಕೊಡೆಯಾಕಾರದ ರಚನೆಗಳು ಇಲ್ಲೂ ಇದ್ದವು. ಉಳಿದಂತೆ ಖಜುರಾಹೋ ದೇವಾಲಯಗಳನ್ನು, ಪಟ್ಟದಕಲ್ಲಿನ ದೇವಾಲಯಗಳನ್ನು ಬಹುಶಃ ಹೋಲುತ್ತದೆ ಎಂದು, ನನ್ನ, ಶಿಲ್ಪಕಲೆಯಲ್ಲಿ ಪಾಮರ ಮನಸ್ಸಿಗೆ, ಅನಿಸಿತು.

ದೇವಾಲಯ ಸಮೂಹಗಳ ಜತೆಗೇ, ಸ್ಮಾರಕ ಛತ್ರಿಗಳೂ, ವಸ್ತು ಸಂಗ್ರಹಾಲಯವೂ ಇಲ್ಲಿದ್ದರೂ, ಕತ್ತಲಾದ್ದರಿಂದ ನಮಗೆ ಒಳಗೆ ಹೋಗಲಾಗಲಿಲ್ಲ.





ಉಮ್ಮೈದ್ ಭವನ
(ದಿನ ಆರು)



ಪ್ರವಾಸದ ಕೊನೆಯ ದಿನ, ಉಮ್ಮೈದ್ ಭವನಕ್ಕೆ ಹೋದೆವು. ಜೋಧಪುರ ಪೇಟೆಯ ಜನ ಜಂಗುಳಿಯಿಂದ ದೂರ ಸಾಗಿ, ಏರಿನ ರಸ್ತೆಯೊಂದರಲ್ಲಿ ಕಾರು ಹೋಗತೊಡಗಿತು. ಇದ್ದಕ್ಕಿದ್ದಂತೆ, ಆಧುನಿಕ, ಸುಸಜ್ಜಿತ ಶ್ರೀಮಂತರ ಬಂಗಲೆಗಳು ಕಾಣತೊಡಗಿದವು. ಅಲ್ಲಲ್ಲಿ ಎತ್ತರದ ಫ್ಲಾಟುಗಳ ನಿರ್ಮಾಣವೂ ನಡೆಯುತ್ತಲಿತ್ತು. ಹೆಚ್ಚಿನ ಕಟ್ಟಡಗಳೂ ನಸು ಹಳದಿ ಬಣ್ಣದ ಕಲ್ಲುಗಳಿಂದ ನಿರ್ಮಾಣವಾಗುತ್ತಿದ್ದವು. ಇದೊಂದು ಶ್ರೀಮಂತ ಬಡಾವಣೆ ಎಂಬ ಭಾವ ಮೂಡುವಂತಿತ್ತು.ಗುಡ್ಡವನ್ನು ಏರಿ ಬಂದ ಬಳಿಕ, ಅಗಲವಾದ ರಸ್ತೆಯಲ್ಲಿ ಹಾದು, ಪಾರ್ಕಿಂಗ್ ಜಾಗದಲ್ಲಿ ಕಾರು ನಿಲ್ಲಿಸಿದರು ಹೇಮ್ ಜೀ. ಇಲ್ಲಿ ಕೆಲವು ಎತ್ತರದ ಮರಗಳೂ ಇದ್ದವು. ಪ್ರವಾಸಿಗರ ಸಂಖ್ಯೆ ಅಷ್ಟಿರಲಿಲ್ಲ. ಉಮ್ಮೈದ್ ಭವನ ಒಂದು ದೊಡ್ಡ



ಆಧುನಿಕ ಅರಮನೆ. ಜೋಧಪುರದ ರಾಜರಾಗಿದ್ದ ರಾಜಾ ಉಮ್ಮೈದ್ ಸಿಂಗ್ ರು ೧೯೨೯ ರಲ್ಲಿ ಇದರ ಕಟ್ಟುವಿಕೆಯನ್ನು ಅರಂಭಿಸಿದರು. ಇದನ್ನು ಚಿತ್ತಾರ್ ಎಂಬ ಕಲ್ಲುಗಳಿಂದ ಕಟ್ಟಿರುವುದರಿಂದ ಚಿತ್ತಾರ್ ಅರಮನೆ ಎಂಬ ಹೆಸರಿನಿಂದಲೂ ಕರೆಯುತ್ತಿದ್ದರಂತೆ.



ಈಗ, ಉಮ್ಮೈದ್ ಭವನದಲ್ಲಿ ಒಟ್ಟು ಮೂರು ಭಾಗಗಳಿವೆ. ಒಂದು ಭಾಗದಲ್ಲಿ ಉಮ್ಮೈದ್ ಸಿಂಗ್ ರ ಮೊಮ್ಮಗನಾದ ಗಜ ಸಿಂಗ್ ರು ಈಗಲೂ ವಾಸಿಸುತ್ತಿದ್ದಾರೆ, ಇನ್ನೊಂದು ಭಾಗವನ್ನು ತಾಜ್ ಹೋಟೆಲ್ಲಾಗಿ ಪರಿವರ್ತಿಸಿದ್ದಾರೆ. ಭವನದ ಮೊದಲ ಒಂದು ಭಾಗವನ್ನು ಮ್ಯೂಸಿಯ್ಂ ಆಗಿ ಸಾರ್ವಜನಿಕರಿಗೆ ನೋಡಲು ವ್ಯವಸ್ಥೆ ಮಾಡಿದ್ದಾರೆ.ಆ ಭವ್ಯ ಕಟ್ಟಡಕ್ಕೆ ಪ್ರವೇಶಿಸಲು ಸುಮಾರು ೫೦ ಅಡಿ ದೂರದಲ್ಲೇ ಟಿಕೆಟ್ ಕೌಂಟರ್ ವ್ಯವಸ್ಥೆ ಇದೆ.ಪ್ರವೇಶಕ್ಕೂ, ಕ್ಯಾಮೆರಾಕ್ಕೂ ಪ್ರತ್ಯೇಕ, ಪ್ರತ್ಯೇಕ ಶುಲ್ಕ ಕೊಟ್ಟು, ರಸೀದಿ ಪಡೆಯಬೇಕು.ಇಲ್ಲಿನ ವ್ಯವಸ್ಥೆಯೂ ಉತ್ತಮವಾಗಿದ್ದು, ರೆಡಿಮೇಡ್ ತಿಂಡಿ ಕೌಂಟರ್ ಗಳೂ, ಶೌಚಾಲಯದ ವ್ಯವಸ್ಥೆಯೂ ಇದೆ. ಗಜ ಸಿಂಗ್ ರು ವಾಸಿಸುವ ಜಾಗಕ್ಕೆ ಅನುಮತಿ ಇಲ್ಲದೆ ಪ್ರವೇಶವಿಲ್ಲ. ಭವನದ ಎದುರಿನಲ್ಲಿ ಹಸಿರು ಹುಲ್ಲು ಹಾಸಿದ್ದು, ಅದಕ್ಕೆ ಧಾರಾಳ ನೀರು ಉಣಿಸುತ್ತಿರುವಂತೆ ಕಂಡಿತು. ಭವನದಲ್ಲಿ, ಜೋಧಪುರ ರಾಜವಂಶದ ಸಂಗ್ರಹಗಳೂ, ಚಿತ್ರಗಳೂ, ಸಿಂಹಾಸನ, ಶಸ್ತ್ರಾಸ್ತ್ರಗಳೂ, ಬಗೆ ಬಗೆಯ ತೊಟ್ಟಿಲುಗಳ ಸಂಗ್ರಹವೂ ಇವೆ. ರಾಜಸ್ಥಾನೀ ಪೇಟ, ಬೂಟು ಧರಿಸಿದ, ಮೀಸೆ ತಿರುವುತ್ತಾ ಕುಳಿತ ರಜಪೂತ ಕಾವಲುಗಾರರೂ ಇದ್ದಾರೆ.ಇಷ್ಟರೊಳಗೇ ಸಾಕಷ್ಟು ಸಂಗ್ರಹಾಲಯಗಳನ್ನು ನೋಡಿದ್ದವಾದ್ದರಿಂದ, ಬೇಗ ಬೇಗನೆ ನೋಡಿ ಮುಗಿಸಿದೆವು. ಈ ಭವನದ ಎದುರಿಗೆ ವಿಂಟೇಜ್ ಕಾರುಗಳ ಸಂಗ್ರಹಾಲಯವಿದೆ. ಹಳೆ ಕಾರುಗಳ ಇದಿರು ನಿಂತು, ಫೋಟೋ ಕ್ಲಿಕ್ಕಿಸಿದೆವು. ನನಗಂತೂ ಈ ವಾಹನಗಳ ಬಗ್ಗೆ ಏನೂ ಕುತೂಹಲವಿರಲಿಲ್ಲ. ಒಟ್ಟಿನಲ್ಲಿ, ಉಮ್ಮೈದ್ ಭವನದಲ್ಲಿ ಉಮೇದು ಕೊಡುವಂತಹದ್ದು ಏನೂ ಇರದಿದ್ದರೂ, ಜೋಧಪುರಕ್ಕೆ ಬಂದು ಬಾಕಿ ಮಾಡಿದೆವಲ್ಲಾ ಎಂದು ಅನಿಸಬಾರದು ಮತ್ತು ಈಗಿನ ಶ್ರೀಮಂತರ ಜಾಗ ಹೇಗಿದೆ ಎಂಬ ಕುತೂಹಲ ತಣಿಸಿಕೊಳ್ಳಲು ಒಂದು ಭೇಟಿ ನೀಡಬಹುದು.





ಉಮ್ಮೈದ್ ಭವನ ಮುಗಿಸಿ, ಕಾರು ಹತ್ತಿ ಸಮಯ ನೋಡಿದರೆ, ೧೦ ಗಂಟೆಯಾಗಿತ್ತಷ್ಟೇ.ಇನ್ನೂ ಕೈಯಲ್ಲಿ ಎರಡೂವರೆ ಗಂಟೆಗಳ ಅವಕಾಶವಿತ್ತು.ಇದನ್ನೂ ಸಿಹಿಯಾಗಿಯೇ ಕಳೆಯಬೇಕೆನಿಸಿ, ಸಿಹಿ ತಿಂಡಿಗಳ ಬೇಟೆಗೆ ಹೊರಟೆವು.

ಮಂಗಳಗಾನ

ಇದಕ್ಕೇ ಕಾದಿದ್ದವರಂತೆ ಹೇಮ್ ಜೀಯವರು 'ಜೋಧ್ ಪುರ್ ಸ್ವೀಟ್ಸ್' ಎಂಬಲ್ಲಿಗೆ ಕರೆದುಕೊಂಡು ಹೋದರು.ಈ ಅಂಗಡಿಯ ಪಕ್ಕದಲ್ಲೇ ಇರುವ ಜಿಪ್ಸಿ ಹೋಟೆಲಿನಲ್ಲಿ ಒಳ್ಳೆಯ ಊಟವೂ ಸಿಗುತ್ತದೆ ಎಂದು ತಿಳಿಸಿದರು.

ಅಂಗಡಿ ಹೊಕ್ಕರೆ ತರತರದ ತಿನಿಸುಗಳು, ಒಂದಕ್ಕಿಂತೆ ಒಂದು ಬಾಯಲ್ಲಿ ನೀರೂರಿಸುವಂತಿದ್ದವು. ಸ್ವಚ್ಛ, ಆಕರ್ಷಕ ರೀತಿಯಲ್ಲಿ ಸಿಹಿ ತಿಂಡಿಗಳನ್ನು ಜೋಡಿಸಿಟ್ಟಿದ್ದರು. ಜಾಮೂನು ತರದ ಸ್ವೀಟ್ ಗಳೂ, ಹಾಲಿನ ವಿವಿಧ ತಿಂಡಿಗಳೂ, ಬೇಳೆ,ಡ್ರೈಫ್ರುಟ್ ಗಳ ಖಾದ್ಯಗಳೂ ಇದ್ದವು.ಸಿಹಿಮೂತ್ರ ಕಾಯಿಲೆಗೆ ಭಾರತ ರಾಜಧಾನಿಯಾದರೆ, ಅದರ ಸಿಂಹಾಸನಾಧೀಶ್ವರ ಸ್ಥಾನಕ್ಕೆ ಜೋಧಪುರವೇ ಸೈ ಎಂದೆನಿಸಿತು.

ಪಕ್ಕದಲ್ಲೇ ಖಾರ ತಿಂಡಿಗಳ ಇನ್ನೊಂದು ಕೌಂಟರ್ ಕೂಡಾ ಇತ್ತು. ಇಲ್ಲೂ ಅಷ್ಟೆ, ತರತರದ ಮಿಕ್ಸ್ಚರ್‌ಗಳೂ, ಚಿಪ್ಸ್, ಚಟ್ ಪಟ್ ಗಳೂ ಇದ್ದವು. ಮಾರವಾಡಿ ಮಿಕ್ಸ್ಚರ್‌ಎಂಬ ಹೆಸರು ಹಿಡಿಸಿತಾಗಿ ಅದನ್ನೇ ಕೊಂಡೆವು. ಸಿಹಿ ತಿಂಡಿಗಳ ಆಯ್ಕೆಯಲ್ಲಿ ಸೋತು, ಅಂಗಡಿಯವನ ಸಹಾಯ ಯಾಚಿಸಿದೆವು. ಇಲ್ಲಿಯ ಸ್ಪೆಶಲ್ ಏನು? ಎಂದು ಕೇಳಲು ಹಲವು ಹೆಸರುಗಳನ್ನು ಹೇಳಿ ಆ ಖಾದ್ಯಗಳನ್ನು ತೋರಿಸಿದರು. ಅವುಗಳಲ್ಲಿ ಬೇಳೆಗಳ ಬರ್ಫಿ ಆರೋಗ್ಯಕ್ಕೆ ಅಡ್ಡಿಯಿಲ್ಲ ಎಂಬ ಸರ್ಟಿಫಿಕೇಟನ್ನು ನಾವೇ ಕೊಟ್ಟುಕೊಂಡೆವು. ಇಷ್ಟಾಗುವಾಗ ಸಮಯ ೧೧.೪೦ ಎಂದು ಗಡಿಯಾರ ಸೂಚಿಸುತ್ತಿತ್ತು. ಇನ್ನೂ ಒಂದು ಗಂಟೆ ಸಮಯವಿದೆ, ಊಟದ ವ್ಯವಸ್ಥೆಗೆ ಏನಾದರೂ ಮಾಡುವಾ ಎಂದು ಪಕ್ಕದ 'ಜಿಪ್ಸಿ ಡೈನಿಂಗ್ ಹಾಲ್'ಗೆ ಹೋದೆವು. ಮೆಟ್ಟಲು ಹತ್ತಿ ಹೋಗುತ್ತಿದ್ದಂತೇ, ಮಿನಿ ಮೀಲ್ ಪ್ಯಾಕ್ ಎಂಬ ಬೋರ್ಡ್, ಚಿತ್ರ ಸಮೇತ ಕಣ್ಣಿಗೆ ಬಿತ್ತು. ಇದನ್ನೇ ಪಾರ್ಸೆಲ್ ನಂತೆ ಕೊಂಡು ಹೋದರೆ ಹೇಗೆ? ಏರ್ ಪೋರ್ಟ್ ನಲ್ಲಿ ನಿಧಾನಕ್ಕೆ ತಿಂದರಾಯಿತು ಎಂದುಕೊಂಡು ಆರ್ಡರ್ ಕೊಟ್ಟೆವು. ಹಣ ಪಾವತಿಸಿ ಕೂಡಲೇ ಪಾರ್ಸೆಲ್ ಪಡಕೊಂಡು ಬರುವುದಷ್ಟೇ ಕೆಲಸ ಎಂದು ಕೌಂಟರ್‌ಗೆ ಹೋದರೆ, ಪಾರ್ಸೆಲ್ ೧೨ ಗಂಟೆಗೆ ಕೊಡುತ್ತೇವೆ, ಕುಳಿತುಕೊಳ್ಳಿ ಎಂದರು ಮ್ಯಾನೇಜರ್. ನಾವು ಸರಿ ಎಂದು ಮೂರು ಪಾರ್ಸೆಲ್‌ಗೆ ಹಣ ಪಾವತಿಸಲು ಮುಂದಾದೆವು. ನಾವು ದುಡ್ಡಿನ ವ್ಯವಹಾರ ಮುಗಿಸಿ, ಪಾರ್ಸೆಲ್ ಗೆ ಕಾಯುತ್ತಾ ಕೂರುವ ಎಂದುಕೊಂಡರೆ, ಆ ಮ್ಯಾನೇಜರ್ ಹಣ ತೆಗೆದುಕೊಳ್ಳಲು ತಯಾರಿರಲಿಲ್ಲ. ನಮಗಿದು ವಿಚಿತ್ರವೆನಿಸಿತು. ಸರಿಯಾಗಿ ೧೨ ಗಂಟೆಗೆ, ದೇವರ ಪಟಕ್ಕೂ, ಹೋಟೆಲಿನ ಸ್ಥಾಪಕ ದಂಪತಿಯ ಪಟಕ್ಕೂ, ಕುಂಕುಮ ಹಚ್ಚಿ, ಹೂ ಇಟ್ಟು, ಆರತಿ ಎತ್ತಿ ಕೈ ಮುಗಿದ ಬಳಿಕವಷ್ಟೇ, ಅವರು ಕೌಂಟರ್ ಬಾಗಿಲು ತೆಗೆದು ಹಣ ತೆಗೆದುಕೊಂಡದ್ದು! ಅದಾದ ೨ ನಿಮಿಷಗಳಲ್ಲೇ ೩ ಊಟದ ಪಾರ್ಸೆಲ್ ಗಳನ್ನು ಕೈಗಿತ್ತರು. ಯಾವುದೇ ಕ್ಯಾರಿ ಬ್ಯಾಗ್ ಇಲ್ಲ. ಪಾರ್ಸೆಲ್ ಗಳನ್ನು ಟ್ರೇ ಗಳಂತೆ ಹಿಡಕೊಂಡು ಬಂದೆವು.ಇದನ್ನು ಹೀಗೇ ಪ್ರದರ್ಶನ ಮಾಡುತ್ತಾ ಏರ್ ಪೋರ್ಟ್ ನ ಒಳಗೆ ಹೋಗುವುದು ಹೇಗೆ? ಎಂಬ ಸಮಸ್ಯೆ ಎದುರಾಯಿತು.

ನನ್ನ ಬಳಿ ಇದ್ದ ಇತರ ವಸ್ತುಗಳನ್ನು ಬೇರೊಂದು ಬ್ಯಾಗಿಗೆ ಸೇರಿಸಿ, ಪ್ಲಾಸ್ಟಿಕ್ ಕವರನ್ನು ತಯಾರು ಮಾಡಿಕೊಂಡು, ಈ ಮೂರೂ ಊಟದ ತಟ್ಟೆಗಳನ್ನು ಅದರಲ್ಲಿ ತುರುಕಿಸುವ ಗೌಜಿನಲ್ಲಿ ತಟ್ಟೆಗಳು ಅಡಿಮೇಲಾದವು.ಊಟಕ್ಕೆ, ಸಬ್ಜಿ, ಸಾಂಬಾರು, ಜಾಮೂನು ಮುಂತಾದ ದ್ರವಕಾರೀ ಪ್ರದಾರ್ಥಗಳೂ ಇದ್ದು, ಅವುಗಳ ಮೇಲಿನಿಂದ ಪ್ಲಾಸ್ಟಿಕ್ ಹೊದಿಕೆಯೊಂದನ್ನು ಎಳೆದು ಕೊಟ್ಟಿದ್ದರು. ಇಡೀ ತಟ್ಟೆ ಉಲ್ಟಾ ಆದಾಗ ಫಜೀತಿಯಾಯಿತೆಂದುಕೊಂಡೆ. ಇನ್ನು ಕಾರಲ್ಲಿ ಹೋಗುವಾಗ ಎಷ್ಟು ಚೆಲ್ಲುತ್ತದೋ, ಸಿಹಿ–ಖಾರ ಎಲ್ಲಾ ಬೆರಕೆಯಾಗಿ, ಯಾವ ರುಚಿಯಲ್ಲಿ, ಯಾವ ರೂಪದಲ್ಲಿ ಏನೇನು ಉಳಿಯುತ್ತದೋ, ದೇವರೇ ಬಲ್ಲ ಎಂದು ನನ್ನ ಐಡಿಯಾಕ್ಕೆ ನಾನೇ ಹಳಿದುಕೊಂಡೆ.ಏನಾದರಾಗಲಿ, ಒಮ್ಮೆ ತುರುಕಿಸಿಯಾಯಿತಲ್ಲಾ, ಇನ್ನು ತೆಗೆಯುವಾಗ ಅಲ್ಲವೇ ಯೋಚನೆ ಎಂದು ರಸ್ತೆಯ ಎರಡೂ ಕಡೆ ಕಣ್ಣು ಹಾಯಿಸುತ್ತಾ ಮಂಗಳಗಾನವನ್ನು ಗುನುಗಲು ಆರಂಭಿಸಿದೆ.

ಕಾರು ನಗರದ ನಿಬಿಡತೆಯಿಂದ ಹೊರಬಂದು, ವಿಶಾಲ ರಸ್ತೆಗಳಲ್ಲಿ ಸಾಗಿ ಬರುತ್ತಿದ್ದಂತೆ, ಆಹ್! ಆ ಸುಂದರ ಚಿತ್ರಗಳ ಮನ ಸೆಳೆಯುವ ಕಂಪೌಂಡ್ ಬಂದೇ ಬಂತು! "ಫೋಟೋ ತೆಗೀರಿ, ಫೋಟೋ ತೆಗೀರಿ" ಎಂದು ಗಂಡನಿಗೂ, ಮಗನಿಗೂ ಎಚ್ಚರಿಸಿದೆ. ಈಗಲೂ ಇಬ್ಬರೂ ಪೆಚ್ಚು ಮುಖದಲ್ಲಿ 'ಕ್ಯಾಮೆರಾ ಥಿಕ್ಕಿಯಲ್ಲಿದೆ' ಎಂದರು. ಜಿಪ್ಸಿ ಹೋಟೆಲಿನ ಊಟದ ಪ್ಯಾಕಿಂಗ್ ಗಲಾಟೆಯಲ್ಲಿ ಅವರ ಬ್ಯಾಗುಗಳೆಲ್ಲಾ ಕಾರಿನ ಹಿಂಭಾಗಕ್ಕೆ ಸ್ಥಳಾಂತರಗೊಂಡಿದ್ದವು. ನನಗೆ ಬೇಕಾದ್ದು ತೆಗೆಯಲಿಕ್ಕೆ ನಿಮಗಿಬ್ಬರಿಗೂ ಬರುವುದಿಲ್ಲ ಎಂದು ಬೈದೆ.

ಏರ್ ಪೋರ್ಟ್ ತಲುಪಿ, ನಮ್ಮ ಸಮರ್ಥ ಸಾರಥಿಯಿಂದ ಬೀಳ್ಕೊಂಡೆವು.ಲಗೇಜುಗಳ ವಿಲೇವಾರಿ ಮಾಡಿ, ಜಿಪ್ಸಿ ಹೋಟೆಲಿನ ಪ್ಯಾಕನ್ನು ಹೇಗಪ್ಪಾ ಹೊರ ತೆಗೆಯುವುದು? ಈ ಥಳ ಥಳ ಹೊಳೆಯುವ ಏರ್ ಪೋರ್ಟ್ ನ ನೆಲದ ಮೇಲೆ ಚೆಲ್ಲಿದರೆ ಏನು ಗತಿ? ಎಂಬ ಹೆದರಿಕೆಯಿಂದಲೇ ಮೆಲ್ಲಗೆ ಪ್ಲಾಸ್ಟಿಕ್ ತಟ್ಟೆಗಳನ್ನು ಒಂದೊಂದಾಗಿ ಹೊರತೆಗೆದೆ.ಆಶ್ಚರ್ಯವೆಂದರೆ, ಒಂದು ತೊಟ್ಟು ಸಾಂಬಾರ್ ಆಗಲೀ, ಜಾಮೂನಿನ ಸಕ್ಕರೆ ಪಾಕದ ನೀರಾಗಲೀ, ಹೊರಚೆಲ್ಲಿರಲಿಲ್ಲ. ಅಷ್ಟು ಬಿಗಿಯಾಗಿ ಹೊದಿಕೆಯನ್ನು ಎಳೆಯಲಾಗಿತ್ತು.ತೊಂದರೆ ಆದದ್ದು ಎಂದರೆ, ಆ ಹೊದಿಕೆಯನ್ನು ಬಿಚ್ಚಿ ಹೊರ ತೆಗೆಯಲು ೧೦ ನಿಮಿಷಗಳೇ ಹಿಡಿದವು. ಅಷ್ಟರಲ್ಲಾಗಲೇ ಭದ್ರತಾ ತಪಾಸಣೆಯ ಘೋಷಣೆಗಳಾದವು.ನಾನೂ, ಸುಧನ್ವನೂ, ಲಗುಬಗೆಯಲ್ಲಿ ಊಟದ ಶಾಸ್ತ್ರವನ್ನು ಮಾಡಿದೆವು.ನಮ್ಮಿಬ್ಬರ ತಟ್ಟೆಗಳಲ್ಲಿದ್ದ, ಮೃದುವಾದ ಫುಲಕಾಗಳನ್ನು ಮತ್ತೆ ಪ್ಯಾಕ್ ಮಾಡಿ ಸುಧನ್ವನಿಗೆ ಕೊಟ್ಟೆ. ಹಸಿವಾದಾಗ ಇದನ್ನು ತಿನ್ನು, ಹಣ್ಣು ತಿನ್ನು, ನೀರು ಕುಡಿ, ಬೇರೆಂತ ಬೇಡ ಎಂದು ಆದೇಶವಿತ್ತೆ.



ಮನೋಹರ್ ಮಾತ್ರ, ತಮ್ಮ ಕ್ಯಾಮೆರಾದಲ್ಲಿ ಜಿಪ್ಸಿ ಊಟವನ್ನು ಸೆರೆಹಿಡಿದೇಊಟ ಆರಂಭಿಸಿದ್ದು. ಊಟ ಮುಗಿಸಿ ನೋಡುತ್ತೇವೆ, ಒಂದು ಕಂದು ಬಣ್ಣದ ಕಾಗದದ ಪೊಟ್ಟಣವಿತ್ತು. ತೆರೆದು ನೋಡಲು ಅದರಲ್ಲಿ ಸುಟ್ಟಿದ್ದ ಲಿಜ್ಜತ್ ಪಾಪಾಡ್ ಇತ್ತು. ಅಪ್ಪಚ್ಚಿಯಾಗಬಾರದೆಂದು ಅದನ್ನು ಪ್ರತ್ಯೇಕವಾಗಿ ಪ್ಯಾಕ್ ಮಾಡಿದ್ದರು. ಮನೋಹರ್ ಆವಾಗಲೇ ಊಟ ಮುಗಿಸಿದ್ದರಿಂದ ಅವರ ಕ್ಯಾಮರಾದಲ್ಲಿ ಹಪ್ಪಳ ಬರಲೇ ಇಲ್ಲ. ಇದು ಅವರಿಗೆ ಬಹಳ ಬೇಸರದ ಸಂಗತಿಯಾಯಿತು. ಛೆ! ಜಿಪ್ಸಿ ಊಟವನ್ನು ಸಂಪೂರ್ಣವಾಗಿ ಕ್ಲಿಕ್ಕಿಸಲಾಗಲಿಲ್ಲವಲ್ಲಾ ಎಂದು.

ವಿಮಾನ ಹತ್ತಿ ವಾಪಾಸು ಬರುವಾಗ ಗಗನ ಸಖಿಯ ಯಾವ ಮುಗುಳ್ನಗುವೂ ನಮ್ಮನ್ನು ವಂಚಿಸಲಿಲ್ಲ. ಗಟ್ಟಿ ನಿರ್ಧಾರ ಮಾಡಿದ್ದ ನಾವು ಅವಳು ತೋರಿದ ತಿಂಡಿಗಳನ್ನೆಲ್ಲಾ ಬೇಡವೇ ಬೇಡ ಎಂದು ಮುಕ್ಕೊರಲಿನಿಂದ ತಿಳಿಸಿದೆವು. ಮತ್ತೊಮ್ಮೆ ನಮ್ಮ ಆರೋಗ್ಯಕರ ನಿರ್ಧಾರದ ಬಗ್ಗೆ ಹೆಮ್ಮೆ ಪಟ್ಟುಕೊಂಡೆವು. ಮುಂಬಯಿಯಲ್ಲಿ ಸುಧನ್ವನನ್ನು ಬೀಳ್ಕೊಡುವಾಗ, ಬ್ಯಾಗ್ ನಲ್ಲಿರುವ ಫುಲಕಾಗಳ ಬಗ್ಗೆ ಮತ್ತೆ ನೆನಪಿಸಿದೆ.



ಮಂಗಳೂರಿಗೆ ಬಂದು, ರಾಜಸ್ಥಾನದ ಮೆಲುಕು ಹಾಕುತ್ತಾ, ಚಿತ್ರಗಳನ್ನು ನೋಡುತ್ತಾ, ಅಲ್ಲಿನ ಬಣ್ಣ ಬಣ್ಣದ ನೆಲದ, ಚಿತ್ರ ಚಿತ್ತಾರ ಸಂಸ್ಕೃತಿಯ, ಸರಳ, ಮುಗ್ಧ, ಪಶು–ಪಕ್ಷಿ, ಪರಿಸರ ಪ್ರೀತಿಯ ಜನರನ್ನು ನೆನಪಿಸುವಾಗ, ಆರ್ಮಿ ಕಂಪೌಂಡ್‌ನಲ್ಲೇ ಉಳಿದ, ಸೆರೆ ಹಿಡಿಯಲಾಗದ ಭಿತ್ತಿ ಚಿತ್ರಗಳ ನೆನಪಾಗುತ್ತದೆ. ನನ್ನ ಈ ಸಣ್ಣ ಆಸೆಯನ್ನು ಪೂರೈಸಲಾಗದ ಗಂಡನನ್ನು ಈ ಬಗ್ಗೆ ಕೆಣಕಿದರೆ, ಕ್ಯಾಮೆರಾ ಸಮೇತ' ಮತ್ತೆ ಜೋಧಪುರಕ್ಕೆ ನಾನು ರೆಡಿ' ಎಂಬ ಉತ್ತರ ಥಟ್ ಅಂತ ಹೇಳುತ್ತಾರೆ!

(ಮುಗಿಯಿತು)